THE BOOK WAS DRENCHED

UNIVERSAL
LIBRARY
OU_200568
UNIVERSAL
LIBRARY

ಕನ್ನಡದ ಬಾವುಟ

ಕರ್ನಾಟಕ ಸಾಹಿತ್ಯ ಪರಿಷತ್ತು
ಶ್ರೀ ಕೃಷ್ಣರಾಜೇಂದ್ರ ಪರಿಷನ್ಮಂದಿರ
ಚಾಮರಾಜಪೇಟೆ, ಬೆಂಗಳೂರು

೧೯೩೮ ಒಂದು ರೂಪಾಯಿ

ಬೆಂಗಳೂರು ಪ್ರೆಸ್
ಮೈಸೂರು ರೋಡ್, ಬೆಂಗಳೂರು ೨೬



ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರವರಾದ

ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ.

ಮಹಾಸ್ವಾಮಿಯವರು

ಕರ್ನಾಟಕ ಸಾಹಿತ್ಯ ಪರಿಷತ್ತಿನ ಮಹಾಪೋಷಕರು

*

ಮೈಸೂರು ಸಂಸ್ಥಾನದ

ಶ್ರೀಮನ್ ಮಹಾರಾಜರವರಾದ

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್

ಜಿ.ಸಿ.ಎಸ್.ಐ., ಜಿ.ಬಿ.ಇ. ಮಹಾಸ್ವಾಮಿಯವರಿಗೆ

ಈ ಗ್ರಂಥವನ್ನು ಭಕ್ತಿಯಿಂದ

ಒಪ್ಪಿಸಿದೆ

*

ಮೈಸೂರು ಸಂಸ್ಥಾನದ ಶ್ರೀಮದ್ ಯುವರಾಜರವರಾದ

ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್

ಜಿ.ಸಿ.ಐ.ಇ. ಮಹಾಸ್ವಾಮಿಯವರು

ಕರ್ನಾಟಕ ಸಾಹಿತ್ಯ ಪರಿಷತ್ತಿನ ಪೋಷಕರು ಮತ್ತು ಅಧ್ಯಕ್ಷರು

ಮುನ್ನುಡಿ

ಕನ್ನಡನಾಡು ಎಚ್ಚತ್ತು ಕೂಡಿಕೊಳ್ಳುತ್ತಿರುವ ದೊಡ್ಡ ಸಡಗರದಲ್ಲಿ ಕನ್ನಡ ನಾಡಿನ ಹೆಮ್ಮೆಯನ್ನು ಹಾಡಿರುವ ಕವಿಗಳಿಂದ ಆಯ್ದ ತಿರಳೊಂದನ್ನು ಹಂಚಬೇಕೆಂಬ ಬಯಕೆ ಬಹು ಕಾಲದಿಂದ ಕಡೆದು ಕುದಿಯುತ್ತಿತ್ತು. ಕನ್ನಡ ತಾಯ ಪಾದದಲ್ಲಿ ಹಿಂದಿನ ಹಿರಿಯ ಕವಿಗಳೂ ಈಗಿನ ಕವಿಗಳೂ ಒಪ್ಪಿಸಿದ ಹೂವುಗಳನ್ನು ಬಾಚಿ ತೆಗೆದು, ಮೂವತ್ತು ವರ್ಷಗಳಿಂದ ನನ್ನ ಎದೆಯಲ್ಲಿ ತುಂಬಿ ಚಿಮ್ಮುತ್ತಿದ್ದುವುಗಳನ್ನು ಇಲ್ಲಿ ದಂಡೆಗಟ್ಟಿದ್ದೇನೆ. (ನನ್ನವೂ ಕೆಲವು ಹೂವನ್ನು ನನ್ನೊಡನೆ ಈ ಆಸೆಯನ್ನು ಕಾರ್ಯರೂಪಕ್ಕೆ ತಂದ ನನ್ನ ಕೆಳೆಯರು ಇದರಲ್ಲಿ ಸೇರಿಸಿದ್ದಾರೆ. ಅದು ಅವರ ಪ್ರೀತಿ.) ತಾಯಡಿಯ ಹೂವುಗಳಿವು: ನಾನು ನಾರು: ಕನ್ನಡದ ಸತ್ತ್ವವೂ ತಿರುಳೂ ಪ್ರೋಣಿಕೆಯ ಕಣ್ಣು. ಕನ್ನಡಿಗರ, ಅದರಲ್ಲೂ ಮಕ್ಕಳ, ಹೆಣ್ಣುಮಕ್ಕಳ, ಒಕ್ಕಲು ಮಕ್ಕಳ ಮೆಚ್ಚುಗೆಯೇ ನಾನು ಎದಿರುನೋಡುವ ದೊಡ್ಡ ಫಲ. ಅವರಲ್ಲೆಲ್ಲಾ ಕನ್ನಡದ ಹೆಮ್ಮೆ ಹರಡಲಿ. ಅವರಿಂದ ಕನ್ನಡ ಬೆಳಗಲಿ.

೭ನೆಯ ಶತಮಾನದಿಂದ ೨೦ನೆಯ ಶತಮಾನದ ಇಂದಿನವರೆಗಿನ ಕನ್ನಡ ಬೆಳೆಯನ್ನು (೧) ಶಾಸನಗಳು, (೨) ಪೂರ್ವ ಸಾಹಿತ್ಯ, (೩) ನಾಡಪದಗಳು, (೪) ಇಂದಿನ ಹೊಸ ಕವಿತೆ– ಈ ನಾಲ್ಕು ತೆನೆಗಳಲ್ಲಿ ತೋರಿಸಿದ್ದೇನೆ. ಕಾಲ ಕಾಲದ ಭಾಷೆಯ ಮಾರ್ಪಾಟುಗಳು, ಛಂದಸ್ಸಿನ ಬಗೆಬಗೆಯ ಕುಣಿತ, ಕನ್ನಡ ನಾಡಿನ ಸೊಬಗು, ಹೃದಯ, ಧರ್ಮಗಳು, ಮಹಾವ್ಯಕ್ತಿಗಳು, ಜೀವಗುರಿಗಳು, ಬೇರೆ ಬೇರೆ ಪ್ರಾಂತಪ್ರೇಮಗಳು– ಒಂದು ಮಾತಿನಲ್ಲಿ, ಹಿಂದಿನ ಮಹತ್ತ್ವದ ಸಂಸ್ಕಾರ ಮತ್ತು ಸಂಸ್ಕೃತಿ, ಇಂದಿನ ಮಹತ್ತ್ವದ ಧ್ಯೇಯ ಮತ್ತು ಯೋಜನೆಗಳು, ನಾಡ ನಾಡಿಯ ಮಿಡಿತ– ನನಗೆ ತಿಳಿದಂತೆ ಯಾವ ಯಾವುದು ಕನ್ನಡ ಬಾವುಟ ದಡಿಯಲ್ಲಿ ಹೊಮ್ಮಿದ ಎರಡು ಸಾವಿರ ವರ್ಷದ ಜೀವಾಳವೋ ಅದನ್ನೆ ತೆನೆಗಳಾಗಿ ಆಯ್ದು ತೆಕ್ಕೆಮಾಡಿ ಕನ್ನಡಿಗರ ಕೈಗೆ ಒಪ್ಪಿಸಿದ್ದೇನೆ. ಇದರಲ್ಲಿ ಹೆಸರು ಹೇಳಬಹುದಾದ ಪ್ರತಿಯೊಬ್ಬ ಕನ್ನಡ ಕವಿಯೂ ಬಂದಿರುವನೆಂದಾಗಲಿ, ಬಂದಿರುವ ಕವಿಯ, ಇಲ್ಲ, ಕಾವ್ಯದ ಉತ್ತಮ ಭಾಗವನ್ನೆ ಎಲ್ಲ ಕಡೆಯೂ ಆಯ್ದಿದೆಯೆಂದಾಗಲಿ ಹೇಳುವುದಕ್ಕಿಲ್ಲ. ಈ ವರ್ಷದ ಪರಿಷತ್ತಿನ ವಸಂತೋತ್ಸವದ ಹೊತ್ತಿಗೆ ಸಿದ್ಧಪಡಿಸುವ ಆತುರದಿಂದಲೂ ಕಡಮೆ ತಿಳಿವಳಿಕೆಯ ದೋಷದಿಂದಲೂ ಬಗೆಬಗೆಯ ಕುಂದು ಕೊರತೆಗಳುಂಟೆಂಬುದನ್ನು ಬಲ್ಲೆ. ಅವನ್ನು ತಿದ್ದಿ ದಾರಿತೋರಬೇಕೆಂದು ಕನ್ನಡ ಪ್ರೇಮಿಗಳಲ್ಲಿ ಬಿನ್ನೈಸಿಕೊಳ್ಳುತ್ತೇನೆ.

ಈ ಸಂಗ್ರಹ ಕಾರ್ಯದಲ್ಲಿ ನೆರವಾದ ನನ್ನ ಶಿಷ್ಯರು ಶ್ರೀ॥ ವಿ. ಸೀತಾರಾಮಯ್ಯನವರನ್ನೂ ಶ್ರೀ॥ ಕೆ. ವಿ. ರಾಘವಾಚಾರ್ಯರನ್ನೂ ಎಂದೆಂದೂ ಸಂತೋಷದಿಂದ ನೆನೆಯುತ್ತೇನೆ. ಅವರಿಲ್ಲದೆ ಇದು ನನ್ನ ಮನಸ್ಸಿನಲ್ಲಿಯೇ

ಉಳಿಯುತ್ತಿತ್ತು. ತಮ್ಮ ಕವಿತೆಗಳನ್ನು ಸೇರಿಸಿಕೊಳ್ಳುವುದಕ್ಕೆ ಒಪ್ಪಿಗೆ ಕೊಟ್ಟ ಕವಿಗಳಿಗೂ, ಚೆಲುವಾದ ಮುಖಚಿತ್ರವನ್ನು ಬರೆದುಕೊಟ್ಟ ಶ್ರೀ॥ ಎಂ. ವಿ. ಸೀತಾರಾಮಯ್ಯನವರಿಗೂ, ಶ್ರೀಮನ್ ಮಹಾರಾಜರವರ ಮತ್ತು ಕನ್ನಡ ನಾಡಿನ ಚಿತ್ರದ ಪಡಿಯಚ್ಚುಗಳನ್ನು ಕೊಟ್ಟ ಮೈಸೂರು ವಿದ್ಯಾಶಾಖೆಯ ಅಧಿಕಾರಿಗಳಾದ ಶ್ರೀ॥ ಇ. ಜಿ. ಮೆಕಲ್ಫೈನ್ ಅವರಿಗೂ, ಬೇಲೂರು ಶಿಲಾಬಾಲಿಕೆಯ ಚಿತ್ರದ ಪಡಿಯಚ್ಚನ್ನು ಕೊಟ್ಟ ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದವರಿಗೂ, ರನ್ನನ ಹೆಸರಿನ ಪಡಿಯಚ್ಚನ್ನು ಕೊಟ್ಟ ಶ್ರೀ॥ ಜಿ. ಪಿ. ರಾಜರತ್ನಂ ಅವರಿಗೂ, ಮೈಸೂರು ಶಾಸನಗಳ ಸಂಕಲನದಿಂದ ಗಂಗರಾಜ ನೀತಿಮಾರ್ಗನ ಶಾಸನದ ಚಿತ್ರವನ್ನು ಉಪಯೋಗಿಸಿಕೊಳ್ಳಲು ಅನುಮತಿಕೊಟ್ಟ ಡಾಕ್ಟರ್ ಎಂ. ಎಚ್. ಕೃಷ್ಣ ಅವರಿಗೂ, ನಾನು ಕೊಟ್ಟ ತೊಂದರೆಗಳನ್ನೆಲ್ಲಾ ತಾಳಿಕೊಂಡು ಒಂದು ವಾರದಲ್ಲಿ ಅಂದವಾಗಿ ಅಚ್ಚುಮಾಡಿಕೊಟ್ಟ ಬೆಂಗಳೂರು ಪ್ರೆಸ್ಸಿನವರಿಗೂ, ಇನ್ನೂ ಹಲವು ಬಗೆಯಲ್ಲಿ ನನಗೆ ನೆರವಾದ ನನ್ನ ಇತರ ಮಿತ್ರರಿಗೂ ನನ್ನ ಉತ್ತಮ ವಂದನೆಗಳನ್ನು ಸಮರ್ಪಿಸುತ್ತೇನೆ.

ಕನ್ನಡದ ಬಾವುಟ ಎಂಬ ಕವಿತೆಯ ಅಚ್ಚಿನ ವಿಷಯದಲ್ಲಿ ಒಂದು ಮಾತು: ಕನ್ನಡ ಬರವಣಿಗೆಯಲ್ಲಿ ಈಗಿರುವ ಅಕ್ಷರ ಸಂಯೋಜನೆಯ ಕ್ರಮ ಹಲವು ದೃಷ್ಟಿಗಳಿಂದ, ಅದರಲ್ಲಿಯೂ ಮುದ್ರಣದೃಷ್ಟಿಯಿಂದ, ಬಲು ತೊಡಕಾದ್ದೆಂದೂ ಯಾವ ರೀತಿಯಲ್ಲಾದರೂ ಕೊಂಚಮಟ್ಟಿಗಾದರೂ ತೊಡಕು ಬಿಡಿಸಿ ಸರಳ ಮಾಡಬೇಕೆಂದೂ ಹಲವರು ಅಭಿಪ್ರಾಯಪಟ್ಟು ಕರ್ಣಾಟಕ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿ ಆಗಬೇಕಾದ ಮಾರ್ಪಾಟುಗಳ ಪರ್ಯಾಲೋಚನೆಯನ್ನು ಆ ಸಮಿತಿಗೆ ವಹಿಸಿದರು. ಆ ಸಮಿತಿ ಚರ್ಚೆಗಳನ್ನು ನಡಸಿ ಕೆಲವು ತೀರ್ಮಾನಗಳಿಗೆ ಬಂತು. ಅದು ಸೂಚಿಸಿದ ಕೆಲವು ಮಾರ್ಪಾಟುಗಳನ್ನು ಇಲ್ಲಿ ಬಳಕೆಗೆ ತಂದಿದೆ. ಮುಖ್ಯವಾಗಿ ಮಾಡಿರುವ ಮಾರ್ಪಾಟುಗಳು ಮೂರು: (i) ದೀರ್ಘ ಚಿಹ್ನೆಯನ್ನು ಎಲ್ಲ ಕಡೆಯೂ ಒಂದೇ ರೀತಿ ಬರೆಯುವುದು—ಆ-ಅೀ, ಬಾ-ಬೀ, ಕೂ-ಕೂ; (ii) ಒತ್ತಕ್ಷರವನ್ನು ಬಿಡಿಸಿ ಪಕ್ಕದಲ್ಲಿ ಬರೆಯುವುದು—ಕನ್ನಡ-ಕನ್‌ನಡ, ಶ್ರೀ=ಶ್‌ರೀ; (iii) ಎಲ್ಲಾ ಮಹಾಪ್ರಾಣ ಚಿಹ್ನೆಗಳನ್ನೂ ಅಲ್ಪಪ್ರಾಣ ಚಿಹ್ನೆಗಳ ಹೊಕ್ಕುಳು ಸೀಳಿಯೆ ಮಾಡಿಕೊಳ್ಳುವುದು—ಛ-ಚ; ಭ-ಬ. ಈ ಸಣ್ಣ ಮಾರ್ಪಾಟುಗಳನ್ನು ತಾಳ್ಮೆಯಿಂದಲೂ ದೂರದೃಷ್ಟಿಯಿಂದಲೂ ನೋಡಿ ಎಲ್ಲರೂ ಒಪ್ಪಿಕೊಂಡು ಆದಷ್ಟು ಬೇಗ ಬಳಕೆಗೆ ತಂದರೆ ಎಳೆಯ ಮಕ್ಕಳ ಹೊರೆ, ಅಚ್ಚುಕೂಟಗಳ ತೊಡಕು ಅರ್ಧಕ್ಕರ್ಧ ಕಡಮೆಯಾಗುವುದೆಂದು ನಂಬಿದ್ದೇನೆ.

ಬೆಂಗಳೂರು
೧೭-೪-೧೯೩೮

ಶ್ರೀ

ಒಳಪಿಡಿ

ಒಂದನೆಯ ತೆನೆ
ಶಾಸನಗಳಿಂದ ೧

ಎರಡನೆಯ ತೆನೆ
ಪೂರ್ವ ಕವಿಗಳಿಂದ ೧೫

ಮೂರನೆಯ ತೆನೆ
ನಾಡಪದಗಳಿಂದ ೬೧

ನಾಲ್ಕನೆಯ ತೆನೆ
ಹೊಸ ಕವಿತೆಗಳಿಂದ ೮೧

ಚಿತ್ರಗಳ ಪಟ್ಟಿ

೧ ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರವರು iii

೨ ಮೈಸೂರು ಸಂಸ್ಥಾನದ ಶ್ರೀಮದ್ಯುವರಾಜರವರು iv

೩ ಕನ್ನಡನಾಡು viii

೪ (i) ಗಂಗರಾಜ ನೀತಿಮಾರ್ಗನ ಶಾಸನ ೪
(ii) ರನ್ನನ ಹೆಸರು ೪

೫ ಗದುಗಿನ ಶ್ರೀ ವೀರನಾರಾಯಣ ಸ್ವಾಮಿ ೨೮

೬ ಶ್ರವಣಬೆಳ್ಗೊಳದ ಶ್ರೀ ಗೊಮ್ಮಟೇಶ್ವರ ೩೨

೭ ಸಂಗಮದ ಮಂಟಪ ೩೮

೮ ಶ್ರೀ ಚಿಕದೇವರಾಜ ಒಡೆಯರವರು ೬೨

೯ ಹಂಪೆಯ ವಿರೂಪಾಕ್ಷ ದೇವಸ್ಥಾನದ ನೋಟ ೧೨೪

೧೦ ಬೇಲೂರಿನ ಶಿಲಾಬಾಲಿಕೆ ೧೫೬

ಕನ್ನಡ ನಾಡು
ಹೈದರಾಬಾದು
ಬೀದರ
ಕಲ್ಬುರ್ಗಿ
ಸಂಸ್ಥಾನಗಳು
ಬಿಜಾಪುರ
ಕೃಷ್ಣಾ ನದಿ
ರಾಯಚೂರು
ಬೊಂಬಾಯಿ
ಬೆಳಗಾಂವಿ
ಭದ್ರಾ ನದಿ
ಬಳ್ಳಾರಿ
ಧಾರವಾಡ
ತುಂಗ
ಮೈಸೂರು
ಕಾರವಾರ
ಚಿತ್ರದುರ್ಗ
ಶಿವಮೊಗ್ಗೆ
ಕಡೂರು
ತುಮಕೂರು
ನಂದಿ
ಕೋಲಾರ
ಅರಬ್ಬಿ ಸಮುದ್ರ
ಮೈಸೂರು
ಮಂಗಳೂರು
ಹಾಸನ
ಬೆಂಗಳೂರು
ಕಾವೇರಿ ನದಿ
ಕೊಡಗು
ಮಡಿಕೇರಿ
ಮೈಸೂರು
ನೀಲಗಿರಿ

ಕನ್ನಡದ ಬೀವುಟ

ಎರಿಸಿ, ಹರಿಸಿ, ಕನ್ನಡದ ಬೀವುಟ!
ಒಹೊ ಕನ್ನಡ ನಾಡು, ಅಹ ಕನ್ನಡ ನುಡಿ!
ಹರಿಸಿ, ತೋರಿಸಿ, ಕೆಚ್ಚೆದೆಯ ಬೀವುಟ!
ಗಳಿಯಲಿ ಫಟಪಟ, ದಳಿಯಲಿ ಛಟಚಟ,
ಉರಿಯೆತೋ ಉರಿಯಿತು ಹಗೆಯ ಪಟ ಮನೆ ಮಟ,
ಹಳ್ ಹಳ್ ಸುರಿಯಿತು ಹಗೆಯ ಬೀಡಕ್ಕಟ!
ಬಾಳ್ ಕನ್ನಡ ತಾಯ್!
ಎಳ್ ಕನ್ನಡ ತಾಯ್!
ಅಳ್ ಕನ್ನಡ ತಾಯ್!
ಕನ್ನಡಿಗರೊಡತಿ, ಒಲ ರಾಜೇಶ್ವರೀ!

ಮೌರ್ಯ ಕಳಚುರ್ಯರು, ಗಂಗರು, ಕದಂಬರು,
ರಟ್ಟರು, ಚಳುಕ್ಯರು, ಹೊಯ್ಸಳರು, ಯಾದವರು,
ಇಳೆಗೆ ಮೀಲಾದವರು, ಬಾಣರು, ಜಾಣರು,
ಕೊಲೆಯ ಕಳ್ಕಿಚ್ಚಿಂಗೆ ತಂಪುಮಳೆ ತಳೆದು,
ಚೆಲುವು ನೆಲ ನೀಲುತ್ತು, ಕಲೆಯ ಹೊಂಬೆಳೆಯುಟ್ಟು,
ನಗಿಸಿದರು ನಾಡನು, ಕಡಿದು ಕಗ್ಗಾಡನು:
ಮಾನವನ ಜೀವತೆಗೆ ತಂದ ಜನಭಕ್ತರು,
ತಂಪೆಯ ವಿರೂಪಾಕ್ಷ ಪುತ್ರರು, ವಿರಕ್ತರು,
ವೀರನಾರಾಯಣನ ಕೃಪೆಯೊಳಾಸಕ್ತರು,
ಶಂಭೀ ಗೌರಿ ಕಾವಲಿಪ ರಾಯರನುರಕ್ತರು,
ನಮ್ಮ ತಾಯ್ ಮಕ್ಕಳು –
ಬಾಳ ಜೆಕ್ಕಾದಿಂಗಳಲಿ ಒಲಿದು ನಲಿದವರು –
ಜೇವು ಜಿಲ್ಲವೂ ಒರಲಿ, ಮಲ್ಲಿಗೆಯೊ ಮುಳ್ಳೋ,
ಬಾನ ಬೆಂಕಿನಲಿ, ಮಾನವಕುಲದಲಿ,
ಚಿನ್ನು ಬಮುಕನು ಕುಣಿಸಿ, ಒಲಿದು ನಲಿದವರು –
ನಮ್ಮ ತಾಯಣ್ಣುಗರು,
ಪಂಪನೋ, ರನ್ನನೋ, ಬಸವನೋ, ಮಾಧವನೊ,
ಈ ಅಕ್ಕಮಮಹಾದೇವಿ, ನೀರಣಪ, ಚಿಕದೇವ,

ಜಕ್ಕಣ, ಹೊನ್ನಮ್ಮ, ನಮ್ಮಮ್ಮನೆಳೆಯರು,
ಚೆಲುವ ಚೆಲುವೆಯರು– ಚಿನ್ನದ ಚಿಣ್ಣರು,
ಕಲಿಗಳು, ಕಿಡಿಗಳು, ಗಂಡರು, ಮೊಂಡರು,
ನಲಿದೊಲಿದು ಬೆಚ್ಚೊಂದು ನೆಚ್ಚಿಂಗೆ ಮೆಚ್ಚಿಂಗೆ
ಕಿಚ್ಚಿನಲಿ ಹಾಯ್ದು ನಲ್ಲನ ಹಿಡಿದ ಹೆಂಡಿರು,
ಸತಿಗಳು, ಯತಿಗಳು, ವ್ರತಿಗಳು, ಕೃತಿಗಳು–
ಕನ್ನಡದ ಬಾವುಟವ ಹಿಡಿಯದವರಾರು?
ಕನ್ನಡದ ಬಾವುಟಕೆ ಮಡಿಯದವರಾರು?
ನಮ್ಮ ಈ ಬಾವುಟಕೆ ಮಿಡಿಯದವರಾರು?
ಹೇಳಿರೋ ಹೆಸರೊಂದು ನೆನಹಿನಲಿ ಸುಳಿದರೆ!
ಹುಡುಕಿರೋ ಹೇಡಿ ತಾನೊಬ್ಬ ಮನೆಗುಳಿದರೆ!
ಕನ್ನಡದ ನಾಡಲೀ,
ಕನ್ನಡದ ನುಡಿಯಲೀ,
ಕನ್ನಡಿಗನೆದೆ ಕಡೆದ ತೆನೆಯಲೀ ಕೆನೆಯಲೀ!
ಬೆಳಕು ಹರಿಯಿತು, ಎಳೆ,
ಇರುಳು ಸವೆಯಿತು ಎಳೆ,
ತಾಯ ಕರೆ ಕೇಳಿ,
ಎಳೆರೋ, ಎಳೆರೋ, ಬಾಳ ಬಲಿ ಬೇಳಿರೋ,
ಎಲ್ಲೊಲುಮೆಯುಂ ಕೂಡಿದೊಂದೊಲುಮೆ ತಾಳಿರೋ,
ತಾಯುಳಿಯೆ ನಾನುಳಿದೆ,
ತಾಯಳಿಯೆ ನಾನಳಿದೆ,
ಮನೆ ಕಾಯಿ, ತುರು ಕಾಯಿ, ನಾಡ ಗಡಿ ಗುಡಿ ಕಾಯಿ,
ಕಾಯಲಾರೆಯ, ಸಾಯಿ,
ಎಂದೆಲ್ಲ ಎಳೆರೋ–
ಈಹ ಕನ್ನಡ ನುಡಿ, ಈಪ ಕನ್ನಡ ನಾಡು,
ಹಿರಿಯ ಕನ್ನಡ ಪಡೆ, ಮರಿಯ ಕನ್ನಡ ಪಡೆ,
ಎಳೆರೋ, ಬಾಳಿರೋ,
ಕನ್ನಡದ ಬಾವುಟವ ಹಿಡಿಯಿರೋ, ನಡೆಯಿರೋ!
ಎಳ್ ಕನ್ನಡ ತಾಯ್,
ಬಾಳ್ ಕನ್ನಡ ತಾಯ್,
ಈಳ್ ಕನ್ನಡ ತಾಯ್,
ಕನ್ನಡಿಗರೊಡತಿ, ಒಲ್ ರಾಜೇಶ್ವರೀ!

ಇಂದಿನದೆ ಹೇಳಿರೋ ಇ೦ ನಮ್ಮ ಬೀವುಟ!
ಕುಂದಿಹುದೆ ನೋಡಿರೋ ಇ೦ ನಮ್ಮ ಬೀವುಟ!
ಕಂದದಿದೆ ಇಂದಿಗುೀ ಕನ್ನಡದ ಬೀವುಟ!
ಎನೇನ ಕಂಡುದೋ ಬೀನೀಡಿ ಬೀವುಟ!
ಆವುದನು ಕೀಣದೋ ಜೀವಕಳೆ ಬೀವುಟ!
ಕನ್ನಡದ ಬೀವುಟಗಳೊಂದೀದ ಬೀವುಟ!
ಎೀರಿಸಿ, ಹೀರಿಸಿ, ತೋರಿಸಿ ಬೀವುಟ!
ತೀಲೀಡು, ಮೀಲೀಡು, ಒೀಲೀಡು ಬೀವುಟ!
ಚೆಲುವೀಗು, ಗೆಲುವೀಗು, ಬಲವೀಗು ಬೀವುಟ!
ಹೊನ್ನೀಗಿ, ಹೆಣ್ಣೀಗಿ, ಹಸನೀದ ಮಣ್ಣೀಗಿ,
ಹೊಸಹೊಸತು ಕಣ್ಣೀಗಿ, ಬೆಳಕೀಗಿ, ಬೆಳೆಯೀಗಿ,
ಕುೀಡುತಿಹ ಕನ್ನಡವ ಹೊಮ್ಮುಗೆಯ ಕೀವೀಗಿ,
ಪರಿಪರಿಯ ಹೊಂಬಗೆಯ ಹೆರಿಗೆಯೀ ನೋವೀಗಿ,
ನೀಲುಮುಡಿ ಕೃಷ್ಣನೀ ಕಟ್ಟೊಲುಮೆ ಹುೀವೀಗಿ,
ಬೀಳು ಎಲೆ ಬೀವುಟ!
ಬೀಳ್ ಕನ್ನಡ ತೀಯ್,
ಎೀಳ್ ಕನ್ನಡ ತೀಯ್,
ಆೀಳ್ ಕನ್ನಡ ತೀಯ್
ಕನ್ನಡಿಗರೊಡತಿ ಒೀ ರೀಜೇಶ್ವರೀ!

ಶ್ರೀ

ಒಂದನೆಯ ತೆನೆ

ಶಾಸನಗಳಿಂದ

ಒಳಪಿಡಿ

೧	ಶ್ರವಣಬೆಳ್ಗೊಳದ ಯತಿಗಳು	೩
೨	ಗುಣಗಳ್ಕ (ಅದ್ವೈತ ಮುನಿ)	೪
೩	ಗಂಗರಾಜ (ನೀತಿಮಾರ್ಗ)	೪
೪	ರಾಷ್ಟ್ರಕೂಟರಾಜ (ಇಂದ್ರ)	೫
೫	ದೇಕಬ್ಬೆ	೭
೬	ತುರುಗೋಳು — ಗಡಿನಾಳಗ	೧೦
೭	ದೇವಾಲಯದ ದತ್ತಿ	೧೨
೮	ಬುಕ್ಕರಾಯನ ಧರ್ಮ ಸಮದೃಷ್ಟಿ	೧೪

೧. ಶ್ರವಣಬೆಳ್ಗೊಳದ ಯತಿಗಳು ಸು. ೭೦೦

(i)

ಶ್ರೀ ಭದ್ರಬಾಹು ಸಚಂದ್ರಗುಪ್ತ ಮುನೀಂದ್ರ ಯುಗ್ಮದಿನೊಪ್ಪೆ ವಲ್
ಭದ್ರವಾಗಿದ ಧರ್ಮಮಂದುವಱಕ್ಕೆ ವಂದಿನಿಸಳ್ಕಲೋ
ವಿದ್ರುಮಾಧರ ಶಾಂತಿಸೇನ ಮುನೀಶನಾಕ್ಕಿಎ ವೆಳ್ಗೊಳ [ತ್]
ಅದ್ರಿಮೇಲಶನಾದಿವಿಟ್ಟಪುನರ್ಭವಕ್ಕೆಱಿ ಆಗಿ [ದಾನ್]

(ii)

ಶ್ರೀ ಮಾಸೇನರ್ ಪರಮಪ್ರಭಾವ ಋಷಿಯರ್ ಕಟ್ಟಿಪ್ಪಿನಾ ವೆಟ್ಟದುಳ್
ಶ್ರೀ ಸಂಗಂಗಳ ಪೇಱ್ದು ಸಿದ್ಧಸಮಯಂ ತಪ್ಪಾದೆ ನೋನ್ತಿಂಬಿನಿನ್
ಪ್ರಾಸಾದಾಂತರಮಾನ್ ವಿಚಿತ್ರ ಕನಕ ಪ್ರಜ್ವಲ್ಯದಿನ್ ಮಿಕ್ಕುದಾನ್
ಸಾಸಿರ್ವರ್ ವರಪೂಜೆವಂದುಯೆ ಅವರ್ ಸ್ವರ್ಗಾಗ್ರಮಾನೇಱುದಾರ್

(iii)

ನೆಱಿದಾವ ವ್ರತಶೀಲನೋನ್ಪಿ ಗುಣದಿಂ ಸ್ವಾಧ್ಯಾಯ ಸಂಪತ್ತಿನಿಂ
ಕಱಿಯಿಲ್ ನಲ್ ತಪ ಧರ್ಮದಾ ಸಸಿಮತಿ ಶ್ರೀಗಂತಿಯರ್ ವಂದು ಮೇಲ್
ಅಱುದಾಯುಷ್ಯಮನೆಂತು ನೋಡೆನಗೆ ತಾನಿಂತೆಂದು ಕಟ್ಟಿಪ್ಪಿನುಳ್
ತೊಱಿದಾರಾಧನೆ ನೋನ್ತು ತೀರ್ಥಗಿರಿಮೇಲ್ ಸ್ವರ್ಗಾಲಯಕ್ಕೇಱುದಾರ್

(iv)

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೋಲ್ ಮಂಜುವೋಲ್ ತೋಱಿ ಬೇಗಂ
ಪಿರಿಗುಂ ಶ್ರೀ ರೂಪ ಲೀಲಾ ಧನ ವಿಭವ ಮಹಾರಾಶಿಗಳ್ ನಿಲ್ಲವಾರ್ಗಂ
ಪರಮಾರ್ಥಂ ಮೆಚ್ಚಿನಾನೀ ಧರಣಿಯುಳಿರವಾನೆಂದು ಸಂನ್ಯಾಸನಂ ಗೆ
ಯ್ದುರುಸತ್ವನ್ ನಂದಿಸೇನಪ್ರವರ ಮುನಿವರನ್ ದೇವಲೋಕಕ್ಕೆ ಸಂದಾನ್

(v)

ಶ್ರೀ ಅಗಟ್ಯ ಮೋನಿ ಗುರವರ ಶಿಷ್ಯ [ರ್] ಕೊಟ್ಟರದ ಗುಣಸೇನ ಗುರವರ್ ನೋನ್ತು ಮುಡಿಪ್ಪಿದಾರ್

(vi)

ಅದೆಯಱಿನಾಡ ಚಿತ್ತೂರ ಮೋನಿಗುರವಡಿಗಳ ಶಿಷಿತ್ತಿಯರ್ ನಾಗಮತಿ ಗನ್ತಿಯರ್ ಮೂಱುತಿಂಗಳ್ ನೋನ್ತು ಮುಡಿಪ್ಪಿದರ್

೨. ಗುಣಗಳ್ಳ (ಅದ್ವೈತ ಮುನಿ) ೧೦೭೧

ಶ್ರೀಮನ್ ಮುಕ್ತಿವಧೂ ಲೀ
ಲಾ ಮಂಗಳ ತಿಳಕನೆಸೆದನದ್ವಯ ಮಹಿಮೋ
ದ್ದಾಮಂ ಸಂಪೂರ್ಣಂ ವಿ
ದ್ಯಾಮೂರ್ತಿ ಜಿತಾತ್ಮನಕ್ಷರಂ ಗುಣಗಳ್ಳಂ

ಅಚಳನ ದೆಸೆಯಿಂದುದಯಿಸು
ವ ಚರಾಚರಮಚಳನಿಂದೆ ಪೊಜಗಣವಲ್ತೆಂ
ದಚಳಿತಚಿತ್ತದಿನಿರ್ಪಂ
ಪ್ರಚಂಡನದ್ವೈತಿ ನಿರುಪಮಂ ಗುಣಗಳ್ಳಂ

ಜ್ಞಾನಮೆ ನಾಂ ನಿನಗೊಡಲೆಸೆ
ವಾನಂದಂ ತೋರ್ಪುವೆಲ್ಲಮೆನ್ನ ನೆಬಲ್ ಮು
ತ್ತೀನುಂ ಬೇಱುಲ್ಲೆಂಬಿನ
ಳಾನುತನದ್ವೈತಶೇಖರಂ ಗುಣಗಳ್ಳಂ

ಮುಕ್ತಿಶ್ರೀ ಸತಿಗನುರಕ್ತಂ ಸಂಸಾರ ವಿ
ರಕ್ತಂ ನಿರ್ವಿಷಯಂ ನಿರಪೇಕ್ಷಂ ಶುಚಿ ಜೀವ
ನ್ಮುಕ್ತಂ ನಿರ್ವಾಣಿ ಗುಣಗಳ್ಳಂ

ಅಱುವಣ್ಮ ವೈರಾಗ್ಯಂ ತಱುಸಲವಭ್ಯಾಸಂ
ನೆಱೆ ಭಕ್ತಿ ಶಾಂತಿ ಧೃತಿ ತುಷ್ಟಿಯೆಂಬಿನ
ರ್ಕೆಱಿವಟ್ಟಾಗಿಜ್ಜಿಂ ಗುಣಗಳ್ಳಂ

ದೊರೆಕೊಂಡೀ ದೇಹದೊಳ್ ಮೋಹಮನೆಲೆ ಗುಣಗಳ್ಗಾರ್ಯ ನೀಂ ಮಾಣ್ದು
ಬೆಂಕೊಂ
ಡರಿಷಡ್ವರ್ಗಂಗಳಂ ಭೇದಮನಿಱುದಳಿಪಂ ಬಿಟ್ಟು ಕರ್ಮಂಗಳೆಲ್ಲಂ
ಬೆರಸಾನೆಂದಿರ್ಪಹಂಕಾರಮನವಯವದಿಂ ಸುಟ್ಟು ಸಾನಂದದಿಂದಂ
ಪರಿಪೂರ್ಣಜ್ಯೋತಿ ನೀನಾಗಿರೆ ಬಿಡುವಳೆ ಸೇಱ್ ಮುಕ್ತಿ ನಿನ್ನಂ ಮುನೀಂದ್ರಾ

೩. ಗಂಗರಾಜ (ನೀತಿಮಾರ್ಗ) ೯೬೧

ಸ್ವಸ್ತಿ ನೀತಿಮಾರ್ಗ ಕೊಂಗುಣಿವರ್ಮ್ಮಧರ್ಮಮಹಾರಾಜಾಧಿರಾಜ ಕೋವ
ಳಾಲ ಪುರವರೇಶ್ವರ ನಂದಗಿರಿನಾಥ ಶ್ರೀಮತ್ ಪೆಮ್ಮ್[ರ್]ನಡಿಗಳ್ ಸ್ವರ್ಗ
ಮೇಱುದ[ರ್] ಏಱುದೊಡೆ ಪೆಮ್ಮಾ[ರ್]ನಡಿಗಳ ಮನೆಮಗತ್ತಿನ್ ಅಗರಯ್ಯಂ
ನೀತಿಮಾರ್ಗ ಪೆಮ್ಮ[ರ್]ನಡಿಗೆ ಕಿಟ್ಟುಂಕಿಯಾದಂ ಪೆಮ್ಮ[ರ್]ನಡಿಗಳ

ಗಂಗರಾಜ ನೀತಿಮಾರ್ಗನ ಶಾಸನ



ಶ್ರವಣಬೆಳ್ಗೊಳದ ಬೆಟ್ಟದಲ್ಲಿ ಕೆತ್ತಿರುವ
ರನ್ನನ ಹೆಸರು

ಸುಪುತ್ರ[ರ್] ಸತ್ಯವಾಕ್ಯ ಪೆಮ್ಮ್[ರ್]ನಡಿಗಳ್ ಗುಬ್ಬಿವೀದಿಯ ಕಲ್ಲಾಡ
ಕೊಟ್ಟದು ಕಪ್ಪಹಳ್ಳಿ ಪರಿಹಾರ[ಂ] ಇದನಟ್ಟಿದೊ[ನ್] ವಾರಣಾಸಿಯನಟ್ಟಿದಂ
....ಮಾಪಾತಗನ್.

೪. ರಾಷ್ಟ್ರಕೂಟ ರಾಜ (ಇಂದ್ರ) ೯೮೨

ಸಂಸಾರವನಮಧ್ಯೇಸ್ಮಿನ್ ಋಜೂಂಸ್ತದ್ಗಾನ್ ಜನದ್ರುಮಾನ್
ಆಳೋಕ್ಯಾಳೋಕ್ಯ ಸವ್ಯೃತ್ತಾನ್ ಛಿನತ್ತಿ ಯಮತಕ್ಷಕಃ

ಶ್ರೀ ರಾಜತ್ ಕೃಷ್ಣರಾಜೇಂದ್ರನ ಮಗನ ಮಗಂ ಸತ್ಯಶೌಚವ್ಯಯಾಳಂ
ಕಾರಂ ಶ್ರೀ ಗಂಗ ಗಾಂಗೇಯನ ಮಗಳ ಮಗಂ ವೀರ ಲಕ್ಷ್ಮೀವಿಳಾಸಾ
ಗಾರಂ ಶ್ರೀ ರಾಜಚೂಡಾಮಣಿಯಳಿಯನಿದೇಂ ಪೆಂಪೊ ಪೇಟಿಂದಲಂಪಿಂ
ಭೂರಿಕ್ಕಾ ಕ್ರಚಕ್ರಮುಂ ಬಣ್ಣಿಸೆ ಸಲೆ ನೆಗಬ್ಪಿಂ ರಟ್ಟ ಕಂದರ್ಪದೇವಂ

ಇಜಿಯಲ್ದಣ್ಮಪರೀಯಲಾಜಿರಕೆಬರ್ ಪೂಣ್ದೀವರಾರಾನುಮಾಂ
ತಿಜಿಯಲ್ದಣ್ಮರದಾವ ಗಂಡಗುಣಮಾವೌದಾರ್ಯಮೆಂದಳ್ದದಾಂ
ತಿಜಿವಣ್ಮಂ ಪಿರಿದೀವ ಪೆಂಪುಮೆಸೆದೊಪ್ಪಿಜ್ಜಿಪ್ಪುವಾರ್ ಬಣ್ಣಿಸಲ್
ನೆಜಿವರ್ ಬೀರದ ಚಾಗದುನ್ನತಿಕೆಯುಂ ಶ್ರೀ ರಾಜಮಾರ್ತಂಡನಾ

ಕೆಡದ ಜಸಕ್ಕೆ ತಾನೆ ಗುಜಿಯಾದ ಚಲಂ ನೆರೆದರ್ಥಿಗರ್ಥಮುಂ
ಕುಡುವ ಚಲಂ ತೊವಳ್ನುಡಿಯದಿರ್ಪ ಚಲಂ ಪರವೆಣ್ಣೊಳ್ತೋತೊಡಂ
ಬಡದ ಚಲಂ ಶರಣ್ಗೆವರೆ ಕಾವ ಚಲಂ ಪರಸೈನ್ಯಮಂ ಪೆಜಿಂ
ಗೆಡೆಗುಡದಟ್ಟ ಕೊಲ್ವ ಚಲಮಾಳ್ವ ಚಲಂ ಚಲದಂಕಕಾಜಿನಾ

ಇರು ಪೆಜಿದೇನಸಿನ್ ಪೊಗಟ್ಟುತಿಜ್ಜಿಪುದೀವ ನೆಗಟ್ಟಿ ಕಲ್ಪಭೂ
ಮಿರುಹದಿನಗ್ಗಳಂ ನುಡಿ ಸುರಾಚಳದಿಂದಚಳಂ ಪರಾಕ್ರಮಂ
ಖರಕರತೇಜದಿಂ ಬಿಸಿಮ ಚಾಗದ ನನ್ನಿಯ ಬೀರದಂದಮಿ
ದೊರೆತಿನೆ ಬಣ್ಣಿಸಲ್ ನೆಜಿವರಾರಳವಂ ಚಲದಂಕಕಾಜಿನಾ

ಪುಸಿವುದೆ ತಕ್ಕು ಕೊಟ್ಟಳಿಪಿ ಕೊಳ್ವುದೆ ಮಂತಣಮನ್ಯನಾರಿಗಾ
ಟಿಸುವುದೆ ಚಿತ್ತವಿಸಾಯಮುದೆ ಬಿನ್ನಣಮಾರುಮನೆಯ್ದೆ ಕೂರ್ತು ಬಂ
ಚಿಸುವುದೆ ಕಲ್ತ ಕಲ್ಪಿಯೆನೆ ಮತ್ತವರಂ ಪೆಸರ್ಗೊಂಡದೆಂತು ಪೋ
ಲಿಸುವುದೊ ಪೇಟಿಮೀಗಡಿನ ರಾಜತನೂಜರೊಳಿಂದ್ರರಾಜನಂ

ನುಡಿವರ್ ಬೀರಮನೊಂದುಗಂಡು ಸೆಡೆವರ್ ಚಾಗಕ್ಕೆ ಮುಯ್ವಾಂಪರೀ
ವಡೆ ಪಲ್ಗಚ್ಚುವರಾಮೆ ಸೋಚಿಗಳೆಮೆಂದಿರ್ದರ್ ಪರಸ್ತ್ರೀಯರೊಳ್
ಗಡಣಂ ನನ್ನಿಗೆ ಬೀಗುವರ್ ನುಡಿ ತೊವಳ್ ದೋಸಕ್ಕೆ ಪಕ್ಕಾದೊಡಂ
ಬಡ ಗಂಡರ್ ಕಲಿಕಾಲದೊಳ್ ಕಲಿಗಳೊಳ್ ಗಂಡಂಬರಂ ಗಂಡರೇ

ಶ್ರೀಗೆ ವಿಜಯಕ್ಕೆ ವಿದ್ದೆಗೆ
ಚಾಗಕ್ಕದಟಂಗೆ ಜಸಕೆ ಪೆಂಪಿಂಗಿನಿತ
ಕ್ಕಾಗರಮಿದೆಂದು ಕಂದುಕ
ದಾಗಮದೊಳೆ ನೆಗಟ್ಟುಮುಲ್ತೆ ಬೀರರ ಬೀರಂ

ಬಳಸುವೇಱುವ ಸುಱಿವಗಲ್ವಿಂತಪ್ಪ ಚಾರಣದೋಷಮಲ್ಲದೆ ಪೊಟ್ಟವ
ಟ್ಟಳೆಗೆ ಸಮನಾಗೆ ಗಿರಿಗೆಯ ಕೋಲ್ ಮುಟ್ಟಿ ಮಿಗಲುಂ ನೇಲಲುಮಣ-
ಮೀಯದಿಂತೊಂ
ದಳವಿಯೊಳ್ ಬರೆ ಪೊಱಗೊಳಗೆಡದೊಳಂ ಬಲದೊಳಂ ಕಡುಗಡುಪಿಂದೆ ಬರ್ಪ
ವಳಯಂದಪ್ಪದೆ ಚಾರಿಸುವೋಜೆಯಂ ರಟ್ಟಕಂದರ್ಪನಂತಾವಂ ಬಲ್ಲಂ

ಮೆಳಸಿನನಿಲಿರಿದು ಗಿರಿಗೆಯ
ನಳೆದೊರ್ಗೆಣ್ ಕೋಲೊಳೊಳಗೆ ಪೊಱಗಣಿನೆಱಿವೊ
ಳ್ಪಳವಡೆ ಚಾರಿಪ ಬಹಲಿಕೆ
ಯಳವಿದು ಕೇವಳಮೆ ಕೀರ್ತಿನಾರಾಯಣನಾ

ಎಱಿಕಮಲ್ಲದೆ ಪೊಲ್ಲದಾಗೆಱಿಗಿ ದೊರೆಕೊಂಡೆ ಕೊಳ್ವ ತೆಱಿನಲ್ಲದೆ
ನೆಱಿತೆಯೆ ಬರಲೆ ತಕ್ಕಡಿಯಲ್ಲಿ ಬೀಸುವಲ್ಲಿಯೆ ಬೀಸಲಱಿದೆಯಿಲ್ಲ
ಪಱಿಯನಾದಿಟ್ಟೆ ಮುರಿವಲ್ಲಿ ಕಡುಪಿನೊಳ್ ಮುರಿದಯಿಲ್ಲೆಲ್ಲಿಯ ಬಿನ್ನಣವನ್
ನೆಱಿತೆಯೆ ಕಲ್ಪದೆ ಬೀರರ ಬೀರನಂ ಗೆಡೆಗಳಾಭರಣನಂ ನೋಡಿ ಕಲ್ಲಾ

ಆಸುವನುಂ ಕೂಂಕುವನುಂ
ಬೀಸುವನುಂ ಗೆಡೆಯೆ ನೆಗಟ್ಟಿ ತಕ್ಕಡಿಯೊಳೆನು
ತ್ತಾಸದೆಯುಂ ಕೂಂಕದೆಯುಂ
ಬೀಸದೆಯುಂ ಬಿದ್ದ ಮೆಟ್ಟಿಗುಮೆಟ್ಟಿವಬೆಡಂಗಂ

ಕಾಲ್ಗಳ ಕಯ್ಗಳ ತುರಗದ
ಕಾಲ್ಗಳ ತಿಣಿವುಗಳೊಳಲ್ಲಿ ಬಂಚಿಸುತೆಟ್ಟಿಗುಂ
ಗೆಲ್ಗುಮೆನೆ ನೆಗಟ್ಟಿ ಮಾರ್ಗದೆ
ಗೆಲ್ಗುಮೆ ಪೆಣೆದಲ್ಲಿ ಕೀರ್ತಿ ನಾರಾಯಣನಾ

ವನಧಿ ನಭೋನಿಧಿ ಪ್ರಮಿತ ಸಂಖ್ಯೆ ಶಕಾವನಿಪಾಲಕಾಲಮುಂ
ನೆನೆಯಿಸೆ ಚಿತ್ರಭಾನು ಪರಿವರ್ತಿಸೆ ಚೈತ್ರಸಿತೇತರಾಷ್ಟಮೀ
ದಿನಯುತ ಭೌಮವಾರದೊಳನಾಕುಳಚಿತ್ತದೆ ನೋಂತು ತಾಳ್ದಿದಂ
ಜನನುತನಿಂದ್ರರಾಜನಖಿಳಾಮರ ರಾಜ ಮಹಾವಿಭೂತಿಯಂ

೫. ದೇಕಬ್ಬೆ ೧೦೫೭

ಮಾಸತಿಕಲ್ಲು

ಸ್ವಸ್ತಿ ಶ್ರೀ ಚೋಳರಾಜಂ ಸಕಲ ವಸುಧೆಯಂ ಕೊಂಡು ರಾಜೇಂದ್ರದೇವಂ
ದುಸ್ತಾರಿವ್ರಾತ ಘಾತಂ ನೆಗಟಿ ಬರಿಸಮಾಜ್ಞಾಗೆ ಮತ್ತಂ ಶಕಾಬ್ದಂ
ವಿಸ್ತಾರಕ್ಕೊಂಬತೇಟಿಂಬತುಮೆನೆ ಬರಿಸಂ ಹೇವಿಳಂಬಿ ಪ್ರಸಿದ್ಧಂ
ಸ್ವಸ್ತಂ ಮಾಸಂ ಗಡಂ ಕಾರ್ತಿಕಮಸಿತದಿನಂ ದ್ವಾದಶೀ ಸೋಮವಾರಂ

ಸ್ವಸ್ತಿ ಶ್ರೀಮತ್ ಸಕಲ ಜ
ಗತ್‌ಸ್ತುತರ ವಚೋಗ್ರಗಣ್ಯರೂರ್ಜಿತ ಪುಣ್ಯರ್
ವಿಸ್ತಾರ ಚಾರು ವೀರರ
ಸಸ್ಥಿತರಿಜ್ಞಾವೀವ ಕಾವ ನುಗುನಾಡಧಿಪರ್

ಎನಿಪ ಕುಲದಲ್ಲಿ ಪುಟ್ಟಿದ
ನನುಪಮನೆಜ್ಞಿಯಂಗನವನ ನಿಜಸುತನೇಚಂ
ಮನುನಿಭನವಂಗೆ ಪುಟ್ಟಿದ
ತನೂಭವಂ ಜವನಿಯಮ್ಮನಜ್ಞಾವಿಂಗಾರ್ಯಂ

ಅಂತಾ ಜವನಯ್ಯಂಗಂ
ಕಾಂತಾಜನ ತಿಲಕಮೆನಿಪ ಜಾಕಬ್ಬೆಗಮೊ
ಳ್ಪಂ ತಳೆಯೆ ಪುಟ್ಟಿದಂ ರಿವು
ಸಂತಾನ ನಗೇಂದ್ರವಿಳಯ ಪವಿಗಂ ರವಿಗಂ

ರವಿಗಂ ಪುಟ್ಟಿದನೊಡನು
ದ್ಭವಮಾಯ್ತಜ್ಞಾವಜ್ಞಾವಿನೊಡನೆ ಪುಟ್ಟಿದುದಾಯಂ
ಸವಸಂದಾಯದೊಡಂ ಸಂ
ಭವಮಾದುದು ಚಾಗಮಿಂತುಟುಂ ಬಿರುದುಂಟೀ

ಕುಡಿಯರ ವಲ್ಲಭಂ ಕುಡಿಯರಾಭರಣಂ ನುಗುನಾಡ ರಾಮನೆಂ
ದಡೆ ಕಲಿಕಾಲ ಕರ್ಣನ ವಿನೋದದ ಚಾಗದ ಬೀರದಾರ್ಪನೀ
ಗಡಿನ ನಿಕೃಷ್ಟ ನಿರ್ಗುಣ ನಿಕೃತ್ಯ ನಿರಾಚರಣೇಟವೀಟರಂ
ಕಡುಜಡರೆಂತು ಪೋಲಿಪರೆ ಧನ್ಯನೆನಿಪ್ಪವಚೋಗ್ರಗಣ್ಯನಂ

ಚೋಳ ಪಲ್ಲವ ಪಾಂಡ್ಯ ಸಿಳಾ ನೇಪ ಕೇರಳ ಸೊರಟ [ಗುರ್ಜರ ಕಾಂ] ಭೋಜ
ಲಾಳ ಗಜಪತಿ ಹಯಪತಿ ನರಪತಿಯೆನಿಪ ಮಹೀಪಾಳರಾಸ್ಥಾನದಲ್
ಕೇಳ ತನ್ನನೆ ನಟ ವಂದಿ ಮಾಗಧರ್ ಕೈಕೊಂಡು ಪೊಗಟಿಲ್ಕೆ ನೆಗಟಿ ಬಲ್ಲ
ಮೇಳಮಾಣಿಕವೆನಿಪ ಜಯಂಗೊಂಡ ಚೋಳ ಪೆರ್ಮಾಡಿಗಾವುಂಡಂ ತಕ್ಕಂ

ಪಲ್ಲವ ಸತ್ತಿಗೆ ಸಂಕಂ
ಝಲ್ಲಳಿ ಜಯಮುಂಗಳಂಗಳಂ ಚೋಳಮಹೀ
ವಲ್ಲಭನಿತ್ತಡೆ ಕುಡಿಯರ
ವಲ್ಲಭನುಱಿ ಮಂಡಳೀಕಪದಮಂ ಪಡೆದಂ

ಕಡಲ ಕಡೆವರಮಜಾಂಡದ
ಕುಡಿವರಮಾಶಾಗಜೇಂದ್ರದಂತುವರಂ ತ
ಳ್ತೊಡನೊಡನೆ ಪರ್ವಿ ಬಳೆದುದು
ಕುಡಿಯರ ವಲ್ಲಭನ ಕೀರ್ತಿಲತೆ ಕೋಮಳದಿಂ

ಮನುನಿಭನೆಡೆನಾಡಧಿಪತಿ
ವಿನೇಯನಿಧಿ ಸತ್ಯವಾಕ್ಯನಾಟ್ಯೋಜನ ಮು
ಖ್ಯನ ಕುಲವಧು ಭೂತಬ್ಬೆಗೆ
ಜನಿಯಿಸಿ ಕಲಿಕಾಲ ಸೀತೆವೆಸರಂ ಪಡೆದಳ್

ವನಿತಾರನ್ನಂ ಪೊನ್ನ
ಕ್ಕನನಬ್ಬೆಯೆ ಮದುವೆಗೊಂಡು ಬೆಳತೂರಧಿಪಂ
ಮನುನಿಭನೆನೆ ನೆಗಬ್ಪ್ರೀತನ
ವನಿತೆಗೆ ಭೂವನಿತೆಯೊಳಗೆ ಪೆಜರೆಣೆಯೊಳರೇ

ನಿರುಪಮ ಶೀಳದಿಂ ಗುಣದಿನುತ್ತಮದಾನದಿನಾತ್ಮಭಕ್ತಿಯಿಂ
ಗಿರಿಸುತೆ ರಂಭೆ ಮೇನಕೆ ಸರಸ್ವತಿ ರುಕ್ಮಿಣಿ ಸತ್ಯಭಾಮೆಯೊಳ್
ದೊರೆಯೆನಲೊಲ್ಲದೀಗಡಿನ ದುಷ್ಪಕನಿಷ್ಠ ಕುಶೀಲ ದುರ್ಗುಣಾ
ಧರೆಯರನೆಂತು ಪೋಲಿಪರೆ ನಿರ್ಮಳಚಿತ್ತದ ಪೊನ್ನಕಬ್ಬೆಯಂ

ಚಾರು ಚಾರಿತ್ರೆ ನಯ ವಿನಯಾಕರೆ ಗೋತ್ರಪವಿತ್ರೆ ಸುಶೀಲಯುಕ್ತೆ
ನಾರೀಜನರನ್ನ ಮೆನಿಪ ಪೊನ್ನ ಬ್ಬೆಗಂ ರವಿಗಂಗಂ ಪುಟ್ಟಿದ ದೇಕಬ್ಬೆಯಂ
[ವೀ]ರಂ ನವಲೆನಾಡಧಿಪತಿ ಕುಱುವಂದಗುಲದ ಪೆರ್ವಯಲಾತನೇಚಂಗೀಯೆ
ವಾರಿಜಾನನೆ ವಿನಯ ಚಿಂತಾಮಣಿ ಪತಿಹಿತೆಯೊಡಗೂಡಿ ಸುಖದಿನಿಱ್ದು

ಜೆಟ್ಟಗನೆನೆ ನೆಗಲ್ದಿಹಿತಳ
ರಟ್ಟಂ ಸುಖಮಿಱ್ದು ತನ್ನ ದಾಯಿಗರಂ ತ
ಳ್ತೊಟ್ಟಜೆಯಿನಿಱಿದಡವನಂ
ನೆಟ್ಟನೆ ತಲೆಕಾಡಲುಯ್ದು ಕೊಂದಂ ನರಪಂ

ಕಲಿಕಾಲವೇಳನೆನಿಸಿದ
ಕಲಿ ಚಾಗಿಯನಿಱಿದು ಕೊಂದರೆಂಬುದು ಮಾತಂ
ಲಲಿತಾಂಗಿ ಕೇಳ್ದು ರವಿಗನ
ಕುಲದೀಪಕಿ ಸಾಯಲೆಂದು ಕೊಂಡಕೆ ನಡೆದಳ್

ತಂದೆಯುಮಬ್ಬೆಯುಮೊಡನೆಯೆ
ಬಂಧುಗಳುಂ ಬಂದು ಮಗಳೆ ಸಾಯದೆ ಮಾಣ್ ನೀ
ನೆಂದೆಲ್ಲಂ ಕಾಲ್ವಿಡಿದಡ
ಸಿಂದಿತೆ ದೇಕಬ್ಬೆ ಮುನಿದು ಬಗ್ಗಿಸಿ ನುಡಿದಳ್
ನುಗುನಾಡಧಿಪತಿ ರವಿಗನ
ಮಗಳಾಗಿಯುಮಂತೆ ನವಿಲೆನಾಡಧಿಪತಿಗಾಂ
ನೆಗಟಿ ಸತಿಯಾಗಿ ಬಾಳ್ವುದು
ಬಗೆದರ್ಪೆನೆ ಕೊಟ್ಟ ಕೊಂಡ ಮನೆಯ ಸಮಟಿಯಲ್
ಎಂದು ಪಂಚ್ಕೀದಿಸಿ ನಯ
ದಿಂದಂ ದೇವಂಗೆ ತೋಂಟಖಂಡದ ಪುಣ್ಣಂ
ನಂದಾದೀವಿಗೆಗಿತ್ತರ
ಏಂದಾನನೆ ಸಲೆ ನಿವೇದ್ಯಕೆಂದನುನಯದಿಂ
ಮಡದಿ ಸಲಿಗೇಳಿಗಟ್ಟಿಯ
ಪಡುವಣ ಕಡೆಯಲ್ಲಿ ತೆಂಕಲಯ್ಗೊಳ ಬೆಳೆಯಂ
ಕದುಗೂರ್ತು ಕೊಟ್ಟು ನುಗುನಾ
ಡೊಡೆಯನ ಕುಲಪುತ್ರಿ ಪೆಟ್ಟಿ ಮತ್ತಂ ಮತ್ತಂ

ನೆರೆಪೆಲ್ಲಂ ಬೇಡ ಮಾಣೆಂದಡೆ ನುಡಿಯದಿರಿಂ ಪೋಗಿಮಾಂ ಮಾಣೆನೆಂದಾ
ವರದಿಂದಂ ಭೂಮಿ ಪೊಂಪುಟ್ಟಿಗೆ ಪಸುಧನಮುಂ ನೀಡುತುಂ.... ದೇ
ವರ ದೇವಂಗಟ್ಟಿಯುಂ ಕಯ್ಮುಗಿದುರಿವುರಿಯಂ ಪೊಕ್ಕು ದೇಕಬ್ಬೆ ತನ್ನಂ
ಧರೆಯೆಲ್ಲಂ ಮೆಚ್ಚಿ ನಿಚ್ಚಂ ಪೊಗಟಿ ನೆಗಟುತುಂ ದೇವಲೋಕಕ್ಕೆ ವೋದಳ್

ಶ್ರೀರಮಣೆ ಗೌರಿ ಶಚಿ ಧಾರಿಣಿಯ ಪುತ್ರಿ ರತಿ ಭೂರಮಣಿಯಂದದ
ಸರೂಪವಜಿವೊಳ್ಪಾ
ದಾರೆ ಜಯಧಾರೆ ಜಸಧಾರೆ ನಯಧಾರೆ ಭಯಹಾರೆ ಪತಿಭಕ್ತೆ
ಧೃತಶಕ್ತೆಯೆನೆ ಸಂದೀ
ವೀರನಿಧಿಯಂ ಚಲದ ವಾರಿನಿಧಿಯಂ ಗುಣದ ಚಾರುನಿಧಿಯಂ ನೆಗಟ್ದುದೇ
ಕಲೆಯನಿಂತೀ
ನಾರಿಜನರನ್ನಮನದಾರೊ ಮಜಿವರ್ ಸಕಳ ಧಾರಿಣಿಯೊಳಿಂತು ವರಕಾಂತೆ
ದೊರೆಯಾವಳ್

ಪಂಡಿತಾಶ್ರಯಂ ನುಗುನಾಡ ರಾಘವಂ ಮುನಿವರ ಸಿಂಗಮೋಚಕದಾವಳಂ
ಚಂಡಪಿಕ್ರಮಂ ಕುಡಿಯರವಲ್ಲಭಂ ಕಲಿಕಾಲಕರ್ಣಂ ಮಚ್ಚರಿಪವರ
ಗಂಡಂ ವಂದಿ ಚಿಂತಾಮಣಿ ಶಿವಪಾದ ಶೇಖರಂ ನಿಜಸುತೆಗನುರಾಗದಿಂ
ಮಂಡಲಕ್ಕೆಲ್ಲಂ ಪಡಿಛಂದಮಾಗೆ ಶಿಲಾಸ್ತಂಭಂ ಶಾಸನಮಾಗೆ ನಟ್ಟಂ

ಶ್ರೀ ದೇಕಬ್ಬೆ ಮಹಾದೇವರ್ಗೆ ಬಿಟ್ಟ ಪೂಂಬೊಲಂ ತೋಂಟಖಂಡ ಮುಮಂ ನಿರ್ಮಾಣಮಟ್ಟಿಕೆಱಿಯ ತೆಂಕಣ ಕಡೆಯಲ್ ಅಯ್ದುಕೊಳಗ ಗಟ್ಟಿಯುಮಂ ಈ ವಂಸದಲ್ ಪುಟ್ಟದವರ್ ಕಾದಿರಿಸುಗೆ ಸಲಿಸದವರ್ ನರಕಭಾಜನರಪ್ಪರ್

೬. ತುರುಗೋಳು — ಗಡಿಗಾಳಗ

ವೀರಗಲ್ಲು

(i) ಸು. ೯೦೦

ಸ್ವಸ್ತಿ ಶ್ರೀ ನಂದಿವೆಮ್ಮನ್ ಪೆರ್ಬಟ್ಟಮಾಳ ಎಟ್ಟಿನ ಪುಯ್ಯಲುಳ್ ....ಪುಣ್ಯಪವಿತ್ರನ್ ಎಱಿದು ವಿಟ್ಟಾನ್.

(ii) ಸು. ೯೫೫

ಸ್ವಸ್ತಿ ಸಮಧಿಗತ ಪಂಚಮಾಶಬ್ದ ಪಲ್ಲವಕುಲಾನ್ವಯಂ ಶ್ರೀಮತ್ ಅಣ್ಣಯ್ಯ ಬೀರನೊಟಂಬಂ ರಾಜ್ಯಂಗೆಯ್ಯೆ ಪ್ರಚಂಡ ದಂಡನಾಯಕನ ಮಗಂ ಗೊಗ್ಗಿ ಉಟಲ್‌ಮಱಿಯನಾಳುತ್ತಿರೆ ಊರ ಹರಿ ಬಂದು ಕಾದೆ ಮಱಿ ವೊಕ್ಕೊನಂ ಕಾದು ಕಟಿಪ್ಪಿ ವೈರಿಬಲಕ್ಕೆ ಇದಿರಂ ನಡೆದು ಸತ್ತು ಯಶವಂ ಪಡೆದಂ.

ಒಡನೆಯವರೊಂದೆ ಮಾರ್ಬಲ
ಮೆಡೆಮಡಗದೆ ಪೊಗಟಿ ತಾಗಿ ತಳ್ತಿಱಿದು ಯಶಂ
ಬಡೆದಂ ಗೊಗ್ಗಿ ದಲೆಂಬುದು
ಪಡೆಮಾತೆನಲಾಯ್ತು ಭುವನದೊಳಗುಂ ಪೊಱಗುಂ

(iii) ೧೧೫೬

ಸ್ವಸ್ತಿ ಶ್ರೀಮಚ್ಚಾಳುಕ್ಯಚಕ್ರವರ್ತಿ ತ್ರೈಲೋಕ್ಯಮಲ್ಲದೇವಂ ಸುಖದಿಂ ರಾಜ್ಯಂಗೆಯ್ಯುತ್ತಿರೆ ಶಕನೃಪ ಕಾಳಾತೀತ ಸಂವತ್ಸರಂಗಳು ೧೦೭೭ನೆಯ ಯುವ ಸಂವತ್ಸರದಧಿಕ ಫಾಲ್ಗುಣ ಬಹುಳ೩ ಸೋಮವಾರದಂದು ಶ್ರೀಮನ್ಮಹಾ ಮಂಡಳೇಶ್ವರಂ ಜಗದೇವರಸರ ಬೆಸದಿಂ ಮದಸಾಲೆಯ ಕಾಳರಸಂ ಸಮಸ್ತ ಸಾಮಾತ್ತಿಯಂಬೆರಸು ಬಂದು ಶ್ರೀಮದನಾದಿಯಗ್ರಹಾರಂ ಕುಪ್ಪೆಗಡೆಯ ಹಳ್ಳಿ ಕೊರಕೋಡನಿಱಿದು ತುಱುವಂ ಕೊಂಡುಡೆಯುಚ್ಚಿ ಹೋಹಾಗಳಲ್ಲಿ ಹುಟ್ಟಿದ ಬಾವಗಾವುಂಡನ ಮಗಂದಿರು ದೇವಗಾವುಂಡನುಂ ಮಲ್ಲಗಾವುಂಡನುಂ ಬಿಲ್ಲುಮಂಬುಮುಂ ಕೊಂಡಿರ್ವರುಂ ಹೆಬ್ಬಾಗಿಲೊಳಡ್ಡಂ ನಿಂದು ಗುಹೆಯ ಬಾಗಿಲೊಳು ಸಿಂಹನಿರ್ಪಂತೆ ತಾಗಿ ತಳ್ತೆಸುವಾಗಳು ಕಾರಮಳೆ ಕಱಿದಂತೆಯುಂ ಕಡಂದುಱಿ ಹುಟ್ಟಿಯ ಕೆಣಕಿದಂತೆಯುಂ ಕವಿದ ಕೋಲ ಬಾಯೊಳಂ ಕಾಲ ಬಾಯೊಳಂ ಜವನೊಕ್ಕಲಿಕ್ಕಿದಂತೆ ತೊತ್ತಳದುಳಿದವೋಲು ತಂಕಯ್ಯ ಸರಮಂ

ಬಿಲ್ಲ ತಿರುವಂ ಪಱಿವನ್ನ ವೆಚ್ಚು ನೆಱಿಯದೆ ಕಟ್ಟದಲಗಂ ಕಿತ್ತು..ಕುಱಿಯ ಹಿಂಡಂ ತೋಳಂ ಪೊಕ್ಕಂತೆಯುಂ ಕರ್ಬುದೋಂಟವನಾನೆ ಪೊಕ್ಕಂತೆಯುಂ ಪೊಕ್ಕು ಕುತ್ತಿ ನೂಂಕುತ್ತ ಬಪ್ಪಾಗಳು

ಮಲೆದಿದಿರಾಂತ ಮಾರ್ವಲವನಳ್ಕುಱಿ ತಾಗಿ ಭುಜಪ್ರತಾಪದಿಂ
ದಲಗನೆ ಕಿರ್ತು ಪೊಯ್ಯೆ ನಿರತಂ ಕಣಕಾಲ್ ಮೊಳಕಾಲ್ ಮುಖಂ ಭುಜಂ
ತಲೆಬಳೆಯಾಗೆ ಸಂಬಳಿತ ಪೋಪಿನಮೊಂದೆರಡಟ್ಟಿಯೋಡಲುಂ
ತೊಲಗದೆ ನಿಂದು ತಳ್ತಿಱಿದರಿರ್ಬರುಮಾಹವ ರಂಗಭೂಮಿಯೊಳ್

ಅಂತವರಿಬ್ಬರುಂ ಪೋಗದೆ ನಿಂದುದಂ ಕಂಡು ಪೊರಿದಾಳು ಕುದುರೆಯ ಮೊರ್ಬಂ ತಾಗಿಯೆಸಲ್ವಿಱಿಯಲುಂ (?) ಕೋಲ್ ಕೊಂತಂಗಳೂಡಾಗಿ ಬಿರ್ದು ಸುರಲೋಕಪ್ರಾಪ್ತರಾದಡವರಿರ್ಬರ ಪೆಣನಂ ಮೆಟ್ಟಿ ತುಱು ಪರಿಯಲವರಿಬ್ಬರಿಂ ಕಿಱಿಯ ಬೊಪ್ಪಗಾವುಂಡ ತಮ್ಮಣ್ಣಂದಿರಿಬ್ಬರ ಕಳೇಬರವಂ ಕಂಡು ಸೈರಿಸ ಲಾಱಿದೆ ನಿಮ್ಮಾದುದನಪ್ಪೆನಲ್ಲದೊಡೇಂ ತುಱುವಂ ಮಗುಳ್ಚಿ ಬಪ್ಪೆನೆಂದೊಂದೆ ಮೆಯ್ಯೊಳು ಒಂದ ಹತ್ತ್ತಲಾತಂಗೆ ಪಡಿಬಲದಾಗಿ ಮುಂಡಳಿಕಂ ವುದ್ದರೆ ಯೆಕ್ಕ ಲರಸನಾಳ್ಕುದುರೆಯಂ ಹೇಳಲಾ ನೆರವಂ ಕೂಡಿಕೊಂಡು ಹಾಲ್ಗಟ್ಟದ ಬಯಲ ಲೊಡ್ಡನೊಡ್ಡಿದರಿಬಲವಂ ಬೊಪ್ಪಗವುಂಡ ಕೊಂದು ತುಱುವಂ ಮಗುಳ್ಚಿ ಕೊಂಡು ಬಂದಣ್ಣಂದಿರಂ ಸಂಸ್ಕಾರಿಸಿ ಜಳದಾನಕ್ರಿಯೆಯಂ ಪರೋಕ್ಷವಿನಯ ಮುಮಂ ಮಾಡಿ ಇರ್ಬರ್ಗಂ ಕಲ್ಲಂ ನಿಱಿಸಿದಲ್ಲಿ ಮಂಗಳ ಮಹಾಶ್ರೀ ಶ್ರೀ

(iv) ೮೦೦

ಸ್ವಸ್ತಿ ಪ್ರಭೂತವರ್ಷ ಶ್ರೀ ಪೃಥಿವೀವಲ್ಲಭ ಮಹಾರಾಜಾಧಿರಾಜ ಪರಮೇ ಶ್ವರ ಭಟ್ಟಾರಕ ಶ್ರೀ ಗೋಇಂದರಸರ್ ಚತುಸ್ಸಮುದ್ರಾಂತ ವಸುಧೆಯಾನ್ ಧನಳೈಕಛತ್ರಛಾಯೆಯಿಂದಾಳೆ । ಬನವಾಸಿಮಂಡಲಮಾನಾಸಮುದ್ರಾಂತಂ ರಾಜಾದಿತ್ಯರಾಸರ್ ಆಳೆ। ಆಳುವ ಱೇಡಮಱುಸಾಸಿರಮುಮಾನ್ ಚಿತ್ರವಾಹನ ನಾಳುತ್ತುಂ ಬಾಯ್ಕೇಳದಿರೆ ಮುನಿದು ಕೊಲ್ಲಿ ಪಲ್ಲವನೊಟಂಬಂ ನೊಟಂಬರಾ ದಿತ್ಯನನ್ ವೆಸಸಲಾ ಕಾಕರಾಸರುಮೆಟ್ಟು ಪೆರ್ಗುಂಜಿಯ ಕೋಟೆಯಾನ್ ರೋಹಿಸಿ ಬಿಟ್ಟು ಎರಡುಂ ಬಲದ ವೀರಭಟರ್ಕಳೊಟ್ಟು ಪೊಜಮಟ್ಟು ಬಿಲ್ವಿಲ್ಲೊಳ್ ಕುದುರೆ ಕುದುರೆಯೊಳ್ ಕಿಟ್ಟ ಅತಿತುಮುಲಕಾಳಗಂ ಪೆಟ್ಟು ಬಲದ ಕಯ್ಯಂ ಚಿತ್ರವಾಹನನೊತ್ತಿ ಪುಗುತ್ತಂದು ಕಾದಿಸೆ ಕಂಡು ಕುಲಮುದ್ದ ನೀನೀ ಕಯ್ಯ ಪೊಕ್ಕು ಕಾದೆಂದು ಬೆಸಸೆ ಪ್ರಸಾದಮೆಂದೆಯ್ದಿ ಕೆಟ್ಟ ಕಾದಿ ಮಱುವಕ್ಕ ದವರ ಮೆಯ್ಮೆಯ್ಯಂಬಾಗೆ ಎಚ್ಚೋಡಿಸಿ ಆ ಕಯ್ಯಂ ಗೆಲ್ದು ತಾನುಂ ಪಲವುಂ ಎಸುವೆತ್ತು ಎಯ್ದೊದೆವಪ್ಪಿದಪ್ಪೊಲ್ ಕಣೆಪಂಜರದೊಳೆಱಿಗಿ ಭೀಷ್ಮನ್ ವಿಟ್ಟಿಂತೆ ನೆಲ ಮುಟ್ಟದೆ ಬಿಟಿಪ್ಪೋನಾನ್ ದೇವಗಣಿಕೆಯರರ್ಘ್ಯಂಬಿಡಿದು ಬಂದಿದಿರ್ಗೊಂ ಡುಯೆ ವೀರಲೋಕಕ್ಕೆ ಸಂದೋನ್। ಅರಬದ್ದಗಿಯರವಾದ ಪುಲಿಮಾಡಿದಾನ್

ಪರಿಗೆಯ ಬಂದುಗಿಯರ್ ಈ ಊರ್ಗೆ ಬಂದು ಆರಿದರೊಳ್ ಛಲಮೆನೆ ನಾಲ್ಕೆಟ್ಟಿನ ಬಲನ ಕಿಡಿಸಿ ಆಱಿಟ್ಟುವಾಡಿ ಮತ್ತಂ ನಿಲಲಾಱಿದೆ ಓಡಿದ ಅದನ್ಪಟ್ಟಿಕೆ ಕುಲಮುದ್ದಗಾಮಿಗಾಗೆ ಅರಸರ್ ದಯೆಗೆಯ್ದು ಪೂರ್ವಾಚಾರದ ನಾಲ್ಕೆಟ್ಟಿನೊಳ್ಪೊಟಿಸಿ ಗಟ್ಟಿಯನಳದು ದಯೆಗೆಯ್ದು ಬಿಟ್ಟ ಕುಂದಗೆ ಸೇವೆಯ ಕಲಿಯಮ್ಮ ಬೆಳ್ಳಣಿಯ ಪದುಮಣ್ಣನ್ ಕರ್ಬುರಸೋಮದಿ ಮಿಟ್ಟಸೆಯ ನರಸಿಂಗನ್ ಸಿಮ್ಮನೂರ ಕಿಳ್ಳಮ್ಮನ್ ಆಂಡುಗಿಯರಟ್ಟಗನ್ ಬೆದೆಮೆಟ್ಟಯಾಲಮ್ಮಾನ್ ಬಳ್ಳಿಗಾಮೆಯಗಾಮುಂಡನ್ ಗುಂದುಗುಡೆಯಾ ಸಾತ್ತುಗಾಮುಂಡ ಇಂತೀ ಎನೆಬರು ಶ್ರೀಕರಣ ಸಹಿತಂ ಬಿಟ್ಟಾರಿದನ್ ಕೆಡಿಪ್ಪೋನುಂ ಕೆಡೆಬಾಟಿಪ್ಪೋನುಂ ಪಂಚಮಹಾಪಾತಕಸಂಯುಕ್ತನಕ್ಕುಂ ಬಾರಣಾಸಿಯೊಳ್ ಸಾಸಿರ ಕವಿಲೆಯನ್ ಕೊಂದೋನ ಲೋಕಕ್ಕೆ ಸಂಪೋನುಮಕ್ಕುಂ.

೭. ದೇವಾಲಯದ ದತ್ತಿ ೧೦೭೧

ಶ್ರೀ ಸ್ವಸ್ತಿ ಸಕವರಿಷ ವೊಂಬಯ್ನೂಱಿ ನಾಲ್ವತ್ತಮೂಜನೆಯ ರೌದ್ರಿ ಸಂವತ್ಸರದ ಆಷಾಡವಾಸದ ಪುಣ್ಣವೆ ಉತ್ತರಾಷಾಡ ನಕ್ಷತ್ರಂ ಮಕರ ಚಂದ್ರಂ ಬೃಹಸ್ಪತಿವಾರಂ ಶ್ರೀ ಮುಡಿಗೊಂಡ ರಾಜೇಂದ್ರಚೋಲಂ ರಾಜ್ಯಂ ಗೆಯ್ಯುತ್ತಿರೆ ಇಯಾಂಡು ಒಂಬತ್ತಾವುದಱುಳ್ ನುಗುನಾಡ ಒಜಿಯ ಬೆಳತೂರ ಒಡೆದು ಬಿಟ್ಟು ಭೂಮಿಲಬ್ಬವಾಗಿ ಕೆಟ್ಟ ದೇಗುಲಮಂ ಮಾಡಿಸಿ ಕಿಟ್ಟು ಪಟ್ಟ ಲಿಂಗಮಂ ಪ್ರತಿಷ್ಠೆಗೆಯ್ದು ಮುರುಗಸೆಟ್ಟಿಯ ಮಗಂ ಬಸವಯ್ಯಂ ರುದ್ರ ಹೋಮಂ ಗೆಯ್ದು ಸಹಸ್ರ ಭೋಜನಂ ಮಾಡಿ ಬಲಿಯಂ ಕಳೆದು ಧರ್ಮಂ ಗೆಯ್ದು ಬೆಳತೂರ ಜವನಿಗಾವುಂಡನ ಮಗಂ ಜಯಂಗೊಂಡ ಚೋಟಿಪೆರ್ಮಾಡಿ ಗಾವುಂಡನಲ್ಲಿ ಮುರುಗಸೆಟ್ಟಿಯ ಮಾಗ್ಗಬ್ಬೆಯ ಮಗಂ ಸುಪುತ್ರಂ ಪುಟ್ಟಿದ ಬಸವಸೆಟ್ಟ ಪದಿನಯ್ಞಳ ನೀರ್ಮಣ್ಣ ಅಯ್ಞಳ ಪೊಂಬೊಲನುಂ ಪೊನ್ನಱಿ ಕೊಟ್ಟು ಮಣ್ಣಱಿಂ ಕೊಂಡು ಧಾರಾಪೂರ್ವಕದಿಂದ ಮೂರುಂ ಅಯ್ಞಣ್ಣಿಗರುಮಱಿಯೆ ಈ ದೇಗುಲಕ್ಕೆ ಬಿಟ್ಟಂ ಬಸವಸೆಟ್ಟ ನಂದಾದೀವಿಗೆಗ ಕೊಟ್ಟಂ ಈ ದತ್ತಿಯನಟಿದವಂ ಈ ದೇಗುಲವುಂ ಕವಿಲೆಯುಂ ವಾರಣಾಸಿಯುಮನಟಿದ ಪಾತಕಕ್ಕೆ ಸಂದಂ.

೮. ಬುಕ್ಕರಾಯನ ಧರ್ಮ ಸಮದೃಷ್ಟಿ ೧೩೬೮

ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ
ಪಾಷಂಡ ಸಾಗರ ಮಹಾಬಡವಾಮುಖಾಗ್ನಿಃ
ಶ್ರೀರಂಗರಾಜ ಚರಣಾಂಬುಜ ಮೂಲದಾಸಃ
ಶ್ರೀ ವಿಷ್ಣುಲೋಕ ಮುನಿಮಂಟಪ ಮಾರ್ಗದಾಯೀ
ರಾಮಾನುಜೋ ವಿಜಯತೇ ಯತಿರಾಜರಾಜಃ

ಶಕವರ್ಷ ೧೨೯೦ನೆಯ ಕೀಲಕ ಸಂವತ್ಸರದ ಭಾದ್ರಪದ ಶು॥ ೧೦ ಬೃ॥ ಸ್ವಸ್ತಿ ಶ್ರೀಮನ್ಮಹಾಮಂಡಳೇಶ್ವರಂ ಅರಿರಾಯ ವಿಭಾಡ ಭಾಷೆಗೆ ತಪ್ಪುವ ರಾಯರ ಗಂಡ ಶ್ರೀ ವೀರಬುಕ್ಕರಾಯನು ಪೃಥ್ವೀರಾಜ್ಯವ ಮಾಡುವ ಕಾಲದಲ್ಲಿ ಜೈನರಿಗೂ ಭಕ್ತರಿಗೂ ಸಂವಾದವಾದಲ್ಲಿ ಆನೆಯಗೊಂದಿ ಹೊಸಪಟ್ಟಣ ಪೆನುಗುಂಡೆ ಕಲ್ಲೆಹದಪಟ್ಟಣವೊಳಗಾದ ಸಮಸ್ತ ನಾಡ ಭವ್ಯಜನಂಗಳು ಆ ಬುಕ್ಕರಾಯಂಗೆ ಭಕ್ತರು ಮಾಡುವ ಅನ್ಯಾಯಂಗಳನು ಬಿನ್ನಹಂ ಮಾಡಲಾಗಿ ಕೋವಿಲ್ ತಿರುಮಲೆ ಪೆರುಮಾಳ್ ಕೋವಿಲ್ ತಿರುನಾರಾಯಣಪುರ ಮುಖ್ಯವಾದ ಸಕಳಾಚಾರ್ಯರೂ ಸಕಳ ಸಮಯಿಗಳೂ ಸಕಳ ಸಾತ್ವಿಕರೂ ಮೋಷ್ಟಿಕರು ತಿರುಪಣಿ ತಿರುವಿಡಿ ತಣ್ಣೀರವರು ನಾಲ್ಕತ್ತೈಂಟು ಜನಂಗಳು ಸಾವಂತ ಬೋವಕ್ಕಳು ತಿರಿಕುಲ ಜಾಂಬವಕುಲವೊಳಗಾದ ಹದಿನೆಂಟು ನಾಡ ಶ್ರೀವೈಷ್ಣವರ ಕೈಯ್ಯಲು ಮಹಾರಾಯನು ವೈಷ್ಣವ ದರ್ಶನಕ್ಕೆಯೂ ಜೈನದರ್ಶನಕ್ಕೆಯೂ ಭೇದವಿಲ್ಲವೆಂದು ರಾಯನು ವೈಷ್ಣವರ ಕೈಯ್ಯಲು ಜೈನರ ಕೈವಿಡಿದುಕೊಟ್ಟು ಈ ಜೈನದರ್ಶನಕ್ಕೆ ಪೂರ್ವ ಮರಿಯಾದೆಯಲು ಪಂಚಮಹಾವಾದ್ಯಂಗಳೂ ಕಳಶವೂ ಸಲುವುದು ಜೈನದರ್ಶನಕ್ಕೆ ಭಕ್ತರ ದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವ ಹಾನಿವೃದ್ಧಿಯಾಗಿ ಪಾಲಿಸುವರು ಈ ಮರ್ಯಾದೆಯಲು ಎಲ್ಲಾ ರಾಜ್ಯದೊಳಗುಳ್ಳಂತಪ ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವ ನಟ್ಟು ಪಾಲಿಸುವರು ಚಂದ್ರಾರ್ಕಸ್ಥಾಯಿಯಾಗಿ ವೈಷ್ಣವ ಸಮಯವೂ ಜೈನದರ್ಶನವೂ ರಕ್ಷಿಸಿಕೊಂಡು ಬಪೆವು ವೈಷ್ಣವರೂ ಜೈನರೂ ಒಂದು ಭೇದವಾಗಿ ಕಾಣಲಾಗದು ಶ್ರೀ ತಿರುಮಲೆಯ ತಾತಯ್ಯಂಗಳು ಸಮಸ್ತ ರಾಜ್ಯದ ಭವ್ಯಜನಂಗಳ ಅನುಮತದಿಂದ ಬೆಳುಗುಳದ ತೀರ್ಥದಲ್ಲಿ ವೈಷ್ಣವ ಅಂಗರಕ್ಷ್ಣೆಗೋಸುಕ ಸಮಸ್ತ ರಾಜ್ಯದೊಳಗುಳ್ಳಂತಪ ಜೈನರ ಬಾಗಿಲುಗಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ೧ ಪಣ ಕೊಟ್ಟು ಆ ಎತ್ತಿದ ಹೊನ್ನಿಂಗೆ ದೇವರ ಅಂಗರಕ್ಷ್ಣೆಗೆ ಯಿಪ್ಪತ್ತಾಳನೂ ಸಂತಪಟ್ಟು ಪುಕ್ಕ ಹೊನ್ನಿಂಗೆ ಜೀರ್ಣ ಜಿನಾಲಯಂಗಳಿಗೆ ಸೊಪೆಯನಿಕ್ಕುವುದು ಈ ಮರಿಯಾದೆಯಲು ಚಂದ್ರಾರ್ಕರುಳ್ಳನ್ನಂ ತಪ್ಪಲೀಯದೆ ವರ್ಷ ವರ್ಷಕ್ಕೆ ಕೊಟ್ಟು ಕೀರ್ತಿಯನೂ ಪುಣ್ಯವನೂ ಉಪಾರ್ಜಿಸಿಕೊಂಬುದು ಈ ಮಾಡಿದ ಕಟ್ಟಳೆಯನು ಆವನೊಬ್ಬನು ವಿರಾಜಿವನು ರಾಜದ್ರೋಹಿ ಸಂಘಸಮುದಾಯಕ್ಕೆ ದ್ರೋಹಿ ತಪಸ್ವಿಯಾಗಲಿ ಗ್ರಾಮಿಣಿಯಾಗಲಿ ಈ ಧರ್ಮವ ಕೆಡಿಸಿದ ರಾದಡೆ ಗಂಗೆಯ ತಡಿಯಲ್ಲಿ ಕಪಿಲೆಯನೂ ಬ್ರಾಹ್ಮಣನನೂ ಕೊಂದ ಪಾಪದಲ್ಲಿ ಹೋಪರು.

ಸ್ವದತ್ತಂ ಪರದತ್ತಂ ವಾ ಯೋ ಹರೇತಿ ವಸುಂಧರಾಂ
ಷಷ್ಟಿವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ

ಎರಡನೆಯ ತೆನೆ

ಪೂರ್ವ ಕವಿಗಳಿಂದ

ಒಳಪಿಡಿ

I ಕನ್ನಡನಾಡಿನ ಚೆಲುವು ೧೭
ನೃಪತುಂಗ—ಪಂಪ—ಅಂಡಯ್ಯ—ವಿರೂಪಾಕ್ಷ—
ರತ್ನಾಕರ—ಸರ್ವಜ್ಞ

II ಕನ್ನಡ — ಸಕ್ಕದ ೩೧
ಕೇಶಿರಾಜ—ನಯಸೇನ—ಅಂಡಯ್ಯ—ಮುದ್ದಣ—
ಮಹಲಿಂಗರಂಗ

III ಕಾವ್ಯದ ತಿರುಳು ೨೩
ನೃಪತುಂಗ—ಪಂಪ—ರನ್ನ—ನಯಸೇನ—ನೇಮಿಚಂದ್ರ—
ಜನ್ನ—ಹರಿಹರ—ರಾಘವಾಂಕ—ಚಾಮರಸ—ಸರ್ವಜ್ಞ

IV ನಮ್ಮ ಕವಿಗಳ ಹೆಮ್ಮೆ ೨೭
ರನ್ನ—ಷಡಕ್ಷರಿ—ಕುಮಾರವ್ಯಾಸ—ಲಕ್ಷ್ಮೀಶ—ರತ್ನಾಕರ

V ಕನ್ನಡಿಗರುಸಿರು, ಕಣ್ಣು
ಪಂಪ: ಜಿನಸ್ತುತಿ ೩೧
ನಾಗಚಂದ್ರ: ಜಿನಸ್ತುತಿ ೩೨
ಬೊಪ್ಪಣ: ಗೊಮ್ಮಟನ ಸ್ತುತಿ ೩೩
ರನ್ನ: ವೈರಾಗ್ಯ ೩೫
ರತ್ನಾಕರ: ಆತ್ಮ—ಕರ್ಮ—ಮುಕ್ತಿ ೩೬
ಬಸವಣ್ಣ: ಧರ್ಮದ ಕೆಚ್ಚು ೩೮
ಹರಿಹರ: ಸಂಗನು ಬಸವಣ್ಣನವರನ್ನು ಕಲ್ಯಾಣಕ್ಕೆ
ಕಳುಹಿಸಿದ್ದು ೪೩
ಬಸವಣ್ಣನವರ ಗುಣ ೪೫
ಮಹಾದೇವಿಯಕ್ಕ: ಶಿವನೇ ನನ್ನ ಗಂಡ ೪೬
ಹರಿಹರ: ಭಕ್ತಿಯ ಆವೇಶ ೪೯
ಚಾಮರಸ: ಅಲ್ಲಮಪ್ರಭುವಿನ ಕರುಣೆ ೫೨
ಷಡಕ್ಷರಿ: ಶಿವಪೂಜೆ ೫೩
ದಾಸರ ಪದಗಳು: ಪುರಂದರದಾಸರು ೫೪
ಕನಕದಾಸರು ೫೯
ಚಿಕದೇವರಾಜ: ಬಿನ್ನಪ ೬೨
ಗೀತಗೋಪಾಲ ೬೩
ಹೊನ್ನಮ್ಮ: ಹದಿಬದೆಯ ಧರ್ಮ ೬೬
ಶ್ರೀವಾಸ: ಮುಮ್ಮಡಿ ಕೃಷ್ಣರಾಜ ಒಡೆಯರ ವರ್ಧಂತಿ ೬೭
ಆಯ್ಯಶಾಸ್ತ್ರಿ: ನಾಲ್ವಡಿ ಕೃಷ್ಣರಾಜ ಒಡೆಯರವರು
ರಾಜ್ಯಭಾರ ವಹಿಸಿದ್ದು ೬೮

I. ಕನ್ನಡ ನಾಡಿನ ಚೆಲುವು

ನೃಪತುಂಗ: ೮೧೪–೮೭೭ ಕವಿರಾಜಮಾರ್ಗ

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ.....

ಅದಱೊಳಗಂ ಕಿಸುವೊಟಲಾ
ವಿದಿತ ಮಹಾಕೊಪಣ ನಗರದಾ ಪುರಿಗೆಱಿಯಾ
ಸದಭಿಸ್ತುತಮಪ್ಪೊಂಕುಂ
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್

ಪಂಪ: ೯೪೧ ವಿಕ್ರಮಾರ್ಜುನ ವಿಜಯ

ಜಲ ಜಲನೊ[ಟ್ಟು]ತಿರ್ಪ ಪರಿಕಾಲ್ ಪರಿಕಾಲೊಳಳುರ್ಕೆಗೊಂಡ ನೆ
ಯ್ದಿಲ ಪೊಸವೂ ಪೊದಟ್ಟಿ ಪೊಸನೆಯ್ದಿಲ ಕಂಪನೆ ಬೀಱಿ ಕಾಯ್ತ ಕೆಂ
ಗೊಲೆಯೊಳೆ ಜೋಲ್ತ ಶಾಳಿ [ನವ] ಶಾಳಿಗೆ ಪಾಯ್ವ ಶುಕಾಳಿ ತೋಱಿ ಕ
ಯ್ವೊಲಗಳೆನೊಪ್ಪಿ ತೋಱಿ ಸಿರಿ ನೋಡುಗುಮಾ ವಿಷಯಾಂತರಾಳದೊಳ್

ಬೆಳೆದೆಱಗಿರ್ದ ಕಯ್ವೊಲನೆ ಕಯ್ವೊಲನಂ ಬಳಸಿರ್ದ ಪೂತ ಪೂ
ಗೊಳಗಳೆ ಪೂತ ಪೂಗೊಳಗಳಂ ಬಳಸಿರ್ದ ವಿಚಿತ್ರ ನಂದನಾ
ವಳಗಳೆ ನಂದನಾವಳಿಗಳಂ ಬಳಸಿರ್ದ ಮದಾಳಿ ಸಂಕುಲಂ
ಗಳೆ ವಿಷಯಾಂಗನಾಲುಳಿತ ಕುಂತಳವಂತೆವೊಲೊಪ್ಪಿ ತೋಱುಗುಂ

ಲಳಿತ ವಿಚಿತ್ರ ಪತ್ರ ಫಲ ಪುಷ್ಪ ಯುತಾಟವಿ ಸೊರ್ಕಿದಾನೆಯಂ
ಬೆಳೆವುದು [ದೇ]ವಮಾತೃಕನೆನಿಪ್ಪ ಪೊಲಂ ನವಗಂಧ ಶಾಳಿಯಂ
ಬೆಳೆವುದು ರಮ್ಯ ನಂದನ ವನಾಳಿ ವಿಯೋಗಿ ಜನಕ್ಕೆ ಬೇಟಮುಂ
ಬಳೆವುದು ನಾಡ ಕಾಡ ಬೆಳಸೀ ಬೆಳಸಾ ವಿಷಯಾಂತರಾಳದೊಳ್

ಆವಲರುಂ ಪಣ್ಣುಂ ಬೀ
ತೋವವು ಗಡ ಬೀಯವಲ್ಲಿ ಮಲ್ಲಿಗೆಗಳುಮಿ
ಮ್ಮಾವುಗಳುಮೆಂದೊಡಿನ್ ಪೆಱ
ತಾವುದು ಸಂಸಾರಸಾರ ಸರ್ವಸ್ವ ಫಲಂ

ಮಿಡಿದೊಡೆ ತನಿಗರ್ಬು ರಸಂ
ಬಿಡುವುವು ಬಿರಿದೊಂದು ಮುಗುಳ ಕಂಪಿನೊಳೆ ಮೊಗಂ
ಗಿಡುವುವು ತುಂಬಿಗಳಬ್ಜಮೆ
ವಡುವುವು ಕುಡಿದೊಂದು ಪಣ್ಣ ರಸದೊಳೆ ಗಿಳಿಗಳ್

ಸುತ್ತಿಱಿದ ರಸದ ತೊಱಿಗಳೆ
ಮುತ್ತಿನ ಮಾಣಿಕದ ಪಲವುಮಾಗರಮೆ ಮದೋ
ನ್ಮತ್ತ ಮದಕರಿ ವನಂಗ [ಳೆ]
ಸುತ್ತಲುಮಾ ನಾಡ ಸಿರಿಯನೇನಂ ಪೊಗಟ್ಪೆಂ

ಬನವಾಸಿ

ಸೊಗಯಿಸಿ ಬಂದ ಮಾಮರನೆ ತಳೆ್ತಲೆವಳ್ಳಿಯೆ ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಕೂಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಟಿಸ್ಪೊಡಾವ ಬೆ
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೊಳ್

ಚಾಗದ ಭೋಗದಕ್ಕರದ ಗೇಯದ ಗೊಟ್ಟಯಲಂಪಿನಿಂಪುಗ
ಳ್ಗಾಗರವಾದ ಮಾನಿಸರೆ ಮಾನಿಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮಜುಮುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್

ತೆಂಕಣ ಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡವಾದ ಕೆಂದಲಂ
ಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ

ಆಂಡಯ್ಯ: ಸು. ೧೨೩೫ ಕಬ್ಬಿಗರ ಕಾವ

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾಱನಾ
ನೆಲನಂ ಮತ್ತಿನ ಮಾನಿಸರ್ ಪೊಗಟಿಲೇನಂ ಬಲ್ಲರೆಂಬೊಂದು ಬ
ಲ್ಲುಲಿಯಂ ನೆಟ್ಟನೆ ತಾಳ್ದ ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು ಮೆ
ಲ್ಲೆಲರಿಂ ಪೂತ ಕೊಳಂಗಳಿಂ ಕೆಱಿಗಳಿಂ ಕಾಲೂರ್ಗಳಿಂ ಕಯ್ಗಳಿಂ

ಇವು ಪಳ್ಳಿಗಳಿವು ಪಟ್ಟಣ
ಮಿವು ಕೆಱಿಗಳಿವೆಱಿನಿಂದ ಮುಗಿಲೋಳಿಗಳಿಂ
ತಿವು ಕಾಡಿವು ಪೆಸರ್ವಡೆದೊ
ಪ್ಪುವ ಬನಮೆಂದಱಿದು ಪೇಟ್ಪುದರಿದಾ ನಾಡೊಳ್

ಮಲ್ಲಿಗೆಯಲ್ಲದೆ ಸಂಪಗೆ
ಯಲ್ಲದೆ ದಾಳಿಂಬಮಲ್ಲದೊಪ್ಪುವ ಚೆಂದೆಂ
ಗಲ್ಲದೆ ಮಾವಲ್ಲದೆ ಕಾಂ
ಗಲ್ಲದೆ ಗಿಡುಮರಗಳೆಂಬುವಿಲ್ಲಾ ನಾಡೊಳ್

ಅಡರ್ದೇಱಿ ಕೋಡಗಂಗಳ್
ಕಡುಪಿಂದೀಡಾಡೆ ಗಱಿಲನೊಡೆದೆಳಗಾಯಿಂ
ದೆಡೆವಿಡಿದೊಸರ್ವೆಳನೀರ್ಗಳ್
ಮಡುಗೊಂಡೋವುತ್ತುಮಿರ್ಪುವಲ್ಲಿಯ ಬನಮುಂ

ಉಜಿ ಕಾಯ್ದು ಬಿಸಿಲೊಳೆಮ್ಮಂ
ಮಜಿಪುಂ ಕೊರಗಿಸದೆ ಪೊರೆದುದೆಂದೊಲವಿಂ ಬಂ
ದೆಜಗುವವೋಲ್ ತೆನೆಯಂ ಕಾ
ಲ್ಗೆಜಗುವ ಕಟವೆಗಳವೆಲ್ಲಿಯುಂ ಸೊಗಯಿಸುಗುಂ

ನೆಯ್ದಿಲ್ಲೊಳಂಗಳೆಡೆಯೊಳ್
ಕಾಯ್ವೋವದೆ ಪೋರ್ವ ಪಲವು ನೀರ್ವಕ್ಕಿಗಳಿಂ
ದೆಯುಣ್ಮುವ ಸೀರ್ಪನಿಯೊಳ್
ತೊಯ್ವೊಯ್ಯನೆ ಗಾಳಿ ಕೂಡೆ ತೀಡುತ್ತಿರ್ಪುಂ

ವಿರೂಪಾಕ್ಷ : ೧೫ಲಳ ಚೆನ್ನಬಸವ ಪುರಾಣ

ಅಲ್ಲಿಗಲ್ಲಿಗೆ ಜೆಳಿವ ಜೆಳಿಗಳಿಂ ಮಳಿಗಳಿಂ
ವಲ್ಲಿಗಲ್ಲಿಗೆ ವನಸ್ಪಳಗಳಿಂ ಕೊಳಗಳಿಂ
ವಲ್ಲಿಗಲ್ಲಿಗೆ ರನ್ನ ವರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ
ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ
ವಲ್ಲಿಗಲ್ಲಿಗೆ ನೆರೆದ ಶುಕಗಳಿಂ ಪಿಕಗಳಿಂ
ವಲ್ಲಿಗಲ್ಲಿಗೆ ಗವಾಸ್ಪದಗಳಿಂ ನವಗಳಿಂದಾ ದೇಶಮೊಪ್ಪಿರ್ಪುದು

ಕಂಜ ಕುಮುದಂಗಳಿಲ್ಲದ ಸರಂ ಸರದಿಂದೆ
ರಂಜಿಸದ ಶುಕಪಿಕಂ ಶುಕಪಿಕಂಗಳ್ಗೆ ಫಲ
ಮಂಜರಿಯನೀಯದಿಹ ಮಾವು ಮಾವುಗಳನಪ್ಪದ ಬಳ್ಳಿ ಬಳ್ಳಿಗಳೊಳು
ಮಂಜುಳಧ್ವನಿಗುಡದ ಪರಮೆ ಪರಮೆಗೆ ಸಂತ
ಸಂ ಜನಿಸದರಲರಲ ನವಪರಿಮಳಂಗಳಿಂ
ದಂ ಜಡಿಯದೆಳಗಾಳಿ ಎಳಗಾಳಿಯಿಲ್ಲದಾ ಬನವಿಲ್ಲವಾ ನಾಡೊಳು

ರತ್ನಾಕರ: ೧೫೫೭ ಭರತೇಶವೈಭವ

ಬಳಿಕ ಮೂರನೆಯ ಜಾವದೊಳವನೀಶನು
ನಳಿನಾಕ್ಷಿಯರು ಸಹವಾಗಿ
ನೆಲಮಾಡವೇರಿ ಮೇಲ್ಮನೆಯೊಳು ಕುಳಿತು ಪೆಂ
ಗಳಿಗಂಬುನಿಧಿಯ ತೋರಿದನು

ಕಡಲ ಮುನ್ನರಿಯೆದ ಪೆಂಗಳಚ್ಚರಿವಟ್ಟು
ನಿಡು ಬೆರಳಿಟ್ಟು ನಾಸಿಕಕೆ
ಮುಡಿಯೊಲೆದೊಲೆದು ನೋಡಿದರದರೊಂದು ಬ
ಲ್ಗಡಣೆಗೆ ಬಗೆಯೊಳು ಮೆಚ್ಚಿ

ದಿಟ್ಟಿಗೆ ಮಿಗೆ ಹಾಯ್ದು ತೋರ್ಪ ಸಮುದ್ರದ
ಕಟ್ಟಳಲಿಗೆ ಚೋದ್ಯವಟ್ಟು
ಅಟ್ಟಹಾಸವ ಮಾಡುತೊಬ್ಬರೊಬ್ಬರ ಮೈಯ
ತಟ್ಟುತ ತೋರಿ ನುಡಿದರು

ಅಟ್ಟುವ ತೆರೆಯ ಮುಂದೋಡುವ ತೆರೆಯ ಪೆ
ರ್ಬೆಟ್ಟದಂತೇಳ್ವ ತೆರೆಗಳಾ
ತೊಟ್ಟನೆ ಬಯಲಹ ತೆರೆಗಳನವರು ಕ
ಣ್ಣಿಟ್ಟು ನೋಡಿದರರ್ತಿವಡುತ

ಎಡೆಗುತ್ತಿಗಳನಲ್ಲಿಗಲ್ಲಿ ನಿಂದದ್ರಿಯ
ನಿಡುಗಲ್ಲುಗಳನದರೊಳಗೆ
ಎಡೆಯಾಡುತಿಹ ದೋಣಿ ದುಗ್ಗಿ ಕಪ್ಪಲು ದೊಡ್ಡ
ಹಡಗುಗಳಿರವ ನೋಡಿದರು

ತುಂತುರು ತೆರೆ ನೊರೆ ಸುಳಿ ಘುಳು ಘುಳು ರವ
ತೂಂತಿಟ್ಟು ಹೊಳೆವ ವಾರಿಧಿಯ
ಕಾಂತೆಯರೆಲ್ಲರೀಕ್ಷಿಸಿದರು.....

ಸರ್ವಜ್ಞ: ಸು. ೧೭೦೦ ವಚನಗಳು

ಜೋಳದಾ ಬೋನಕ್ಕೆ ಬೇಳೆಯಾ ತೊಗೆಯಾಗಿ
ಕಾಳೆಮ್ಮೆ ಕರೆದ–ಹೈನಾಗಿ ಬೆಳವಲದ
ಮೇಳ ನೋಡೆಂದ ಸರ್ವಜ್ಞ

ಕಿಚ್ಚುಂಟು ಕೆಸರುಂಟು ಬೆಚ್ಚನಾ ಮನೆಯುಂಟು
ಇಚ್ಚೆಗೆ ಬರುವ–ಸತಿಯುಂಟು ಮಲೆನಾಡ
ಮೆಚ್ಚು ನೋಡೆಂದ ಸರ್ವಜ್ಞ

II. ಕನ್ನಡ–ಸಕ್ಕದ

ಕೇಶಿರಾಜ: ಸು. ೧೨೬೦ ಶಬ್ದಮಣಿದರ್ಪಣ: ಉದಾಹರಣೆ

ಪಟಿಗನ್ನಡದೆ ಪುದುಂಗೊಳೆ
ಕೊಟೆ ಸಕ್ಕದಮುಂ ತಗುಳ್ಚಿ ಜಾಣ್ ಕಿಡೆ ಮುತ್ತುಂ
ಮೆಟಿಸುಂಗೋದಂತಿರೆ ಪೇ
ಳ್ವಲಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ

ನಯಸೇನ: ೧೧೧೨ ಧರ್ಮಾಮೃತ

ಹೊಸಗನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮುಂ ಚಿಂ
ತಿಸಿ ಕೂಡಲಾಱಿದಕ್ಕಟ
ವಿಸುಕದ ಸಕ್ಕದಮನಿಕ್ಕುವವನುಂ ಕವಿಯೇ

ಸಕ್ಕದಮುಂ ಪೇಳ್ವೊಡೆ ನೆಜಿ
ಸಕ್ಕದಮುಂ ಪೇಳ್ಗೆ ಶುದ್ಧ ಕನ್ನಡದೊಳ್ ತಂ
ದಿಕ್ಕುವುದೇ ಸಕ್ಕದಮುಂ
ತಕ್ಕುವೆ ಬೆರಸಲ್ತೆ ಘೃತಮುಮುಂ ತೈಲಮುಮುಂ

ಆಂಡಯ್ಯ: ಕಬ್ಬಿಗರ ಕಾವ

ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮುಂ
ಬಗೆಗೊಳೆ ಪೇಳಲಾರಿನಿತುಂ ಸಲೆ ಮುನ್ನಿನ ಪೆಂಪನಾಳ್ದ ಕ
ಬ್ಬಿಗರದು ಮಾತನಾಡಿದವೊಲಂದವನಾಳ್ದರೆ ಬಲ್ಪು ನೆ
ಟ್ಟಗೆ ದೊರಿಕೊಂಡುದಿಂತಿವನೊಳಲ್ಲದೆ ಕೇಳ್ ದೊರೆಕೊಳ್ಳದಾರೊಳಂ

ಎಂದು ತಮತಮಗೆ ಬಲ್ಲವ
ರೆಂದೊಡೆ ನಾನವರ ಬಯಕೆಯಂ ಸಲಿಸುವೆನಿ
ನ್ನೆಂದಚ್ಚಕನ್ನಡಂ ಬಿಗಿ
ವೊಂದಿರೆ ಕಬ್ಬಿಗರ ಕಾವನೊಲವಿಂದೊರೆದೆಂ

ಮುದ್ದಣ: ೧೮೯೯–೧೯೦೧ ರಾಮಾಶ್ವಮೇಧ

ಮುದ್ದಣಂ–.... ಇದು ಸಕ್ಕದದೊಂದು ಚೆಲ್ವು.
ಮನೋರಮೆ–ಲೇಸು, ಲೇಸು! ನೀರಿಱಿಯದ ಗಂಟಲೊಳ್ ಕಡುಬಂ ತುಱುಕಿ
ದಂತಾಯ್ತು; ಕನ್ನಡದ ಸೊಗಸನಱಿಯಲಾರ್ತಿನಿಲ್ಲಿನಗೆ ಸಕ್ಕದದ
ಸೊಗಸಂ ಪೇಟ್ಪುದು ಗಡ!
ಮುದ್ದಣಂ–ಅಪ್ಪೊಡಿನ್ನೆಂತೊ ಒರೆವೆಂ?

ಮನೋರಮೆ–ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇಳ್ವುದು. ಕನ್ನಡಂ ಕತ್ತುರಿಯಲ್ತೆ!

ಮುದ್ದಣಂ–ಅಪ್ಪುದಪ್ಪುದು. ಆದೊಡಂ ಸಕ್ಕದಮೊಂದೆ ರನ್ನವಣಿಯಂ ಪೊನ್ನಿಂ ಬಿಗಿದಂತೆಸೆಗುಂ; ಅದಱಿಂ ಕರ್ಮಣಿಸರದೊಳ್ ಚೆಂಬವಳಮುಂ ಕೋದಂತಿರೆ, ರಸಮೊಸರೆ, ಲಕ್ಷಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆಱೆಯೆ, ತಿರುಳ್ಗನ್ನಡದೊಳೆ ಕತೆಯನುಸಿರ್ವೆಂ.

ಮಹಲಿಂಗರಂಗ: ಸು. ೧೬೦೦ ಅನುಭವಾಮೃತ

ಸುಲಿದ ಬಾಳೆಯ ಹಣ್ಣಿನಂದದಿ
ಕಳಿದ ಸಿಗುರಿನ ಕಬ್ಬಿನಂದದಿ
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲಿನ್ನೇನು?

III. ಕಾವ್ಯದ ತಿರುಳು

ನೃಪತುಂಗ

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ
ಖೋಪಾತ್ತಮಿದೆಂದಱಿಪುಗು
ಮಾ ಪರಮ ಕವಿಪ್ರಧಾನರಾ ಕಾವ್ಯಂಗಳ್

ಪರಮ ಜಿನೇಂದ್ರವಾಣಿಯೆ ಸರಸ್ವತಿ ಬೇಱದು ಪೆಣ್ಣ ರೂಪಮಂ
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ದ ಪೂಜಿಪಾ
ದರಿಸುವ ಭವ್ಯಕೋಟಿಗೆ ನಿರಂತರ ಸೌಖ್ಯಮನೀವುದಾನದ
ರ್ಕೆರೆದಪೆನಾ ಸರಸ್ವತಿಯ ಮಾಜಿಸ್ಕಮಗಿಲ್ಲೆಯೆ ವಾಗ್ವಿಳಾಸಮಂ

ಇರು ಮರುಳೆ ಶುಷ್ಕ ವೈಯಾ
ಕರಣಂಗಂ ಶುಷ್ಕ ತಾರ್ಕಿಗಂಗಂ ಬೆಳ್ಕ
ಕ್ಕರಿಗಂಗಂ ವಿಷಯಮೆ ಕಾ
ವ್ಯರತ್ನ ಮತಿ ಚತುರ ಕವಿ ಕದಂಬಕ ವಿಷಯಂ

ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗಚ್ತಿ ಲಾಭಮೆಂ
ಬಿವೆ ವಲಮಿಂದ್ರಪೂಜೆ ಭುವನಸ್ತುತಮಪ್ಪ ನೆಗಚ್ತಿ ಮುಕ್ತಿ ಸಂ
ಭವಿಸುವ ಲಾಭಮೆಂಬಿವೆ ಜಿನೇಂದ್ರಗುಣಸ್ತುತಿಯಿಂದೆ ತಾಮೆ ಸಾ
ರವೆ ಪೆಜುರೀವುದ್ದೇಂ ಪೆಜುಱಿ ಮಾಡುವುದೇಂ ಪೆಜುಱಿಂದಮಪ್ಪುದೇಂ

ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕು ಮಾರ್ಗದೊಳಿ ತ್ತಳ್ವುದು ತಳ್ತೊಡೆ ಕಾವ್ಯಬಂಧಮೊ
ಪ್ಪುಗುಮೆಳವಾವು ಕೆಂವಳರ ಪೂವಿನ ಬಿಣ್ಪೊಜಿಯಿಂ ಬಬಲ್ದು ತುಂ
ಬಿಗಳನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೋಲ್

ರನ್ನ ೯೯೩

ಕವಿಮಾರ್ಗದೊಳೊಳಪೊಕ್ಕುಂ
ನವರಸಮಂ ತೆಱಿಯಿ ನುಡಿದನೆನಿಸಿದ ಕವಿ ಸ
ತ್ಕವಿಯೆನಿಕುಂ ಗೂಡಾರವ
ಕವಿಯಂತಿರೆ ಮುಚ್ಚಿಪೋದ ಕವಿಯುಂ ಕವಿಯೇ

ಸರಸತಿಯನಬಲೆಯಂ ಗೋಣ್
ಮುರಿಗೊಂಡರ್ಥಕ್ಕೆ ಕುದಿದು ನೋಯಿಸುವವನ
ಕ್ಕೆರಿಗನೆ ಪಾತಕನಾತನೆ
ಸರಸ್ವತೀದ್ರೋಹನವನನಾರ್ ಮುಟ್ಟುವರೋ
ಪೊಸದೇಸೆಯಂ ಬೆಡಂಗಂ
ರಸಭಟ್ಟಯನರ್ಥದೃಷ್ಟಿಯಂ ಬಗೆವರೊ ಭಾ
ವಿಸುವರೊ ಸಾರಣೆಯಂತಿರೆ
ಕಸಮಂ ಪಿಡಿವರ್ ಕೆಲರ್ ಮಹಾಪುರುಷರ್ಕಳ್

ನಯಸೇನ

ಮಳೆಯಿಲ್ಲದೆ ಪೊಯ್ನೀರಿಂ
ಬೆಳೆಗುಮೆ ಧರೆ ಮುಱುಗಿ ಕುದಿದು ಶಾಸ್ತ್ರದ ಬಲದಿಂ
ದಳಪಿಂ ಪೇಳ್ದೊಡಮದು ಕೋ
ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ

ನೇಮಿಚಂದ್ರ ಸು. ೧೧೭೦

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿ ಸಂತತಿ ವಾಮನ ಕ್ರಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಂ ನರನೊತ್ತಿ ಗಂಟಲಂ
ಮೆಟ್ಟುಗೆ ಮೆಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತಿ ಕಟ್ಟದರ್
ಮುಟ್ಟದರೊತ್ತಿ ಮೆಟ್ಟದರದೇನಳವಗ್ಗಳವೋ ಕವೀಂದ್ರರಾ

ಬೆಲೆಯಿಂದಕ್ಕುಮೆ ಕೃತಿ ಗಾ
ವಿಲ ಭುವನದ ಭಾಗ್ಯದಿಂದಮಕ್ಕುಂ ನೋಳ್ಪಂ
ಬೆಲೆಗೊಟ್ಟ ತಾರ ಮಧುವಂ
ಮಲಯಾನಿಲನಂ ಮನೋಜನಂ ಕೌಮುದಿಯಂ

ಜನ್ನ ೧೨೦೯–೧೨೫೦

ಎನಿತನೊಜಿಲ್ದು ಪೇಳ್ವ ಕವಿಯೇವನದಂ ಪೆಸರಟ್ಟು ಮೆಚ್ಚ ಬ
ಲ್ಲನನಱಿಸಲ್ಕೆವೇಳ್ಪುದವನಂ ಜಗದೊಳ್ ಪಡೆಯಲ್ಕೆ ಬಾರದಾ
ತನ ಮುಖದಿಂದಮಲ್ಲದದು ಸಲ್ಲದು ಕಟ್ಟಯುಮೇನೊ ಮಾಲೆಗಾ
ಱಿನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿಪೋಗದೇ

ಹರಿಹರ ಸು. ೧೨೦೦

ಹಱಿಗವಿಗಳ ಕಬ್ಬಂಗಳ
ಹೊಱಗಳಿಯಕ್ಕರದ ಹೊಲಿಗೆ ಬಿರ್ಚಿದೊಡೆಲ್ಲಂ
ಬಱಿ ತಾಱಿಗ ಬೀಱಿಗ ವೆ
ತ್ತಱಿ ತತ್ತಱಿ ವೆಕ್ಕಸಕ್ಕಮಸ್ತವ್ಯಸ್ತಂ

ಕೇಳಲೊಡಂ ಕಿವಿ ಸವಿಯೊಳ
ಗಾಳದೊಡಂ ತನ್ಮನಂ ಮುಳುಂಗದೊಡಂ ಸ್ತೋ
ತ್ಯಾಲಂಬಿಯೆನಿಪ ಚಿತ್ತಂ
ಲೀಲೆಯೊಳವಗಾಹಮಿರದೊಡದು ಸತ್ಕೃತಿಯೇ

ರಾಘವಾಂಕ (ರಾಘವ) ಸು. ೧೨೦೦

ನಡೆವರಿಡಹಪಡೆ ಕುಳಿತರಿಡಹುವರೆ ಕಾವ್ಯಮಂ
ನಡಸುವಾತಂ ರಸಾವೇಶ ಮಜಿಹಾಲಸ್ಯ
ವೆಡೆಗೊಳಲು ತಪ್ಪುಗಲ್ಲದೆ ಕಾವ್ಯಕರ್ತೃ ತಪ್ಪುವನೆ ಒಂದೆರಡೆಡೆಯೊಳು
ಎಡವಾಯ್ದು ಬಂದ ತಪ್ಪಂ ಒಡಿದು ಸಾಧಿಸದೆ
ಕಡೆತನಕ ಬಂದ ಲೇಸಿಂಗೆ ತಲೆದೂಗೆ ತಲೆ
ಯೊಡೆವುದೇ ಜೇನೆಯಜ್ಞಯದ ನೀರಸರನೇಕೆ ಪುಟ್ಟಿಸಿದನಬುಜಭವನು

ರಸ ಜೀವ ಭಾವವೊಡಲರ್ಥವವಯವ ಶಬ್ದ
ವಿಸರವೇ ನುಡಿಯಲಂಕಾರವೇ ತೊಡಿಗೆಯು ತ
ವೆ ಸುಲಕ್ಷಣವೆ ಲಕ್ಷಣ ವಿಮಳ ಪದನ್ಯಾಸ ನಡೆ ರೀತಿ ಸುಕುಮಾರತೆ
ರಸಿಕತನ ಸುಳಿ ಸುಖಂ ನಿಳಯವಂತಪ್ಪ ಈ
ಪ್ಪೊಸ ಕಾವ್ಯಕನ್ನಿಕೆಯ ಪಡೆದು ಪಂಪಾಂಬಿಕೆಯ-
ರಸ ವಿರೂಪಾಕ್ಷಂಗೆ ಕೊಟ್ಟು ಹಂಪೆಯ ರಾಘವಾಂಕನೇಂ ಕೃತಕೃತ್ಯನೋ

ಚಾಮರಸ ಸು. ೧೪೫೦

ಪೇಗುಲವೆ ಮಾತಾಡುವಂದದೊ
ಳಾಗಿರದೆ ಒಳಗಿರ್ದು ನುಡಿದಡೆ
ಲೋಗರಿಗೆ ಪ್ರತಿಶಬ್ದದಿಂದಾ ಪರಿಯಲಿನ್ನೊಳಗೆ
ಲಾಗಿನಿಂದಲಿ ಗುರುಗುಹೇಶ್ವರ
ನಾಗಳೆನ್ನನು ನುಡಿಸಿದಡೆ ನುಡಿ
ದಾಗುಮಾಡಿಯೆ ಪೇಳ್ವೆನೀ ಪ್ರಭುಲಿಂಗಲೀಲೆಯನು

ಬಾಯನುಡಿಗಳ ಕೇಳಿ ಕಿವಿಯೊಳ
ಗಾಯೆನುತ ಪರಿಣಮಿಸಿ ಹೋಹ ವಿ
ಡಾಯವಲ್ಲಿದು ತಮ್ಮ ತನು ಮನ ಧನವನೆಲ್ಲವನು
ಬೀಯಮಾಡಿಯೆ ಲಿಂಗದಲಿ ನಿಜ
ಕಾಯ ನಿಲುವಡೆ ನಿತ್ಯರಪ್ಪಡೆ
ದಾಯಿಗರು ಲಾಲಿಸುವುದೀ ಪ್ರಭುಲಿಂಗಲೀಲೆಯನು

ಕುಲಿಗಳೋಪಾದಿಯಲಿ ಕಬ್ಬಿನ
ಹೊಲಿಗಣೆಲೆಯನು ಮೇದಕಟ ಮೆಲು
ಕಿಲಿವುತಲ್ಪಸುಖಕ್ಕೆ ಸೋಲದೆ ಕಬ್ಬಿನೊಳು ರಸವ
ನೆಲಿಸಿ ಸವಿವ ಗಜದಂತೆ ಭಕ್ತಿಯ
ತಿಲಿನ ತಿಳಿದಾಚರಿಸಬೇಕೆಂ
ದಲಿವವರು ಲಾಲಿಸುವುದೀ ಪ್ರಭುಲಿಂಗಲೀಲೆಯನು

ಸರ್ವಜ್ಞ

ಎಲ್ಲ ಬಲ್ಲವರಿಲ್ಲ ಬಲ್ಲವರು ಬಹಳಿಲ್ಲ
ಬಲ್ಲಿದರು ಇದ್ದು – ಬಲವಿಲ್ಲ ಸಾಹಿತ್ಯ
ವೆಲ್ಲರಿಗಿಲ್ಲ ಸರ್ವಜ್ಞ

ಹೇಳಿದ್ದೆ ಹೇಳುವರು ಕೇಳಿದ್ದೆ ಕೇಳುವರು
ಕೇಳಿದ್ದೆ ಕೇಳಿ – ಸುಖಿಸುವರು ಒರಿಯರ
ಹೇಳಿಕೆಯೆ ಬೇರೆ ಸರ್ವಜ್ಞ

IV. ನಮ್ಮ ಕವಿಗಳ ಹೆಮ್ಮೆ

ರನ್ನ

ಬೆಳುಗಲಿಯಯ್ನೂ ಜಿಜಿಕೊಳ
ಗ್ಗಳಮೆನಿಸುವ ಜಂಬುಖಂಡಿಯೆಬ್ಬಿತ್ತರ್ಕಂ
ತಿಳಕಮೆನೆ ನೆಗಬ್ದಿ ಮುಮುಪೊಟಿ
ಲೊಳೆ ಪುಟ್ಟ ಸುಪುತ್ರನೆನಿಸಿದಂ ಕವಿರತ್ನಂ

ವಸುಧೆಯೊಳಗೊಂದು ರತ್ನಮಿ
ದೆನೆದಿರ್ದುದು ಪಲವು ರತ್ನಮಿಲ್ಲೆಂಬಿನಮೇಂ
ಮಸುಳಿಸಿದನೂ ಬಹುರತ್ನಾ
ವಸುಂಧರಾಯೆಂಬ ವಾಕ್ಯಮಂ ಕವಿರತ್ನಂ

ನೆಗಬ್ದಿ ಕವಿರತ್ನನಂತೊಳ
ಪುಗುವುದು ಪೊಗ್ಗಾಯ್ತೆ ಜಿನಮತಾಂಭೋಧಿಯುಮಂ
ಪುಗದಾಗಮಮಜಿವರ ಬಗೆ
ವುಗಪೆ ಕೆಲರ್ ಕವಿಗಳಾಡಿವರ್ ತಡಿವಡಿಯೊಳ್

ಪಡೆಯುಡೆಯ ಕಡೆಯು ಬಡವರ್
ಕುಡೆ ಪಡೆದನೊ ಚಕ್ರವರ್ತಿಯೊಳ್ ತ್ರೈಲಪನೊಳ್
ಪಡೆದಂ ಮಹಿಮೋನ್ನತಿಯಂ
ಪಡೆದಂ ಕವಿಚಕ್ರವರ್ತಿನೆಸರಂ ರನ್ನಂ

ಆರಾತೀಯ ಕವೀಶ್ವರ
ರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂ
ಡಾರದ ಮುದ್ರೆಯನೊಡೆದಂ
ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ

ಕನ್ನಡಮೆರಡಜುನೂಜಜಿ
ಕನ್ನಡಮಾ ತಿರುಳ ಕನ್ನಡಂ ಮಧುರಮ್ಯೋ
ತ್ಪನ್ನಂ ಸಂಸ್ಕೃತಮೆನೆ ಸಂ
ಪನ್ನಂ ನೆಗಬ್ದುಭಯಕವಿತೆಯೊಳ್ ಕವಿರನ್ನಂ

ರತ್ನಪರೀಕ್ಷಕನಾಂ ಕೃತಿ
ರತ್ನಪರೀಕ್ಷಕನೆನೆಂದು ಫಣಿಪತಿಯ ಫಣಾ
ರತ್ನಮುಮಂ ರನ್ನನ ಕೃತಿ
ರತ್ನಮುಮಂ ಪೇಟ್ದು ಪರೀಕ್ಷಿಪಂಗೆಂಟಿರ್ದಿಯೇ

ಷಡಕ್ಷರಿ ೧೬೫೩

ಧರೆಯೊಳ್ ಮೇಣ್ ಪುಟ್ಟಿ ಪುಟ್ಟುತ್ತುರುಳ್ವ ನರರಮೇಲುರ್ಬಿ ಕಬ್ಬಂಗಳಂ ಬಿ
ತ್ತರಿಸುತ್ತುಂ ಸಪ್ರಯಾಸಂ ಕೆಲಕೆಲರಕಟಾ ಕಬ್ಬಿಗರ್ ಕೆಟ್ಟು ಪೋದರ್
ಹರಿದೇವಂ ದೇವದೇವೋತ್ತಮನ ಶರಣರಂ ಪಾಡಿ ಕೈವಲ್ಯ ಲಕ್ಷ್ಮೀ
ವರನಾದಂ ಮತ್ತವಂಗತ್ಯಧಿಕ ಶಿವಕವೀಂದ್ರಂಗದಾರ್ ಸಾಟಿಯಪ್ಪರ್

ರಸೆಯೊಳ್ ರಸವತ್ಕವಿತೆಯ
ನುಸಿರಲ್ ಪಡೆದಸಮನಯನನಂ ಪೊಗಳದೆ ಮಾ
ನಿಸರಂ ಸುರರಂ ಪೊಗಳ್ವುದು
ಕಸವರಮಂ ಕಳೆದು ಕಸವನಾಂತವೊಲಕ್ಕುಂ

ಅದರಿಂದೆ ಮಹಿತ ಮಹಿಮಾ
ಸ್ಪದನಂ ಶಿವನಂ ತದೀಯ ಶರಣವ್ರಜಮಂ
ಪದೆದು ಮುದಮೊದವೆ ಬಲ್ಲಂ
ದದೆ ನುತಿಪೆಂ ನುತಿಸೆನುಳಿದ ಸುರರಂ ನರರಂ

ಆರಾರೇರರ್ ಶಾಸ್ತ್ರ
ಶ್ರೀರೋಹಣಗಿರಿಯನಲ್ಲಿ ನವಕವಿತಾ ಚಿಂ
ತಾರತ್ನಂ ದೊರೆಗುಮೆ ಮಾ
ರಾರಿಯ ಕೃಪೆಯಿಲ್ಲದಂಗೆ ಧರಣೀತಳದೊಳ್

ಕುಮಾರವ್ಯಾಸ ಸು. ೧೪೩೦

ಶ್ರೀವನಿತೆಯರಸನೆ ವಿಮಲ ರಾ
ಜೀವಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನನಿಕರ ದಾತಾರ
ರಾವಣಾಸುರಮಥನ ಶ್ರವಣಸು
ಧಾ ವಿನೂತನ ಕಥನಕಾರಣ
ಕಾವುದಾನತ ಜನವ ಗದುಗಿನ ವೀರನಾರಯಣ

ವೀರನಾರಾಯಣನೆ ಕವಿ ಲಿಪಿ
ಕಾರ ಕುವರವ್ಯಾಸ ಕೇಳುವ
ಸೂರಿಗಳು ಸನಕಾದಿಗಳು ಜಂಗಮ ಜನಾರ್ದನರು
ಚಾರು ಕವಿತೆಯ ಬಳಕೆಯಲ್ಲ ವಿ
ಚಾರಿಸುವೊಡಳವಲ್ಲ ಚಿತ್ತವ
ಧಾರು ಹೋ ಸರ್ವಜ್ಞರಾದರು ಸಲುಗೆ ಬಿನ್ನಪವ

ಗದುಗಿನ ಶ್ರೀ ವೀರನಾರಾಯಣ ಸ್ವಾಮಿ

ಹಲಗೆ ಬಳಪವ ಹಿಡಿಯದೊಂದ
ಗ್ಗಳಕೆ ಪದವಿಟ್ಟಳಿಸದೊಂದ
ಗ್ಗಳಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಕೆ
ಬಳಸಿ ಬರೆಯಲು ಕಂಠಪತ್ರದ
ಉಲುಹುಗೆಡದಗ್ಗಳಕೆಯೆಂಬೀ
ಬಲುಹು ಗದುಗಿನ ವೀರನಾರಾಯಣನ ಕಿಂಕರಗೆ

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ

ಲಕ್ಷ್ಮೀಶ ಸು. ೧೭೦೦

ಶ್ರೀವಧುವಿನಂಬಕಚಕೋರಕಂ ಪೊರೆಯೆ ಭ
ಕ್ತಾವಳಿಯ ಹೃತ್ಕುಮುದಕೋರಕಂ ಬಿರಿಯೆ ಜಗ
ತೀವಲಯದಮಲ ಸೌಭಾಗ್ಯ ರತ್ನಾಕರಂ ಪೆರ್ಚಿನಿಂ ಮೇರೆವರಿಯೆ
ಆವಗಂ ಸರಸ ಕರುಣಾಮೃತವ ಕಳೆಗಳಿಂ
ತೀವಿವೆಳನಗೆಯ ಬೆಳ್ದಿಂಗಳಂ ಪಸರಿಸುವ
ದೇವಪುರ ಲಕ್ಷ್ಮೀರಮಣನಾಸ್ಯಚಂದ್ರನಾನಂದಮಂ ನಮಗೀಯಲಿ

ಕೆನೆವಾಲ ಕಡೆದು ನವನೀತಮಂ ತೆಗೆದು ಬಾ
ಯ್ಗಿನಿದಾಗಿ ಸವಿಯದದರೊಳಗೆ ಪುಳಿವಿಳಿದು ರಸ
ವನೆ ಕಿಡಿಸಿದೊಡೆ ಕರೆವ ಸುರಭಿಗಪ್ಪುವೆ ಕೊರತೆ ಕಾವ್ಯಮಂ ಕೇಳ್ದು ಮಥಿಸಿ
ಜನಿಸಿವ ಪದಾರ್ಥಮಂ ತಿಳಿದು ನೋಡಪೆ ವಿನೂ
ತನ ಕವಿತೆಯೆಂದು ಕುಂದಿಟ್ಟು ಜರೆವೊಡೆ ಪೇಳ್ದ
ವನೊಳಾವುದೂಣೆಯಂ ಜಾಣರಿವನರಿದು ಮತ್ಸರವನುಳಿದಾಲಿಸುವುದು

ಜಾಣರಂ ತಲೆದೂಗಿಸದೆ ನುಡಿದೊಡಾ ಪದ
ಕ್ಕೂಣೆಯಂ ಬಹುದೆಂದು ಸರಸೋಕ್ತಿಯಿಂದೆ ಗೀ
ರ್ವಾಣಪುರನಿಲಯ ಲಕ್ಷ್ಮೀವರಂ ತಾನೆ ಸಂಗೀತ ಸುಕಲಾ ನಿಪುಣನು
ವೀಣೆಯಿಂ ಗಾನಮಂ ನುಡಿಸುವಂದದೊಳೆನ್ನ
ವಾಣಿಯಿಂ ಕವಿತೆಯಂ ಪೇಳಿಸಿದನೆಂದರಿದು
ಕೇಣಮಂ ತೊರೆದು ಪುರುಡಿಸುವರಂ ಜರೆದು ಕಿವಿದೆರೆದು ಕೇಳ್ವುದು ಸುಜನರು

ಪುಣ್ಯಮಿದು ಕೃಷ್ಣಚರಿತಾಮೃತಂ ಸುಕವೀಂದ್ರ
ಗಣ್ಯಮಿದು ಶೃಂಗಾರ ಕುಸುಮತರು ತುರುಗಿದಾ
ರಣ್ಯಮಿದು ನವರಸ ಪ್ರೌಢಿ ಲಾಲಿತ್ಯ ನಾನಾ ವಿಚಿತ್ರಾರ್ಥಂಗಳ
ಗಣ್ಯಮಿದು ಶಾರದೆಯ ಸನ್ಮೋಹನಾಂಗ ಲಾ
ವಣ್ಯಮಿದು ಭಾವಕರ ಕವಿದೊಡವಿಗೊದವಿದ ಹಿ
ರಣ್ಯಮಿದು ಭೂತಳದೊಳೆನೆ ವಿರಾಜಿಪುದು ಲಕ್ಷ್ಮೀಪತಿಯ ಕಾವ್ಯರಚನೆ

ರತ್ನಾಕರ

ಕಬ್ಬಿಗರೋದುಗಬ್ಬವ ಹಾಡುಗಬ್ಬವ
ಕಬ್ಬದೊಳೊರೆವರಿವೆರಡು
ಕಬ್ಬಿನಂತಿರಬೇಕು ಬಿದಿರಂತೆ ರಚಿಸಲೇ
ಕಬ್ಬ ಹೇಳಿಲೆ ಸರಸ್ವತಿಯಿ

ಅಯ್ಯಯ್ಯಾ ಚೆನ್ನಾದುವೆನೆ ಕನ್ನಡಿಗರು
ರಯ್ಯಾ ಮಂಚಿದಿಯೆನೆ ತೆಲುಗ
ಅಯ್ಯಯ್ಯ ಎಂಚಪ್ಪೊರ್ಲಾಂಡೆಂದು ತುಳುವರು
ಮೆಯ್ಯುಬ್ಬಿ ಕೇಳಬೇಕಣ್ಣಾ

ರಳಕುಳ ಶಿಥಿಲ ಸಮಾಸ ಮುಂತಾದವ
ರೊಳಗಿಲ್ಲಿ ಕೆಲವುಳ್ಳರುಂಟು
ಕೆಲವಿಲ್ಲಾದರು ಇಲ್ಲವೇಕೆಂದರವರ ಕೋ
ಟಲೆಯೇಕೆ ಹಾಡುಗಬ್ಬದೊಳು

ಸಕಲ ಲಕ್ಷಣವು ವಸ್ತುಕಕೆ ಪರ್ಣಕಕೆಷ್ಟು
ವಿಕಳವಾದರು ದೋಷವಿಲ್ಲ
ಸಕಲ ಲಕ್ಷಣಕಾಗಿ ಬಿರುಸುಮಾಡಿದರೆ ಪು
ಸ್ತಕದ ಬದನೆಕಾಯಹುದು

V. ಕನ್ನಡಿಗರುಸಿರು, ಕಣ್ಣು

೧. ಪಂಪ: ಜಿನಸ್ತುತಿ

ತ್ರಿದಶೇಂದ್ರಮೌಳಿ ಮಣಿ ಶೋ
ಣ ದೀಪ್ತಿಗಳ್ ಪುದಿದು ಪೊಳೆವಲಕ್ತಕ ರಸದಿಂ
ಪುದಿದಂತೊಪ್ಪಿರ್ಪ ರ್ಹ
ತ್ಪದಂಗಳೆಮಗೀಗೆ ತಡೆಯದರ್ಹತ್ಪದಮಂ

ಭುವನೇಶ್ವರ ನಿಜರೂಪ
ಸ್ತವ ವಸ್ತುಸ್ತವ ಗುಣಸ್ತವಂಗಳನವಜಿಂ
ತುವರಂ ಬಣ್ಣಿಸಲಮರೇಂ
ದ್ರ ವಾಸುಕಿ ಪ್ರಭುಗರಾರ್ತರಿಲ್ಲೆನ್ನಳವೇ

ಅಳತೆಗೆ ತೂಕಕ್ಕೆಣಿಕೆಗೆ
ಒಳಗಾದುವು ಸಕಳವಸ್ತುಗಳ್ ಭುವನಜನ
ಕ್ಕಳಿಯಲ್ ತೂಗಲ್ಕೆಣಿಸ
ಲ್ಕಳುಂಬವೆನಿಸಿದುವು ನಿನ್ನ ಗುಣಗಣಮಹರ್ಹಾ

ತನ್ನಿರ್ದೆಡೆಯುದೆ ಮೇರುವಿ
ನುನ್ನತಿ ಜಳನಿಧಿಯ ಗುಣ್ಪು ನಭವ ವಿಭುತ್ವಂ
ನಿನ್ನ ಗುಣೋನ್ನತಿ ಸಕಳ ಜ
ಗನ್ನುತ ಭುವನಾಂತರಾಳಮಂ ಪರ್ಬಿರ್ಕುಂ

ಆಕುಳನೆನಾಗಿ ಸುಖಿವೆನ
ನಾಕುಳಮಪ್ಪೆಡೆಯನಜಿಸಿ ಕಾಣೆಂ ಮೂಜುಂ
ಲೋಕದೊಳಂ ನಿನ್ನಿರ್ಕೆಯೆ
ಲೋಕಾಗ್ರಮೆ ಸಂತಮದನೆ ಮಾಡೆನಗರ್ಹಾ

ಭವನಿಗಳದ ತೊಡರಂ ಕಳೆ
ಭವಜಳಧಿಯ ತಡಿಗೆ ಸಾರ್ಚು ಭವಗಹನದುಪ
ದ್ರವಮಂ ಕಿಡಿಸು ಭವಾಂತಕ
ಭವನಕ್ಕುಯ್ ತಡೆಯದೆನ್ನ ನೀಂ ಭವಮಥನಾ

ಮರಣದ ಜನ್ಮದ ನಿಗಳಂ
ನಿರಾಕುಳಂ ಪತ್ತುವಿಡುವಿನಂ ಜಿನ ನಿನ್ನಂ
ಸ್ಮರಿಯಿಪುದನಣೋರಣ್ವಂ
ತರವ್ಯತಿಕ್ರಮಣ ಮಾತ್ರಮಂ ಮಜಿದಪೆನೇ

ತಿಳಕಂ ವಶ್ಯಮೆ ಜಡಜನ
ಮೊಳಗಱಿಯದು ಸಕಳ ಭವ್ಯತಿಳಕಂಗೆ ಜಗ
ತ್ತಿಳಕ ಭವತ್ಪದ ಚಂದನ
ತಿಳಕಂ ತ್ರೈಲೋಕ್ಯವಶ್ಯಮಕ್ಕುಮವಶ್ಯಂ

ಅಮರೇಂದ್ರೋನ್ನತಿ ಖೇಚರೇಂದ್ರವಿಭವಂ ಭೋಗೀಂದ್ರಭೋಗಂ ಮಹೇಂ
ದ್ರ ಮಹೈಶ್ವರ್ಯಮಿವೆಲ್ಲಮಧ್ರುವಮಿವಂ ಬೇಱ್ಪಂತು ಬೆಳ್ಳಲ್ಲಿನು
ತ್ತಮ ದೀಕ್ಷಾವಿಧಿಯುಂ ಸಮಾಧಿ ಮರಣಂ ಕರ್ಮಕ್ಷಯಂ ಬೋಧಿಲಾ
ಭಮಮೋಕ್ಷಂ ದೊರೆಕೊಳ್ವುದಕ್ಕೆಮಗೆ ಮುಕ್ತಿಶ್ರೀ ಮನೋವಲ್ಲಭಾ

೨. ನಾಗಚಂದ್ರ : ಸು. ೧೧೧೦ ಜಿನಸ್ತುತಿ

ಜಯ ಜಿತವೃಜಿನ ಜಿನೇಶ್ವರ
ದಯಾನದೀ ಪುಳಿನ ರಾಜಹಂಸ ಭವಾಂಭೋ
ಧಿಯ ತಡಿಯನೆಯ್ದಿಸೆಮ್ಮಂ
ನಯ ನಿಕ್ಷೇಪ ಪ್ರಮಾಣ ಪಾತ್ರದಿನರುಹಾ

ನೇವಾಳಮೆಂದು ಕೆಲಬರ್
ಪಾವಂ ಪಿಡಿವಂತೆ ದೇವ ನೀನಲ್ಲದರಂ
ದೇವರಿವರೆಂದು ಪಿಡಿದಿ
ನ್ನೇವಿಧಿವಟ್ಟಪರೊ ಮೋಹಮೂರ್ಛೆಯಿನರುಹಾ

ನಿನಗೆ ರಸಮೊಂದೆ ಶಾಂತಮೆ
ಜಿನೇಂದ್ರ ಮನಮಾ ರಸಾಂಬುನಿಧಿಯೊಳಗವಗಾ
ಹನಮಿರ್ದು ಮಿಕ್ಕ ರಸಮುಂ
ಕನಸಿನೊಳಂ ನೆನೆಯದಂತು ಮಾಡೆಮಗರುಹಾ

ಮಣಿಭೂಷಣ ಭರದಿಂ ತನು
ಕಿಣಮಪ್ಪುದದೇಕೆ ನಿನ್ನ ನಿರ್ಮಲ ಗುಣ ಭೂ
ಷಣಮಂ ದಯೆಗೆಯ್ ಪಡೆವೆಂ
ಪ್ರಣಯಮನಪವರ್ಗ ಲಕ್ಷ್ಮೀಗದಱಿಂದರುಹಾ

ಸಿಂಗದ ಮಾರ್ದನಿ ಮದಮಾ
ತಂಗಮನಳಱಿಸುವವೋಲ್ ನಿಜಪ್ರತಿಬಿಂಬಂ
ಪಿಂಗದೆ ಮನದೊಳ್ ನಿಂದಿರೆ
ಪಿಂಗಿಸುವುದು ಜನನ ಮರಣ ದುಃಖಮನರುಹಾ



ಶ್ರವಣಬೆಳ್ಗೊಳದ ಶ್ರೀ ಗೊಮ್ಮಟೇಶ್ವರ

ಮೆಚ್ಚೆ ಗಡ ಮುಳಿಯೆ ಗಡ ಬಗೆ
ಬೆಚ್ಚರೆ ಬೇಱಾಗೆ ನಿನ್ನ ಪದದೊಳ್ ಮನುಜಂ
ಗುಚ್ಚಗತಿ ನೀಚಗತಿವಡೆ
ವಚ್ಚರಿ ಕಣ್ಪೆಱಿವ ತೆಱನನಱಪೆಮಗರುಹಾ

ಜ್ಯಾಯಂಗೆ ನೀನೆ ವಲವಾ
ದೇಯಂ ನೀನಲ್ಲದನ್ಯವಸ್ತುಗಳೆಲ್ಲಂ
ಹೇಯಂಗಳೆಂಬ ತತ್ತ್ವೋ
ಪಾಯಮನೆಮಗೀವುದೇವೆವುಳಿದುವನರುಹಾ

ನಿತ್ಯಸುಖಮಾತ್ಮರೂಪಮ
ನಿತ್ಯಸುಖಂ ಮೋಹರೂಪಮೆಂಬ ವಿವೇಕಂ
ಸತ್ಯಸ್ವರೂಪಮದಱಿಂಗ
ಗತ್ಯಂತಾನುಭವ ವಿಭವಮುಕ್ಕುಮಗರುಹಾ

೩. ಬೊಪ್ಪಣ: ಸು. ೧೧೮೦ ಗೊಮ್ಮಟನ ಸ್ತುತಿ

ಶ್ರೀ ಗೊಮ್ಮಟ ಜಿನನಂ ನರ
ನಾಗಾಮರ ದಿತಿಜ ಖಚರಪತಿ ಪೂಜಿತನಂ
ಯೋಗಾಗ್ನಿಹತಸ್ಮರನಂ
ಯೋಗಿಧ್ಯೇಯನನಮೇಯನಂ ಸ್ತುತಿಯಿಸುವೆಂ

ಕ್ರಮದಿಂ ಮೆಯ್ವೊಣರ್ದಾಜಿದಕ್ರಮುವೆ ಮಾತಂ ಬಿಟ್ಟು ತನ್ನಿಟ್ಟ ಚ
ಕ್ರಮಮುಂ ನಿಃಪ್ರಭವಾಗೆ ಸಿಗ್ಗನೊಳಕೊಂಡಾತ್ಮಾಗ್ರಜಂಗೊಳ್ಪು ಗೆ
ಯ್ದು ಮಹೀರಾಜ್ಯಮನಿತ್ತು ಪೋಗಿ ತಪದಿಂ ಕರ್ಮಾರಿ ವಿಧ್ವಂಸಿಯಾ
ದ ಮಹಾತ್ಮಂ ಪುರುಸೂನು ಬಾಹುಬಲಿವೊಲ್ ಮತ್ತಾರೊ ಮಾನೋನ್ನತರ್

ಶ್ರುತಮುಂ ದರ್ಶನರುದ್ಧಿಯುಂ ವಿಭವಮುಂ ಸದ್ವೃತ್ತಮುಂ ದಾನಮುಂ
ಧೃತಿಯುಂ ತನ್ನೊಳೆ ಸಂದ ಗಂಗಕುಳಚಂದ್ರಂ ರಾಚಮಲ್ಲಂ ಜಗ
ನ್ನುತನಾ ಭೂಮಿಪನದ್ವಿತೀಯವಿಭವಂ ಚಾಮುಂಡರಾಯಂ ಮನು
ಪ್ರತಿಮಂ ಗೊಮ್ಮಟನಲ್ತೆ ಮಾಡಿಸಿದನಿಂತೀ ಪೇವನಂ ಯತ್ನದಿಂ

ಅತಿತುಂಗಾಕೃತಿಯಾದೊಡಾಗದದಱಿಂ ಸೌಂದರ್ಯಮೌನ್ನತ್ಯಮುಂ
ನುತಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದೌನ್ನತ್ಯಮುಂ
ನುತ ಸೌಂದರ್ಯಮುಮೂರ್ಜಿತಾತಿಶಯಮುಂ ತನ್ನಲ್ಲಿ ನಿಂದಿರ್ದುವೇಂ
ಕ್ಷಿತಿಸಂಪೂಜ್ಯಮೊ ಗೊಮ್ಮಟೇಶ್ವರ ಜಿನ ಶ್ರೀರೂಪಮಾತ್ಯೋಪಮಂ

ಅನುಪಮರೂಪನೇ ಸ್ಮರನುದಗ್ರನೆ ನಿರ್ಜಿತ ಚಕ್ರಿ ಮತ್ತುದಾ
ರನೆ ನೆಱೆ ಗೆಲ್ದುಮಿತ್ತನಖಿಳೋರ್ವಿಯನತ್ಯಭಿಮಾನಿಯೇ ತಪಃ
ಸ್ಥನುಮೆರಡಂಸ್ಪ್ರಿಯಿತ್ತೆಳೆಯೊಳಿರ್ದಪುದೆಂಬನನೂನಬೋಧನೇ
ವಿನಿಹತ ಕರ್ಮಬಂಧನೆನೆ ಬಾಹುಬಲೀಶನಿದೇನುದುತ್ತಾನೋ

ಅಭಿಮಾನ ಸ್ಥಿರಭಾವಮಂ ನಮಗೆ ಮಾಱ್ಕಿತ್ಯುದ್ಧಮಾನೋನ್ನತಂ
ಶುಭ ಸೌಭಾಗ್ಯಮನಂಗಜಂ ಭುಜಬಳಾವಷ್ಟಂಭಮಂ ಚಕ್ರವ
ರ್ತಿ ಭುಜಾದರ್ಪವಿಳೋಪಿ ಬಾಹುಬಲಿ ತೃಷ್ಣಾಚ್ಛೇದಮಂ ಮುಕ್ತ ರಾ
ಜ್ಯಭರಂ ಮುಕ್ತಿಯನಾಪ್ತ ನಿರ್ವೃತಿಪದಂ ಶ್ರೀ ಗೊಮ್ಮಟೀಶಂ ಜಿನಂ

ಕೆಮ್ಮಗಿದೇಕೆ ನಾಡ ಪಲವಂದದ ನಂದಿದ ಬಿಂದಿಗರ್ಕಳಂ
ನೀಂ ಮರುಳಾಗಿ ದೇವರಿವರೆಂದವರಂ ಮತಿಗೆಟ್ಟು ನಿನ್ನನೇ
ಕಮ್ಮ ತೊಳಲ್ಚಿದಪ್ಪೆ ಭವಕಾನನದೊಳ್ ಪರಮಾತ್ಮರೂಪನಂ
ಗೊಮ್ಮಟದೇವನಂ ನೆನೆಯ ನೀಗುವೆ ಜಾತಿ ಜರಾದಿ ದುಃಖಮಂ

ಸಮ್ಮದವಾಗಲಾಗ ಕೊಲೆಯುಂ ಪುಸಿಯುಂ ಕಳವುಂ ಪರಾಂಗನಾ
ಸಮ್ಮತಿಯುಂ ಪರಿಗ್ರಹದ ಕಾಂಕ್ಷೆಯುಮೆಂಬಿವಱಿಂದವಾಪೊಡೆಂ
ದುಂ ಮನುಜಂಗಿಹತ್ರೆಯ ಪರತ್ರೆಯ ಕೇಡೆನುತುಂ ಮಹೋಚ್ಚದೊಳ್
ಗೊಮ್ಮಟದೇವನಿರ್ದ ಸಲೆ ಸಾಜುವಪ್ಪೋಲೆಸೆದಿರ್ದನೀಕ್ಷಿಸೈ

ಕಮ್ಮಿದುವಪ್ಪ ಕಾಡ ಪೊಸವೂಗಳನರ್ಚಿಸಿ ಪಾದಪದ್ಮಮಂ
ಸಮ್ಮದದಿಂದೆ ನೋಡಿ ಭವದಾಕೃತಿಯಂ ಬಲಗೊಂಡು ಬಲ್ಲ ಪಾಂ
ಗಿಂ ಮನವೊಲ್ದು ಕೀರ್ತಿಪವರೇಂ ಕೃತಕೃತ್ಯರೊ ಶಕ್ರನಂದದಿಂ
ಗೊಮ್ಮಟದೇವ ನಿನ್ನನಜಿದರ್ಚಿಸುತಿರ್ಪವರೇಂ ಕೃತಾರ್ಥರೋ

ಮನದಿಂ ನುಡಿಯಿಂ ತನುವಿಂ
ದೆನಸುಂ ಮುನ್ನೆಱಪಿದಘಮನಳಿಪೆನೆಂಬೀ
ಮನದಿಂದಮೊಸೆದು ಗೊಮ್ಮಟ
ಜಿನನಂ ಸ್ತುತಿಯಿಸಿದನಿಂತು ಸುಜನೋತ್ತಂಸಂ

ಪೊಡವಿಗೆ ಸಂದ ಗೊಮ್ಮಟ ಜಿನೇಂದ್ರ ಗುಣಸ್ತವ ಶಾಸನಕ್ಕೆ ಕ
ನ್ನಡಗವಿ ಬಪ್ಪನೆಂದೆನಿಪ ಬೊಪ್ಪಣಪಂಡಿತನೊಲ್ದು ಪೇಟ್ದಿವಂ
ಕಡೆಯಿಸಿದಂ ಬಲಂ ಕವಡಮಯ್ಯನ ದೇವಣನಟ್ಟಿಯಿಂದೆ ಬಾ
ಗಡಿಗೆಯ ರುದ್ರನಾದರದೆ ಮಾಡಿಸಿದಂ ವಿಳಸತ್ ಪ್ರತಿಷ್ಠೆಯಂ

೪. ರನ್ನ : ವೈರಾಗ್ಯ

ತನಗಲ್ಲದೊಡಲ್ಗೊಡಮೆಗೆ
ಮನವಿಟ್ಟಪವರ್ಗಮಾರ್ಗಮಂ ಪೊರ್ದದೆ ತ
ನ್ನನೆ ತಾನೆ ನಂಬಿಸುವೊಡಾ
ತ್ಮನಂತು ಪೇಟುತ್ಮವಂಚಕರ್ ಪೆಱರೊಳರೇ ?

ಸಾರಪೆ ಸಾರಮಪ್ಪ ಜಿನಧರ್ಮಮನಾತ್ಮನಸಾರಮಪ್ಪುದಂ
ಸಾರಮಿದೆಂದು ನಂಬಿ ತನಗಲ್ಲದುದಂ ತನಗಪ್ಪುದೆಂದು ಕೇ
ದಾರ ವಿಯಾರ ಸೋದರ ಕೃಶೋದರ ಸುಂದರ ದಾರ ದಾರಕೋ
ದಾರ ನಿನೋಪಪೊಳ್ ತೊಡರ್ದ ದಾರುಣ ದುಃಖಮನೆಯ್ದುದಿರ್ಕುಮೇ ?

ಮುನಿದುಯ್ದ ಜವಂಗಂ ಮಾ
ಯೆನಲಣ್ಮರಿಲ್ಲ ಬಗೆಯೆ ನಿನಗಿನ್ನಾರ್ಮಂ
ಜಿನಧರ್ಮನೊಂಪೆ ಜೀವನೆ
ನೆನೆ ಗಡ ಲೋಕತ್ರಯಕ್ಕೆ ದಿನನಂ ಜಿನನಂ !

ಮತಿಗೆಟ್ಟು ಜೀವ ಧರ್ಮಾ
ನ್ಯತಮಂ ಸೇವಿಸದಧರ್ಮಮಂ ಸೇವಿಸಿ ದು
ರ್ಗತಿಗಿಱಿದೀ ಜವಸೆಂಬುಲಿ
ಸಿ ತಿಂಪ ದೈವಕ್ಕೆ ಪ್ರೋಗಿ ಪಾಟಿಂ ಬಿಡುವಯ್ !

ಎನಿತೆನಿತು ಕಱಿಪ ಭವಮಂ
ನೆನೆದಪೆ ! ಎನಿತೆನಿತು ಭವದ ಬಂಧುಗಳಂ ನೀಂ
ನೆನೆದಪೆ ! ಎನಿತೆನಿತೊಡಲಂ
ನೆನೆದಪೆ ! ಎಲೆ ಜೀವ ನೀನೆ ಪೇಱ್ ಪವಣೊಳವೇ ?

ಎನಿತಂ ಕುಕ್ಕುದಿಗುದಿದಪೆ ?
ಎನಿತಂ ಕಕ್ಕುಲಿಗಟಿಲ್ದಪಯ್ ? ಜೀವನೆ ನೀ
ನೆನಿತಂ ಮಲ್ಕಲ ಮಱುಗುವೆ ?
ಎನಿತಂ ಸಂಸಾರದೊಳಗೆ ತಿಱ್ರನೆ ತಿರಿವಯ್ ?

ಕಡೆಯಿಲ್ಲದ ಸಂಸಾರದ
ಕಡೆಗಾಣಲ್ ಬಗೆವೆಯಪ್ಪೊಡೆನ್ನುಕ್ತಿಗೊಡಂ
ಬಡು ಜೀವ ನಿನ್ನಂ ಕಾಲಂ
ಪಿಡಿವೆಂ ಧರ್ಮಮನೆ ಮಗುಟಿ ಬಲ್ವಿಡಿವಿಡಿಯಾ

ಜನನ ಮೃತಿ ದೇವ ನಾರಕ
ಮನುಷ್ಯ ತಿರ್ಯಗ್ವಿಕಲ್ಪಗತಿಗಳೊಳಿನಸುಂ
ನಿನಗೆ ಸುಖಮಿಲ್ಲ ನೆಟ್ಟನೆ
ಮನದೊಳ್ ಭಾವಿಪೊಡಸಾರಮಿಾ ಸಂಸಾರಂ

ಈ ನಾರಕ ತಿರ್ಯಗ್ಗತಿ
ಗೀ ನರ ಸುರ ಗತಿಗೆ ಪೇಸಿದೆಂ ದರ್ಶನದಿಂ
ಜ್ಞಾನದಿನೊಪ್ಪುವ ಪರಮ
ಸ್ಥಾನಮನಾಂ ಪಡೆವೆನಕ್ಕೆ ಪಂಚಮಗತಿಯಂ

ಶಿಷ್ಟಜನಾಶ್ಲಿಷ್ಟಂ ಬಹು
ಕಷ್ಟಂ ಬಹು ದುಷ್ಟಮುಷ್ಟಕರ್ಮಾಗ್ನಿ ಪರಿ
ಪ್ಲುಷ್ಟಂ ಹಾ ಹಾ ಧಿಕ್ ಚಿಃ
ಕಷ್ಟಮವಶ್ಯಂ ನಿಕೃಷ್ಟಮಿಾ ಸಂಸಾರಂ

ದಿವಸ ದಿವಸಂಗಳಿಂ ಕುಂ
ದುವುವಲ್ಲದೆ ಬಳಿಯವಾಯುವುಂ ವಪುವುಂ ಪೆ
ಚ್ಚುವುವಲ್ಲವು ವಿಷಯಸುಖ
ಕ್ಕವಚತ್ತಿಂ ಪಡೆದುಕೊಳ್ವಿನಕ್ಷಯಸುಖಮುಂ

ಅಂಗಜನ ಸುಖದ ಸಾಮ್ರಾ
ಜ್ಯಂಗಳ್ ಶಾರೀರಮಾನಸಾಗಂತುಕ ದುಃ
ಖಂಗಳನೆ ಮಾಟ್ಪುವದಱಿಂ
ಪಿಂಗುವೆನಿನ್ನೆನಗೆ ಜಿನನ ಚರಣಂ ಶರಣಂ

೫. ರತ್ನಾಕರ: ಆತ್ಮ–ಕರ್ಮ–ಮುಕ್ತಿ

ಮುಕ್ತರಾದವರೆಲ್ಲ ಮುನ್ನ ಸಂಸಾರ ಸಂ
ಯುಕ್ತರಾಗಿರ್ದು ಕರ್ಮಗಳ
ಯುಕ್ತಿಯರಿದು ಶಕ್ತಿಗೆಡಿಸಿ ದೇಹವ ಬಿಟ್ಟು
ಮುಕ್ತಿಗೈದಿದರೆಲೆ ಭವ್ಯಾ

ಸುಖಕುಬ್ಬಿ ದುಃಖಕೆ ಮರುಗಿದರೊಡನೆ ಮುಂ
ದಖಿಳ ಕರ್ಮಗಳು ಕಟ್ಟುವುವು
ಸುಖದುಃಖಕತ್ತಿತ್ತಲಾಗದೆ ಧ್ಯಾನಾಭಿ
ಮುಖದೊಳಿದ್ದರೆ ಬಂಧವಿಲ್ಲ

ಕರ್ಮವ ಸುಡುವ ಸಾಮರ್ಥ್ಯವುಂಟಾತ್ಮಗೆ
ಕರ್ಮದೊಳಡಗಿರುತಿಹನು
ಕರ್ಮವರಿದು ತಾನು ತನ್ನ ನೋಡಿದರೆಂಟು
ಕರ್ಮವ ಸುಟ್ಟುರುಹುವನು

ಧ್ಯಾನದಿಂದಲ್ಲದೆ ಕರ್ಮ ನಿರ್ಜರಿಸದಾ
ಧ್ಯಾನ ತಾನೆಂತುಟೆಂದೆನಲು
ನಾನಾಚಿಂತೆಯಳಿದು ಮನವಾತ್ಮ ಸಂ
ಧಾನದೊಳಿರಲದೆ ಧ್ಯಾನ

ಈ ಕಾಲವಾಕಾಲವೆನಬೇಡ ನಿಶ್ಚಯ
ದೇಕ ಧರ್ಮವ ಮಾಡಿದವರು
ಲೌಕಾಂತಿಕ ದಕ್ಷಿಣೇಂದ್ರರೆನಿಸಿ ಪುನ
ರೇಕ ಜನ್ಮಕೆ ಮುಕ್ತರಹರು

ನೋಡಿ ನೋಡದ ನುಡಿದಾಡಿ ನುಡಿಯದೆಡೆ
ಯಾಡಿ ನಡೆಯದ ಮಹಾತ್ಮಾ
ಕೂಡೆ ಕೂಡೆನಗೆ ಚಿತ್ಕಳೆಯ ಬೆಳಕನುಂಟು
ಮಾಡು ನಿರಂಜನ ಸಿದ್ಧಾ

ಸಿಂದಲ್ಲಿ ನಡೆದಲ್ಲಿ ಕುಳಿತಲ್ಲಿ ಸರ್ವತ್ರ
ಕುಂದದೆ ಕುಶಲ ಲೀಲೆಯೊಳು
ಸಂಧಿಸುವಭವ ನನ್ನೆದೆಯೊಳಗಿರು ಚಿದಾ
ನಂದ ಚಿದಂಬರ ಪುರುಷಾ

ತಿಳಿವೆಳಗಿನ ತೀರ್ಥರೂಪವೆ ತಿಂಗಳ
ಬೆಳಗಿನೊಳಾದ ಪುತ್ಥಳಿಯೆ
ತಳುಮಾಡದೆನಗೆ ಸನ್ಮತಿದೋರು ಸುಜ್ಞಾನ
ನಿಳಯ ನಿರಂಜನ ಸಿದ್ಧಾ

ಹಿಂದು ಮುಂದೆಡಬಲ ಹೊರಗೊಳಗಡಿ ಕಡೆ
ಯೆಂದೆನ್ನದಮೃತ ಸ್ವರೂಪಾ
ಎಂದೆಂದು ಎನ್ನ ಚಿತ್ತದೊಳಿರು ಸಚ್ಚಿದಾ
ನಂದ ಚಿದಂಬರ ಪುರುಷಾ

ಉಸುರೆಂಬ ಕರಗಸದಿಂದ ದೇಹಾತ್ಮರ
ಬೆಸುಗೆಯ ಬಿಡಿಸಿ ನೋಡಿದರೆ
ಮಸುಳದೆ ತೋರ್ಪ ಮಹಾತ್ಮ ನೀನೆನಗೊಳ್ಪ
ನೆಸಗು ನಿರಂಜನ ಸಿದ್ಧಾ

ತೆರೆಯ ಮೇಲ್ ತೆರೆಗಳ ತೋರುವಿಂಗಡಲಂತೆ
ಸಿರಿಯ ಮೇಲ್ ಸಿರಿಯ ಸೂಚಿಸುವ
ಚರಿತಾರ್ಥ ನನ್ನಂತರಂಗದೊಳಿರು ಮನೋ
ಹರನೆ ಚಿದಂಬರ ಪುರುಷಾ

ಕಾಣದರ್ಥವ ಕಾಣಿಸುವ ಪರಂಜ್ಯೋತಿ ನೀ
ಮಾಣದೆ ನನ್ನೆದೆಯೆಂಬ
ಕೋಣೆಯೊಳಿರು ಹೋದೆಯಾದರೆ ನಿನಗೆ ನಿ
ನ್ನಾಣೆ ಚಿದಂಬರ ಪುರುಷಾ

೬. ಬಸವಣ್ಣ : ಸು. ೧೧೬೦ ಧರ್ಮದ ಕೆಚ್ಚು

ದೇವನೊಬ್ಬ, ನಾಮ ಪಲವು. ಪರಮಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದೊಡೆ ಕಿವಿ ಮೂಗ ಕೊಯ್ಯುವನು. ಪಲವು ದೈವದ ಎಂಜಲ ತಿಂಬವರನೇನೆಂಬೆನಯ್ಯ ಕೂಡಲಸಂಗಮದೇವ!

ನಂಬಿ ಕರೆದಡೆ ಓ ಎಂಬ ಶಿವನು. ನಂಬದೆ ಕರೆದಡೆ ಓ ಎಂಬನೆ ಶಿವನು? ನಂಬಲರಿಯರು, ನಚ್ಚಲರಿಯರು, ಡಂಬಿನ ಭಕ್ತರು. ನಂಬದೆ ನಚ್ಚದೆ ಬರಿದೆ ಕರೆದಡೆ, ಶಂಭು ಮೌನದಲಿಪ್ಪ ಕೂಡಲಸಂಗಮದೇವ.

ಮಡಕೆಯೇ ದೈವವು, ಮರದಲ್ಲಿಯ ದೈವವು, ಬಿಲ್ಲ ನಾರಿ ದೈವವು ಕಾಣಿರಯ್ಯ. ಕೊಳಗನೇ ದೈವವು, ಗಿಣಲು ದೈವವು ಕಾಣಿರಯ್ಯ. ದೈವವ ದೈವವೆಂದು ಕಾಲಿಡಲಿಂಬಿಲ್ಲ. ದೇವನೊಬ್ಬನೇ, ನಮ್ಮ ಕೂಡಲಸಂಗಮದೇವ.

ಅರ್ಥವಡಗದು, ಕ್ರೋಧ ತೊಲಗದು. ಕ್ರೂರ ಕುಹಕ ಕುಭಾಷ ಬಿಡದನ್ನಕ್ಕ, ನೀನೆತ್ತ ಶಿವನೆತ್ತ, ಹೋಗತ್ತ ಮರುಳೇ. ಭವರೋಗವೆಂಬ ತಿಮಿರ ತಿಳಿಯದನ್ನಕ್ಕ ಕೂಡಲಸಂಗಯ್ಯನೆತ್ತ, ನೀನೆತ್ತ ಮರುಳೇ.

ಹೊತ್ತಾರೆ ಎದ್ದು, ಅಗ್ಗಣಿ ಪತ್ತರೆಯ ತಂದು, ಹೊತ್ತುಹೋಗದ ಮುನ್ನ ಪೂಜಿಸು ಲಿಂಗವ. ಹೊತ್ತುಹೋದ ಬಳಿಕ ನಿನ್ನ ನಾರು ಬಲ್ಲರು? ಹೊತ್ತುಹೋಗದ ಮುನ್ನ, ಮೃತ್ಯು ಒಯ್ಯದ ಮುನ್ನ, ತೊತ್ತುಗೆಲಸವ ಮಾಡು ಕೂಡಲಸಂಗಮದೇವನ.

ಹೊತ್ತಾರೆ ಎದ್ದು, ಕಣ್ಣಹೊಸೆವುತ್ತ, ಎನ್ನ ಒಡಲಿಂಗೆ ಎನ್ನ ಒಡವೆಗೆ ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದರೆ, ಎನ್ನ ಮನಕ್ಕೆ ಮನವೇ ಸಾಕ್ಷಿ. "ಅಶನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ। ಸಂಚರಂತಿ ಮಹಾ ಘೋರೇ ನರಕೇ ಕಾಲಮಕ್ಷಯಂ" ಎಂಬ ಶ್ರುತಿಯ ಬಸವಣ್ಣನೋದುವನು. ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹೆನೆಂದು ನುಡಿವರಯ್ಯ ಪ್ರಮಥರು. ಕೊಡುವೆನುತ್ತರವನವರಿಗೆ, ಕೂಡಲಮ್ಮ. ಹೊಲೆಹೊಲೆಯರ



ಸಂಗಮದ ಮಂಟಪ

ಮನೆಯ ಹೊಕ್ಕಾದರೆಯೂ, ಸಲೆ ಕೈಕೂಲಿಯ ಮಾಡಿಯಾದರೆಯೂ, ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ ಕುದಿದೆನಾದರೆ, ತಲೆದಂಡ, ಕೂಡಲಸಂಗಮದೇವ.

ಹುತ್ತವ ಬಡಿದಡೆ, ಹಾವು ಸಾಯಬಲ್ಲುದೇ ಅಯ್ಯ? ಘೋರ ತಪವ ಮಾಡಿದಡೇನು? ಅಂತರಂಗ ಆತ್ಮಶುದ್ಧಿಯಿಲ್ಲದವರನೆಂತು ನಂಬುವನಯ್ಯ ಕೂಡಲಸಂಗಮದೇವ?

ಒಲೆಯ ಬೂದಿಯ ಬಳಿಯಲು ಬೇಡ. ಒಲೆಯಂತೆ ಹೂಸಿ ಕೊಂಡಿಪ್ಪುದು ಹುಸಿ. ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕ? ಒಂದನಾಡ ಹೋಗಿ ಒಂಬತ್ತನಾಡುವ ಡಂಬಕರ ಮೆಚ್ಚ ಕೂಡಲಸಂಗಮದೇವ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ. ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ. ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ. ಇದೇ ನಮ್ಮ ಕೂಡಲ ಸಂಗಮದೇವನನೊಲಿಸುವ ಪರಿ.

ಎನ್ನವರೊಲಿದು ಹೊನ್ನ ಶೂಲದಲಿಕ್ಕಿದರು, ಎನ್ನ ಹೊಗಳಿ ಹೊಗಳಿ. ಎನ್ನ ಹೊಗಳ್ತೆ ಎನ್ನ ಮೈಗೊಂಡಿತಲ್ಲಾ! ಅಯ್ಯಾ ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ! ಅಯ್ಯಾ, ನೊಂದೆನು, ಸೈರಿಸಲಾರೆನು. ಕೂಡಲ ಸಂಗಮದೇವ, ನೀನೆನಗೊಳ್ಳಿದನಾದರೆ, ಎನ್ನ ಹೊಗಳತೆಗಡ್ಡ ಬಾರಾ, ಧರ್ಮಾ.

ಎನಗಿಂತ ಕಿರಿಯರಿಲ್ಲ. ಶಿವಭಕ್ತರಿಗಿಂತ ಹಿರಿಯರಿಲ್ಲ. ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ. ಕೂಡಲಸಂಗಮದೇವಾ ಎನಗಿದೇ ದಿಬ್ಯ.

ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತ್ತಯ್ಯಾ. ಅಕಟಕಟ, ಸಂಸಾರ ವೃಥಾ ಹೋಯಿತ್ತಲ್ಲಾ! ಕರ್ತೃ ಕೂಡಲಸಂಗಮದೇವಾ, ಇವ ತಪ್ಪಿಸಿ ಎನ್ನನು ರಕ್ಷಿಸಯ್ಯಾ.

ಎನ್ನ ಚಿತ್ತ ಅತ್ತಿಯ ಹಣ್ಣು ನೋಡಯ್ಯಾ. ವಿಚಾರಿಸಿದರೆ ಏನೂ ಹುರುಳಿಲ್ಲವಯ್ಯಾ. ಪ್ರಪಂಚಿನ ಡಂಬಿನಲ್ಲಿ ಎನ್ನನೊಂದು ರೂಪುಮಾಡಿ, ನೀವಿರಿಸಿದಿರಯ್ಯಾ ಕೂಡಲಸಂಗಮದೇವ.

ನಾನೊಂದ ನೆನೆದರೆ ತಾನೊಂದ ನೆನೆವುದು. ನಾನಿತ್ತಲೆಳೆದರೆ ತಾನತ್ತ ಲೆಳೆವುದು. ತಾ ಬೇರೆ ಎನ್ನನಳಲಿಸಿ ಕಾಡಿತ್ತು. ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು. ಕೂಡಲಸಂಗನ ಕೂಡಿಹೆನೆಂದರೆ ತಾನೆನ್ನ ಮುಂದುಗೆಡಿಸಿತ್ತು ಮಾಯೆ.

ಶೂಲದ ಮೇಲಣ ಭೋಗವೇನಾದರೇನೋ? ನಾನಾವರ್ಣದ ಸಂಸಾರ ಹಾವ ಹಾವಡಿಗನ ಸ್ನೇಹದಂತೆ. ತನ್ನತ್ತವೇ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೆ, ಮಹಾದಾನಿ ಕೂಡಲಸಂಗಮದೇವ?

ಅಕಟಕಟ, ಶಿವ ನಿನಗಿನಿತು ಕರುಣವಿಲ್ಲ. ಅಕಟಕಟ, ಶಿವ ನಿನಗಿನಿತು ಕೃಪೆಯಿಲ್ಲ. ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ, ಪರಲೋಕದೂರನ? ಏಕೆ ಹುಟ್ಟಿಸಿದೆ, ಕೂಡಲಸಂಗಮದೇವ ಕೇಳಯ್ಯಾ, ಎನಗಾಗಿ ಮತ್ತೊಂದು ತರುಮೃಗಾದಿಗಳಿದ್ದಿಲ್ಲವೇ?

ತಂದೆ ತಾಯಿ ನೀನು, ಬಂಧು ನೀನು, ಬಳಗ ನೀನು. ನೀನಲ್ಲದೆ ಮತ್ತಾರು ಇಲ್ಲವಯ್ಯಾ, ಕೂಡಲಸಂಗಮದೇವಾ, ಹಾಲಲದ್ದು, ನೀರಲದ್ದು.

ಎನಿಸುಕಾಲ ಕಲ್ಲು ನೀರೊಳಗಿದ್ದರೇನು? ನೆನೆದು ಮೃದುವಾಗಬಲ್ಲುದೆ? ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ, ಮನದಲ್ಲಿ ದೃಢವಿಲ್ಲದನ್ನಕ್ಕ? ನಿಧಾನವ ಕಾಯ್ದಿದ್ದ ಬೆಂತರನಂತೆ ಅದರ ವಿಧಿ ಎನಗಾಯ್ತು ಕೂಡಲ ಸಂಗಮದೇವ.

ಆರಾಧ್ಯ ಪ್ರಾಣಲಿಂಗವೆಂದರಿದು, ಪೂರ್ವಗುಣವಳಿದು, ಪುನರ್ಜಾತ ನಾದ ಬಳಿಕ, ಸಂಸಾರ ಬಂಧುಗಳೆನ್ನ ವರೆಂದರೆ, ನಂಟುಭಕ್ತಿ ನಾಯಕನರಕ ಇಂತೆಂದುದು ಕೂಡಲಸಂಗನ ವಚನ.

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯ. ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ. ದಾಸಯ್ಯ ಶಿವದಾನವನೆರೆಯ ನೋಡಯ್ಯಾ! ಮನ್ನಣೆಯ ಚೆನ್ನಯ್ಯನೆನ್ನ ಮನ್ನಿಸ. ಉನ್ನತ ಮಹಿಮ, ಕೂಡಲಸಂಗಮದೇವ, ಶಿವಥೋ, ಶಿವಥೋ.

ಅಪ್ಪನು ಡೋಹರ ಕಕ್ಕಯ್ಯನಾಗಿ, ಮುತ್ತಯ್ಯ ಚೆನ್ನಯ್ಯನಾದರೆ, ಆನು ಬದುಕುವೆನು. ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯ ಸದ್ಗುಣವ ನಾನರಿವೆನಯ್ಯ. ಕಷ್ಟಜಾತಿ ಜನ್ಮದಲಿ ಜನಿಸಿದೆ. ಎನಗಿದು ವಿಧಿಯೇ ಕೂಡಲಸಂಗಮದೇವಾ?

ಸೆಟ್ಟಿ ಎಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹರ ನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚೆನ್ನಯ್ಯನ? ಆನು ಹಾರುವ ನೆಂದಡೆ ಕೂಡಲಸಂಗಯ್ಯ ನಗುವನಯ್ಯ.

ಆರು ಮುನಿದು ಎಮ್ಮನೇನು ಮಾಡುವರು? ಊರು ಮುನಿದು ಎಮ್ಮ ನೆಂತು ಮಾಡುವರು? ನಮ್ಮ ಕುನ್ನಿಗೆ ಕೂಸ ಕೊಡಬೇಡ. ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ. ಆನೆಯಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೆ, ನಮಗೆ ನಮ್ಮ ಕೂಡಲಸಂಗಯ್ಯನುಳ್ಳನ್ನಕ್ಕ?

ಕೊಲ್ಲುವನೇ ಮಾದಿಗನು, ಹೊಲಸು ತಿಂಬುವನೇ ಹೊಲೆಯ. ಕುಲ ವೇನೋ, ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು.

ಕಲ್ಲನಾಗರ ಕಂಡರೆ ಹಾಲನೆರೆ ಎಂಬರು, ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ! ಉಂಬ ಜಂಗಮ ಬಂದರೆ ನಡೆ ಎಂಬರು, ಉಣ್ಣದ

ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ! ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನಮಾಡಿದರೆ ಕಲ್ಲತಾಗಿದ ಮಿಟ್ಟಯಂತಪ್ಪರಯ್ಯ.

ಎರೆದರೆ ನೆನೆಯದು, ಮರೆದರೆ ಬಾಡದು. ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ. ಕೂಡಲಸಂಗಮದೇವ ಜಂಗಮಕ್ಕೆರೆದರೆ ಸ್ಥಾವರ ನೆನೆಯಿತ್ತು.

ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡುವೆ? ಬಡವ ನಯ್ಯ! ಎನ್ನ ಕಾಲೇ ಕಂಬ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯ. ಕೂಡಲಸಂಗಮದೇವ ಕೇಳಯ್ಯ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

ಆಡಿದರೇನು, ಹಾಡಿದರೇನು, ಓದಿದರೇನು, ತ್ರಿವಿಧ ದಾಸೋಹವಿಲ್ಲದನ್ನಕ್ಕ? ಆಡದೇ ನವಿಲು, ಹಾಡದೇ ತಂತಿ, ಓದದೇ ಗಿಣಿ? ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ.

ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕವಿಯಲ್ಲಿ ನಿಮ್ಮ ಕೀರ್ತಿ ತುಂಬಿ, ಕೂಡಲಸಂಗಮದೇವಾ, ನಿಮ್ಮ ಚರಣಕಮಲದೊಳಗಾನು ತುಂಬಿ.

ಎನ್ನ ಕಾಯವ ದಂಡಿಗೆಯ ಮಾಡಯ್ಯ. ಎನ್ನ ಶಿರವ ಸೋರೆಯ ಮಾಡಯ್ಯ. ಎನ್ನ ನರವ ತಂತಿಯ ಮಾಡಯ್ಯ. ಎನ್ನ ಬೆರಳ ಕಡ್ಡಿಯ ಮಾಡಯ್ಯ. ಬತ್ತೀಸ ರಾಗವ ಹಾಡಯ್ಯ. ಉರದಲೊತ್ತಿ ಬಾರಿಸು ಕೂಡಲ ಸಂಗಮದೇವ.

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ. ಸತ್ಯವ ನುಡಿವುದೇ ದೇವಲೋಕ; ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ; ಅನಾಚಾರವೇ ನರಕ. ಕೂಡಲಸಂಗಮದೇವ ನೀವೇ ಪ್ರಮಾಣ.

ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ, ಕೂಡಲ ಸಂಗಮದೇವ.

ಪುಣ್ಯಪಾಪಗಳೆಂಬುವು ತಮ್ಮ ಇಷ್ಟ ಕಂಡಿರೆ. ಅಯ್ಯ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ. ದೇವ ಭಕ್ತ ಜಯ ಜೀಯಾ ಎಂಬ ನುಡಿಯೊಳಗೆ ಕೈಲಾಸವಿಹುದು ಕೂಡಲಸಂಗಮದೇವ.

ಪರಚಿಂತೆ ನಮಗೇಕಯ್ಯ? ನಮ್ಮ ಚಿಂತೆ ನಮಗೆ ಸಾಲದೆ? ಕೂಡಲ ಸಂಗಯ್ಯ ಒಲಿವನೋ ಒಲಿಯನೋ ಎಂಬ ಚಿಂತೆ ಹಾಸಲುಂಟು, ಹೊದೆಯಲುಂಟು.

ಎಲ್ಲರೂ ವೀರರು, ಎಲ್ಲರೂ ಧೀರರು, ಎಲ್ಲರೂ ಮಹಿಮರು, ಎಲ್ಲರೂ ಪ್ರಮಥರು, ಕಾಳಗದ ಮುಖದಲ್ಲಿ ಕಾಣಬಹುದು. ಓಡುವ ಮುಖದಲ್ಲಿ ಕಾಣಬಾರದು. ನಮ್ಮ ಕೂಡಲಸಂಗಮದೇವನ ಶರಣರು ಧೀರರು, ಉಳಿದವರೆಲ್ಲ ಅಧೀರರು.

ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆಮಾರುವೋದೆನೆಂದರೆ, ತನುವ ನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು, ಧನವ ನಲ್ಲಾಡಿಸಿ ನೋಡುವೆ ನೀನು, ಇವೆಲ್ಲಕ್ಕಂಜದಿದ್ದರೆ, ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವ.

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯ. ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯ. ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡಿಯಾಣಿಯ ಮಾಡಿ, ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು ಕೂಡಲ ಸಂಗಮದೇವ.

ಇರಿಸಿಕೊಂಡು ಭಕ್ತರಾದರೆಮ್ಮವರು. ತರಿಸಿಕೊಂಡು ಭಕ್ತರಾದರೆಮ್ಮವರು. ಜರಿಸಿಕೊಂಡು ಭಕ್ತರಾದರೆಮ್ಮವರು. ಕೊರಸಿಕೊಂಡು ಭಕ್ತರಾದರೆಮ್ಮವರು. ಕೂಡಲಸಂಗನ ಶರಣರಿಗೆ ಮುನಿಸ ತಾಳೆ ಎನ್ನ ಭಕ್ತಿ ಅರಿಯಾಯಿತ್ತು.

ಜಲವ ತಪ್ಪಿದ ಮತ್ಸ್ಯ ಬದುಕುವುದೇ ಸೋಜಿಗ. ಗಣ ತಿಂತಿಣಿಯೊಳಗಿರಿಸೆನ್ನ ಲಿಂಗವೇ. ಶಿವ ಶಿವ ಕೂಡಲಸಂಗಮದೇವ ಸರಗೊಡ್ಡಿ ಬೇಡುವೆನು.

ಊರಮುಂದೆ ಹಾಲ ಹಳ್ಳ ಹರಿಯುತ್ತಿರಲಿ, ಓರೆಯಾವಿನ ಬೆನ್ನ ಹರಿಯಲದೇಕಯ್ಯ? ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ಕೂಡಲಸಂಗಮದೇವಯ್ಯನುಳ್ಳನ್ನಕ್ಕ ಬಿಜ್ಜಳನ ಭಂಡಾರವೆನಗೇಕಯ್ಯ?

ದಯವಿಲ್ಲದ ಧರ್ಮವಾವುದಯ್ಯ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ. ದಯವೇ ಧರ್ಮದ ಮೂಲವಯ್ಯ. ಕೂಡಲಸಂಗಯ್ಯನಂತಲ್ಲ ದೊಲ್ಲನಯ್ಯ.

ಆನೆ ಅಂಕುಶಕ್ಕಲ್ಲದೆ ಅಂಜುವುದೇ ಅಯ್ಯ? ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ? ಆನೀ ಬಿಜ್ಜಳಂಗಂಜುವೆನೆ ಅಯ್ಯ? ಕೂಡಲಸಂಗಮದೇವ, ನೀನು ಸರ್ವಜೀವದಯಾಪಾರಿಯಾದ ಕಾರಣ ನಿಮಗಂಜುವೆನಲ್ಲದೆ?

ಜೋಳವಳಿಯುವವ ನಾನಲ್ಲಯ್ಯ. ವೇಳೆಯಳಿಯುವವ ನಾನಲ್ಲಯ್ಯ. ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ. ಕೇಳು ಕೂಡಲಸಂಗಮದೇವ ಮರಣವೇ ಮಹಾನವಮಿಯೆನಗೆ.

ಆಯುಷ್ಯ ತೀರಿದಲ್ಲದೆ ಮರಣವಿಲ್ಲ. ಭಾಷೆ ತೀರಿದಲ್ಲದೆ ದಾರಿದ್ರ್ಯವಿಲ್ಲ. ಅಂಜಲೇಕೋ ಲೋಕವಿಗುರ್ಬಣೆಗೆ? ಅಂಜಲೇಕೋ ಕೂಡಲಸಂಗಮದೇವ ನಿಮ್ಮಾಳಾಗಿ?

ಕಲಿಯ ಕೈಯ ಕೈದುವಿನಂತಿರಬೇಕಯ್ಯ. ಎಲುದೋರ ಸರಸವಾಡಿದರೆ ಸೈರಿಸಬೇಕಯ್ಯ. ರಣದಲ್ಲಿ ತಲೆ ಹರಿದು ನೆಲಕ್ಕೆ ಬಿದ್ದು ಬೊಬ್ಬಿಡಲದಕ್ಕೆ ಒಲಿವ ಕೂಡಲಸಂಗಮದೇವ.

"ಸಾಕುಮಾಡೈ ತಂದೆ ಲೋಕದಾಟವನಿನ್ನು.
ತೆರಪುಗೊಡು ತಂದೆ ಬಂದಿಹೆನು ಬಸವನು ನೊಂದೆ."
—ಹರಿಹರ: ಬಸವರಾಜದೇವ ರಗಳೆ

೭. ಹರಿಹರ: ಸಂಗನು ಬಸವಣ್ಣನವರನ್ನು ಕಲ್ಯಾಣಕ್ಕೆ ಕಳುಹಿಸಿದ್ದು

ಸಂಗಂ ಬಸವನೊ ಬಸವಂ
ಸಂಗನೊ ತಮ್ಮಿರ್ಬರೊರ್ಬರಂತೊರ್ಬರೊ ಮೇಣ್
ಸಂಗಂ ಬಸವನೊ ಬಸವಂ
ಸಂಗನೊ ಎನಿಪೊಂದಭೇದಭಾವದೊಳಿರ್ದರ್

ಇಪ್ಪಲ್ಲಿ ಕನಸಿನೊಳು....ಎಳವಿಸಿಲ ಬೆಳಗಂ ತರುಣ ತರಣಿಗೆ ಕಡಂಗೊಡುವ ಪ್ರಭಾ ದುಕೂಲದಂತಿರ್ದ ಪುಲಿದೊಗಲಿಂದೊಪ್ಪಿ, ಪಶುಪತಿ ಬಸವನ ಮನದ ಮೊನೆಯೊಳೊಪ್ಪೆ ಮೂರ್ತಿಗೊಂಡು:

ಎಲೆ ಮಗನೆ ಬಸವ ಬಸವಣ್ಣ ಬಸವಿದೇವ, ನಿನ್ನಂ ಮಹೀತಳದೊಳು ಮೆಱೆಸಿದಪೆವು. ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು – ಎಂಬ ನುಡಿಯೊಡನೆ ಕನಸಿನ ಮಾತು ಮನವನಿಮ್ಮೈಗಂಡು, ನಿದ್ರೆ ತಿಳಿದು ಕಣ್ದೆಱೆದು ಕೆಲಬಲನಂ ನೋಡಿ ಬೆಚ್ಚಿ ಬೆಗಡುಗೊಂಡು ಅನುತಾಪವೇಱಿ ವಿರಹ ಹೊಮ್ಮಿ ಕಣ್ಣಿಟ್ಟಗಲಲಾಱದೆ ರಂಗಮಂಟಪದ ಕಂಭಮಂ ಪಳಿಲನೆ ಹಾಯ್ದು– ದೇವ ದೇವ ಸಂಗ, ಕಂಡೈ. ಕೆಟ್ಟಿ ಕೆಟ್ಟಿಂ. ತೊಟ್ಟನಿಂತು ಕಣ್ ನೋಡದೆ ಹುಣ್ಣು ನೋಡದೆ ಹೋಗೆಂಬರೆ? ಗಗನದಿಂದಿಳವಂಗಾಧಾರಮಾಗುತ್ತೆ ತಪ್ಪುವರೆ? ಕಾಳ್ಗಿಚ್ಚಿನಿಂ ಬೇವಂಗೆ ತಂಪಿನ ಸೋನೆಯ ಮಳೆಯಾಗುತ್ತೆ ಮಾಣ್ಬರೆ? ಇಂತು ನಡುಗಡಲೊಳಾಳುವಂಗೆ ತೆಪ್ಪವಾಗುತ್ತೆ ಪಿಂಗುವರೆ? ನರಲೋಕದೊಳಾಳಲೀಯದೆ ಚಂಡಿಕೆವಿಡಿದುದ್ಧರಿಸಲೆಂದಾಳ್ಗೊಂಡ ಗುರುವೆ ಪರಮ ಬಂಧುವೆ ಪ್ರಾಣವೆ, ಬೆಳುದಿಂಗಳೇಕೆ ಬಿಸುಪೇಕೆ? ಅಮೃತವೇಕೆ ವಿಷವೇಕೆ? ಬೆಳಗೇಕೆ ತಮವೇಕೆ? ನೀನೇಕೆ ಈ ನುಡಿಯೇಕೆ? ಹೊದ್ದಿದರಂ ಹೋಗೆಂಬರೆ? ಸಾರ್ದರಂ ಸೈರಿಸೆಂಬರೆ? ನಂಬಿದವರ ಗೋಣಂ ಕೊಯ್ವರೆ? ಶಿಶುವನಿಱಿವರೆ? ಪಶುವಂ ಕೊಲುವರೆ? ಎನ್ನಂ ಬಿಡುವರೆ? ಕರುಣೆ ಕರುಣೆ, ಕರುಣಂ ಲೇಸಾಯ್ತು. ಅರ್ಚಿಸಿತಕ್ಕೆ ಫಲವಾಯ್ತು. ಇನ್ನೇನು ಇನ್ನೇನು?– ಎಂದೊಟ್ಟಿ ಒಱಲಿ ಪರಿತಂದು ಸಂಗನಂ ತಕ್ಕೈಸಿ ಪಳವಿಸಿ ಪಲುಂಬಿ ಗೋಳಿಟ್ಟು ಆಲಿಟ್ಟು ಸಿವದಿಟ್ಟು ಮೊಱೆಯಿಟ್ಟು ಮೂರ್ಛಿಸುತ್ತಿಂತಕ್ಕೆಚ್ಚತ್ತು ಮೆಲ್ಲಮೆಲ್ಲ ನಾಲಿಂಗನಮಂ ಸಡಿಲ್ಚಿ ನಡೆತಂದು;

ಮನವಲ್ಲದ ಮನದೊಳಗ್ಗವಣಿ ಹೂಗಳಂ ಬೇಗಂ ತಂದಂತಂತೆ ಪೂಜೆಗೆಯ್ದಾರೋಗಣೆಗಿತ್ತು, ಮೋಹದ ಮುನಿಸು ಮನದೊಳ್ ತೀವಿ ಪ್ರಣಯ

ಕಲಹಂ ಬಲಿದು ಪ್ರಸಾದಮನೊಲ್ಲದೆ ಬಸವಂ ಮುಸುಂಕಿಟ್ಟು ಪಶುಪತಿಯ ಪದದ ಕೆಳಗೆ ನಿರ್ವೇಗದಿಂ ಪಟ್ಟರ್ದಿರೆ; ರಾತ್ರಿಯೊಳು ನೇತ್ರತ್ರಯಂ ಭಕ್ತ ನಿರವಂ ನೋಡಿ ಕೊರಗಿ ಮೋಹದ ಮಹಿಮೆಗೆ ಮರವಟ್ಟು ಭಕ್ತಿಯ ಭರಕ್ಕೆ ಕೌತುಕಂಗೊಂಡಗಲಲಾಱಿದ ಮಗಂಗೆ ಮಿಗೆ ಕರುಣಿಸಿ, ಮತ್ತೆ ಕನಸಿನೊಳು ಬಂದು – ಎಲೆ ಮಗನೆ ಎಲೆ ಕಂದ ಎಲೆ ಬಸವ, ನಿನ್ನನಗಲಿ ನಾನಿರಲಾಱೆ. ನಿನಗಿನಿತು ನಿರೋಧವೇಕೆ? ಬೇಡಯ್ಯ ಬೇಡೆನ್ನ ರಸ, ಬೇಡೆನ್ನ ಭಕ್ತನಿಧಿಯೆ, ನಿನ್ನೊಡನೊಡನೆ ಬಿಡದೆ ಬಪ್ಪೆಂ.

ಇಂತು ಬೆಸಸುತ್ತಮಿರೆ ಬಸವನಾಗಳೆ ಕೇಳ್ದು
ಅಂತಸ್ಥದೊಳು ವಿರಹಚಿಂತೆಯಂ ಮಿಗೆ ತಾಳ್ದು
ಸಲೆ ಮತ್ತೆ ಮತ್ತೆ ಪೋಗೆಂದಪಂ ಸಂಗಮಂ
ನಲಿದು ಪೂಜಿಸಲೀಯನಕ್ಕುಟಾ ಸಂಗಮಂ
ಆದಡಂ ಪೋಗಿ ನೋಡುವೆನೆಂದು ಬಗೆಗೊಂಡು
ಆದರಂ ಕುಂದುತ್ತೆ ಚಿಂತೆಯಂ ಕೈಕೊಂಡು
ಶಿವಭಕ್ತ ಸಂತತಿಗೆ ಬೆಸಕಯ್ವುಪಾಯಮಂ
ಶಿವಭಕ್ತಿ ನೆಲೆಗೊಳ್ವ ಸಮಸುಖ ಸಹಾಯಮಂ
ನೆನೆದು ತನ್ನೊಳಗೊಳಗೆ ತಿಳಿದಂ ಶಿವಧ್ಯಾನಿ
ಅನುಪಮ ಶಿವೈಕ ಸಮ್ಯಗ್ಜ್ಞಾನಿ ಕಡುಮಾನಿ
ಅಕ್ಷರ ಜ್ಞಾನಮುಂಟದನೈದೆ ಮಾಱುವೆಂ
ತ್ರ್ಯಕ್ಷನಣುಗರ್ಗಾದ ಹೊಂಗಳಂ ಬೀಱುವೆಂ
ಅವರ ಪ್ರಸಾದಮಂ ನಲವಿಂದ ತಾಳುವೆಂ
ಅವರ ಕಾರುಣ್ಯರಸಜಲದೊಳೋಲಾಡುವೆಂ
ಎಂದಲ್ಲಿ ಗಣಕ ಕಾಯಕಮಂ ಮನಂಗೊಂಡು
ನಿಂದದಕ್ಕನುಕೂಲವೇಷಮಂ ಕೈಕೊಂಡು
ಸಂಗಂಗೆ ಬಿನ್ನೈಸಲೆಂದು ಹತ್ತಿರೆ ಬಂದು
ಹಿಂಗಲಾಱದೆ ಕಣ್ಗಳಿಂ ಶೋಕಜಲಬಿಂದು
ತೆರಳೆ ಸೆರೆ ಬಿಗಿದು ಗದಗದಿಸಿ ಬಿಕ್ಕುತೆ ಬಿದ್ದು
ಹೊರಳುತ್ತುತ್ತುತ್ತಗಲಲಾಱದೊಱಲುತ್ತೆದ್ದು
ನಿಂದಿರುತ್ತೆಲೆ ಸಂಗ ಹೋಗಿಬಂದಪೆನಯ್ಯ
ತಂದೆ ನಿನ್ನಂ ನಂಬಿ ನಚ್ಚಿ ಹೋದಪೆನಯ್ಯ
ಅಗಲಲಾಱೆಂ ದೇವದೇವ ಕರುಣಿಪುದೆನುತೆ
ಬಗೆ ಹೆಚ್ಚಿ ತನು ಹೆಚ್ಚಿ ಕೊಟ್ಟಂತೆ ನಿಂದಿರುತೆ
ಮುಂದಿರ್ದ ಬಸವನಂ ಕಂಡು ಸಂಗಂ ಮಱುಗಿ
ಬಂದಪ್ಪಿ ಕಣ್ಣೀರಂ ತೊಡೆದು ಮಿಗೆ ಮಱುಗಿ

ಬೇಡೆನ್ನ ಕಂದ ನಿನ್ನೊಡನೆ ಬಪ್ಪೆಂ ಬಸವ
ನೋಡು ನಿನ್ನಾಣೆ ನಿನ್ನೊಡನೆ ಬಪ್ಪೆಂ ಬಸವ
ನಿನ್ನನಗಲಿರಲಾರ್ಪೆನೇ ಬಸವ ಬಸವಣ್ಣ
ನೀನಿಂತಳುತ್ತಿಪ್ಪಡೆನಗರಿದು ಬಸವಣ್ಣ
ಕಂದ ಬೇಡಯ್ಯ ಬೇಡಯ್ಯ ನೇಹದ ನಿಧಿಯೆ
ಹಿಂದುಗೊಂಡೇ ಬಪ್ಪೆನೆನ್ನ ಸುಕೃತದ ಸುಧೆಯೆ
ನೆನೆಯೆ ಮುಂದಿರ್ದಪೆಂ ಕರೆದೊಡೋ ಎಂದಪೆಂ
ಮನದೊಳಗೆ ಕರದೊಳಗೆ ತನುವಿನೊಳಗಿರ್ದಪೆಂ
ನಿಂದಲ್ಲಿ ನಿಂದಪೆಂ ನಡೆದಲ್ಲಿ ನಡೆದಪೆಂ
ಬಂದಲ್ಲಿ ಬಂದಪೆಂ ನುಡಿದಲ್ಲಿ ನುಡಿದಪೆಂ
ಬಿಟ್ಟುದಂ ಬಿಟ್ಟಪೆಂ ಪಿಡಿದುದಂ ಪಿಡಿದಪೆಂ
ನಟ್ಟುದಂ ನಟ್ಟಪೆಂ ಕೇಳ್ದುದಂ ಕೇಳ್ದಪೆಂ
ಆಡಿದುದನಾಡುವೆಂ ನೋಡಿತಂ ನೋಡುವೆಂ
ಮಾಡಿತಂ ಮಾಡುವೆಂ ಕೂಡಿತಂ ಕೂಡುವೆಂ
ನಡೆಯಯ್ಯ ನಡೆ ಮಗನೆ ನಡೆ ಕಂದ ಬಸವಣ್ಣ
ಸೊಡವಿಗಧಿಪತಿಯಾಗಿ ಬಾಳೆನ್ನ ಬಸವಣ್ಣ

ಎಂದಲ್ಲಿ ಕರುಣಿಸಿದ ಮಾತು ಸಂಬಳವಾಗಿ
ಬಂದನೆಂತೆಂತಕ್ಕೆ ಅಗಲಲಾಱಿದೆ ರಾಗಿ
ಸಂಗಮನ ಕರುಣವೇ ತನಗೆ ಬೆಂಬಲವಾಗಿ
ಸಂಗಮ ಧ್ಯಾನವೇ ತನಗೆ ಸಂಗಡವಾಗಿ.

೮. ಹರಿಹರ: ಬಸವಣ್ಣನವರ ಗುಣ

ಪುಣ್ಯಲೋಭಿ ಭಕ್ತರ ಬಾಕುಳಿ ಶರಣರ ಸೂಱಿಕೆ ಸಜ್ಜನರ ಸಲೆಮಾಱಿ ಶರಣರ ಸಂಗದ ಶಾಶ್ವತನೆನಿಪ ಬಸವರಾಜಂ ಲಿಂಗ ಜಂಗಮ ಪ್ರಸಾದ ಹೃದಯನಾಗಿ ಶರಣರೊಳು ಸದ್ಭೋಷ್ಮಿಯಿಂದಿರ್ದು ಮತ್ತಮಿಂತೆಂದಂ –

ದೇವದೇವ, ನಿಮ್ಮರ್ಥಮುಂ ನಿಮಗೆ ತೊತ್ತುಗೆಲಸವಂ ಮಾಡಿ ಬೇಡಿತಂ ನೀಡುವ ಕಿಂಕರನೆಂದು ನೀವೆ ಕೊಂಡು ಕೊನೆದಾಡಿಸುವ ನಿಮ್ಮ ಕಣ್ಣ ಮೊದಲ ಕಪ್ಪಡದ ಹಾಹೆ ಆನೆಂಬುದು. ಹಲವಂ ನುಡಿವುದೆಲ್ಲಂ ಪುಸಿ, ನಡೆವುದೆಲ್ಲಂ ತಪ್ಪು. ನೇಮವಱಿಯದ ನೀರಸಂ ಪೂಜೆಯಱಿಯದ ಪುಣ್ಯದೂರಂ ಹಾಡಲಱಿಯದ ಹಸುಳೆಯಪ್ಪೆನ್ನೊಳು ಲೇಸನಱಿಸದೆ ತಪ್ಪಂ ನೋಡದೆ ಕರುಣಿಪುದು – ಎಂದು ಬಿನ್ನೈಸಿದ ಬಸವಂಗೆ ಮೆಚ್ಚಿ ಮಾಹೇಶ್ವರಕುಲಂ ಭೋರನೆ ಪರಸಿ ಹಾರೈಸಿ ಹಿಗ್ಗಿ ತಣಿದು ಕುಳ್ಳಿರ್ದು ಮೆಚ್ಚಿ ಮನಂತೀವಿದಾನಂದದಿಂ ಮಿಕ್ಕು ವಿಾಱಿ–

ಎಲೆ ಬಸವ ಬಸವಣ್ಣ ಬಸವಯ್ಯ ಬಸವರಸ ಬಸವರಾಜ ಬಸವಿದೇವ, ಕೇಳಯ್ಯ. ನಿನ್ನ ನೇಮವಿದಾರ್ಗುಂಟು! ಗುರುಲಿಂಗದೊಳೆರಡಿಲ್ಲದಿಪ್ಪೆ. ಶರಣರಂ ಸಂಗನೆಂದೆ ಕಾಣ್ಬೆ. ಬಂದ ಭಕ್ತರನತ್ಯಾದರಿಪೆ. ಬಪ್ಪ ಭಕ್ತರಂ ಹರುಷದೊಳಿದಿರ್ಗೊಂಬೆ. ಬೇಡಿದುದ ಶರಣರ್ಗಿಲ್ಲೆನ್ನದೀವೆ. ಬೇಡಲೊಲ್ಲದವರ್ಗೆ ಮಿಗಿಲಾಗಿ ಆರಾಧಿಪೆ. ಜಾಗ್ರತ್ ಸ್ವಪ್ನ ಸುಷುಪ್ತಿಯವಸ್ಥಾತ್ರಯಂಗಳೊಳು ಶರಣರಂ ಸಂಗನೆಂದಲ್ಲದೆ ಕಾಣೆ. ನಿಚ್ಚ ಶಿವರಾತ್ರಿಯನಚ್ಚರಿಯಿಂ ಮಾಳ್ಪೆ. ಜಂಗಮಪ್ರಾಣಿಯಾಗಿಪ್ಪೆ. ಶಿವಲಿಂಗಾರ್ಪಿತವಲ್ಲದುದನಾಘ್ರಾಣಿಸೆ, ನೋಡೆ, ನುಡಿಯೆ, ಮುಟ್ಟೆ, ಕೇಳೆ. ಶಿವಸಮಯವನುದ್ಧರಿಸುವೆ. ಲಿಂಗದಲ್ಲಿ ಕಠಿನಮಂ ಕೇಳೆ. ಜಂಗಮದಲ್ಲಿ ಜಾತಿಯನಱಿಸೆ. ಪ್ರಸಾದದಲ್ಲಿ ಅಪವಿತ್ರತೆಯನಱಿಯೆ. ಪರಾಂಗನೆಯರಂ ಹೆತ್ತ ತಾಯ್ಗಳೆಂಬೆ. ಪರದ್ರವ್ಯಮಂ ಕಿಲ್ಬಿಷವೆಂದು ಮುಟ್ಟೆ. ನಡೆದು ತಪ್ಪೆ, ನುಡಿದು ಹುಸಿಯೆ, ಒಡಿದು ಬಿಡೆ, ಬಿಟ್ಟು ಹಿಂಗಲೀಯೆ, ಕೊಟ್ಟು ನೆನೆಯೆ, ನಟ್ಟು ಕೀಳೆ, ಮುಟ್ಟಿ ಪೆಱಪಿಂಗೆ, ಕೂಡಿ ತಪ್ಪೆ, ನೋಡಿ ನಿರಾಕರಿಸೆ, ನೆನೆದು ಮಱೆಯೆ. ಮನದೊಳೋವರಿಯಿಲ್ಲ, ಬುದ್ಧಿಯೊಳು ವಿಸಂಚವಿಲ್ಲ, ಅಹಂಕಾರದೊಳು ಗರ್ವವಿಲ್ಲ, ಚಿತ್ತದೊಳು ಹೊಲಬಿಯಿಲ್ಲ. ಕಾಮವಿಲ್ಲ, ಕ್ರೋಪದ ಮಾತೇಕೆ? ಲೋಭದ ಗಾಳಿ ತೀಡದು, ಮೋಹಕೆ ತೆಱಿಪಿಲ್ಲ, ಮದದ ಸೊಗಡು ಹೊದ್ದದು, ಮತ್ಸರಕ್ಕಿಂಬಿಲ್ಲ. ಬಸವರಾಜ, ನಿನ್ನ ಗುಣಂಗಳಂ ಬಣ್ಣಿಸಲೆಮ್ಮಳವಲ್ಲ. ಈಶನ ಮಿಾಸಲಪ್ಪ ಭಕ್ತ, ನಿನಗೆಣೆಯಿಲ್ಲ ಪಡಿಯಿಲ್ಲ, ಪಾಸಟಿಯಾವಂ? ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಾಂಗಳಂ ಬೆಳೆದು ಗಣಪರ್ವಂಗಳಂ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ, ನಿನ್ನ ದೆಸೆಯಿಂದೆಮ್ಮ ಭಕ್ತಿ ಬಣ್ಣವೇಱಿತು–ಎಂದಡಿಗಡಿಗೆ ಮೆಚ್ಚಿ ತೂಗಾಡುವ ಗಣಂಗಳ ಚರಣಂಗಳಂ ಬಿಗಿಯಪ್ಪಿ ಬಸವರಾಜಂ ಪೊಗೞ್ತೆಗೆ ತಲ್ಲಣಿಸಿ ತಗ್ಗಿ ಮುಲ್ಲಣಿಗೊಂಡಾಗಳಾಗಳಿನ ಸಂಗತಿಗೆ ಹೊಸ ಹೊಸ ಗೀತಮಂ ಕೇಳಿಸುತ್ತಿರ್ದ(ನ್)....

೯. ಮಹಾದೇವಿಯಕ್ಕ: ಸು. ೧೧೬೦ ಶಿವನೇ ನನ್ನ ಗಂಡ

ವನವೆಲ್ಲ ನೀವೆ. ವನದೊಳಗಣ ದೇವತರುವೆಲ್ಲ ನೀವೆ. ತರುವಿನೊಳಗಾಡುವ ಖಗಮೃಗವೆಲ್ಲ ನೀವೆ. ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೆ ಮುಖದೋರ.

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ. ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ. ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ. ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ. ಜಗದ ಜಂಗುಳಿಗಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ. ಚೆನ್ನಮಲ್ಲಿಕಾರ್ಜುನ, ನೀನೊಡ್ಡಿದ ಮಾಯೆಯನಾರೂ ಗೆಲಲಾರರು.

ಪುರುಷನ ಮುಂದೆ ಮಾಯೆ ಸ್ತ್ರೀ ಎಂಬ ಅಭಿಮಾನವಾಗಿ ಕಾಡಿತ್ತು ನೋಡಾ! ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡಿತ್ತು

ನೋಡಾ! ಲೋಕವೆಂಬ ಮಾಯೆಗೆ ಶರಣಚಾರಿತ್ರ ಮರುಳಾಗಿ ತೋರುವುದು ನೋಡಾ! ಚೆನ್ನ ಮಲ್ಲಿಕಾರ್ಜುನನೊಲಿದ ಶರಣಂಗೆ ಮಾಯೆ ಇಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ.

ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ ಚಪ್ಪರವನಿಕ್ಕಿ ಮುತ್ತು ಮಾಣಿಕದ ಮೇಲುಕಟ್ಟ ಕಟ್ಟಿ ಮದುವೆಯ ಮಾಡಿದರು, ನಮ್ಮವರೆನ್ನ ಮದುವೆಯ ಮಾಡಿದರು. ಕಂಕಣ ಕೈದಾರ ಸ್ಥಿರ ಸೇಸೆಯನಿಕ್ಕಿ, ಚೆನ್ನ ಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು.

ಜಲದ ಮಂಟಪದಮೇಲೆ ಉರಿಯ ಚಪ್ಪರವನಿಕ್ಕಿ, ಆಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ, ತಲೆಯಿಲ್ಲದ ಗಂಡ ಬಂದು ಮದುವೆಯಾದನು. ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ ಚೆನ್ನ ಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು.

ಮಂಗಳವೇ ಮಜ್ಜನವೆನಗೆ, ವಿಭೂತಿಯೇ ಒಳಗುಂದದರಿಸಿನವೆನಗೆ, ದಿಗಂಬರವೇ ದಿವ್ಯಾಂಬರವೆನಗೆ, ಶಿವಪಾದರೇಣುವೇ ಅನುಲೇಪನವೆನಗೆ, ರುದ್ರಾಕ್ಷಿಯೇ ಮೈದೊಡಿಗೆ ಎನಗೆ, ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ, ಚೆನ್ನಮಲ್ಲಿಕಾರ್ಜುನನೇ ಗಂಡನೆನಗೆ, ಆನು ಚೆನ್ನ ಮಲ್ಲಿಕಾರ್ಜುನಂಗೆ ಮದುವಳಿಗೆ, ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವಾ.

ಬೆಟ್ಟದಮೇಲೊಂದು ಮನೆಯ ಮಾಡಿ ಮೃಗಂಗಳಿಗಂಜಿದಡೆಂತಯ್ಯ! ಸಮುದ್ರದ ತಡಿಯಲ್ಲಿ ಮನೆಯ ಮಾಡಿ, ನೊರೆ ತೊರೆಗಳಿಗಂಜಿದಡೆಂತಯ್ಯ! ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ! ಚೆನ್ನ ಮಲ್ಲಿಕಾರ್ಜುನದೇವ ಕೇಳಯ್ಯ! ಲೋಕದೊಳಗೆ ಹುಟ್ಟಿರ್ದ ಬಳಿಕ ಸ್ತುತಿ ನಿಂದೆಗಳು ಬಂದಡೆ, ಮನವಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಅಯ್ಯಾ ನೀ ಕೇಳಿದರೆ ಕೇಳು, ಕೇಳದಿರ್ದೊಡೆ ಮಾಣು, ನಾನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ! ಅಯ್ಯ ನೀ ಒಲಿದರೆ ಒಲಿ, ಒಲಿಯದಿರ್ದೊಡೆ ಮಾಣು, ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯ! ಅಯ್ಯಾ, ನೀ ಮೆಚ್ಚಿದರೆ ಮೆಚ್ಚು ಮೆಚ್ಚದಿರ್ದೊಡೆ ಮಾಣು, ನಾನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯಾ! ಅಯ್ಯ ನೀ ನೋಡಿದೊಡೆ ನೋಡು, ನೋಡದಿರ್ದೊಡೆ ಮಾಣು, ನಾನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ! ಚೆನ್ನಮಲ್ಲಿಕಾರ್ಜುನಯ್ಯ ನಾ ನಿಮ್ಮ ಪೂಜಿಸಿ ಹರುಷದೊಳೋಲಾಡುವೆನಯ್ಯ.

ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚೆಲುವಂಗಾನೊಲಿದೆನವ್ವ. ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚೆಲುವಂಗಾನೊಲಿದೆ ಎಲೆ ಅವ್ವಾ, ನೀನು ಕೇಳಾ ತಾಯೆ. ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ. ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ. ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.

ವೇದಶಾಸ್ತ್ರ ಪುರಾಣಾಗಮುಂಗಳೆಲ್ಲ ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿ ಭೋ! ಇವ ಕುಟ್ಟಲೇಕೆ? ಅತ್ತಲಿತ್ತ ಹರಿವ ಮನದ ಶಿರವ ನರಿದಡೆ, ಬಚ್ಚ ಬರಿಯ ಬಯಲು ಚೆನ್ನಮಲ್ಲಿಕಾರ್ಜುನ.

ಗಿರಿಯಲ್ಲದೆ ಹುಲ್ಲುಮೊರಡಿಯಲ್ಲಾಡುವುದೇ ನವಿಲು? ಕೊಳನಲ್ಲದೆ ಕಿರಿವಳ್ಳಕ್ಕೆಳಸುವುದೆ ಹಂಸೆ? ಮಾಮರ ತಳಿತಲ್ಲದೆ ಸ್ವರಗೈವುದೆ ಕೋಗಿಲೆ? ಪರಿಮಳವಿಲ್ಲದ ಪುಷ್ಪಕ್ಕೆಳಸುವುದೇ ಭ್ರಮರ? ಎನ್ನ ದೇವ ಚೆನ್ನಮಲ್ಲಿಕಾರ್ಜುನನಲ್ಲದೆ, ಅನ್ಯಕ್ಕೆಳಸುವುದೇ ಎನ್ನ ಮನ ಕೇಳಿರೆ, ಕೆಳದಿಯರಿರಾ?

ಎನ್ನಂಗದಲ್ಲಿ ಆಚಾರವ ತೋರಿದನಯ್ಯ ಬಸವಣ್ಣನು. ಆಚಾರವೇ ಲಿಂಗವೆಂದರುಹಿದನಯ್ಯ ಬಸವಣ್ಣನು. ಎನ್ನ ಪ್ರಾಣದಲ್ಲಿ ಅರಿವ ತೋರಿದನಯ್ಯ ಬಸವಣ್ಣನು. ಅರಿವೇ ಜಂಗಮವೆಂದು ಅರುಹಿದನಯ್ಯ ಬಸವಣ್ಣನು. ಚೆನ್ನಮಲ್ಲಿಕಾರ್ಜುನಯ್ಯ, ಎನ್ನ ಹೆತ್ತ ತಂದೆ ಸಂಗನ ಬಸವಣ್ಣ ಎನಗೀ ಕ್ರಮವನರುಹಿದನಯ್ಯ.

ಕಾಮನ ಗೆಲಿದೆನು ಬಸವಾ ನಿಮ್ಮ ದಯದಿಂದ. ಸೋಮಧರನ ಹಿಡಿ ತಪ್ಪೆನು ಬಸವಾ ನಿಮ್ಮ ಕೃಪೆಯಿಂದ. ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು, ಭಾವಿಸಲು ಗಂಡುರೂಪು, ಬಸವಾ ನಿಮ್ಮ ದಯದಿಂದ. ಅತಿಕಾಮಿ ಚೆನ್ನಮಲ್ಲಿಕಾರ್ಜುನಯ್ಯಂಗೆ ತೊಡರನಿಕ್ಕಿ ಎರಡುವಳಿಯದೆ ಕೂಡಿದೆನು. ಬಸವಾ ನಿಮ್ಮ ಕೃಪೆಯಿಂದ.

ಕಿಡಿ ಕಿಡಿ ಕೆದರಿದಡೆ, ಎನಗೆ ಹಸಿವು ತೃಷೆ ಅಡಗಿತೆಂಬೆನು. ಮುಗಿಲು ಹರಿದುಬಿದ್ದರೆ, ಎನಗೆ ಮಜ್ಜನಕ್ಕೆರೆದರೆಂಬೆನು. ಗಿರಿ ಮೇಲೆ ಬಿದ್ದರೆ ಎನಗೆ ಪುಷ್ಪವೆಂಬೆನು ಚೆನ್ನಮಲ್ಲಿಕಾರ್ಜುನಯ್ಯಾ, ಶಿರ ಹರಿದು ಬಿದ್ದರೆ ಪ್ರಾಣ ನಿಮಗರ್ಪಿತವೆಂಬೆನು.

ಚಂದನವ ಕಡಿದು ಕೊರೆದು ತೇದೊಡೆ, ನೊಂದೆನೆಂದು ಕಂಪ ಬಿಟ್ಟಿತ್ತೆ? ತಂದು ಸುವರ್ಣವ ಕಡಿದೊರೆದೊಡೆ, ಬೆಂದು ಕಳಂಕ ಹಿಡಿದಿತ್ತೆ? ಸಂದು ಸಂದು ಕಡಿದ ಕಬ್ಬನು ಗಾಣದಲಿಕ್ಕಿ ಬೆಂದು ಪಾಕಾಗುಳ್ಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೆ? ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿಯೆ? ಎನ್ನ ತಂದೆ ಚೆನ್ನಮಲ್ಲಿಕಾರ್ಜುನದೇವಯ್ಯ ಕೊಂದೊಡೆ ಶರಣೆಂಬುದ ಮಾಣೆ.

ತನು ನಿಮ್ಮ ರೂಪಾದ ಬಳಿಕ ನಾನಾರಿಗೆ ಮಾಡುವೆ? ಮನ ನಿಮ್ಮ ರೂಪಾದ ಬಳಿಕ ನಾನಾರ ನೆನೆವೆ? ಪ್ರಾಣ ನಿಮ್ಮ ರೂಪಾದ ಬಳಿಕ, ನಾನಾರ ನಾರಾಧಿಸುವೆ? ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ, ನಾನಾರನರಿವೆ? ಚೆನ್ನಮಲ್ಲಿಕಾರ್ಜುನಾ, ನಿಮ್ಮಲ್ಲಿ ನೀವಾಗಿ ನಿಮ್ಮಿಂದ ಮರೆದೆನಯ್ಯಾ.

ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲರೆ ಹಾವಿನ ಸಂಗವೇ ಲೇಸು ಕಂಡಯ್ಯ, ಕಾಯದ ಸಂಗವೇ ಲೇಸು ಕಂಡಯ್ಯ. ತಾಯಿ ರಕ್ಕಸಿಯಾದಂತೆ

ಕಾಯ ವಿಕಾರ. ಚೆನ್ನಮಲ್ಲಿಕಾರ್ಜುನಯ್ಯ ನೀನೊಲಿದವರು ಕಾಯಗೊಂಡಿದ್ದರೆನಬೇಡ.

ಬಂಜೆ ಬೇನೆಯನರಿಯಳು. ಬಲತಾಯಿ ಮುದ್ದ ಬಲ್ಲಳೆ? ನೊಂದ ನೋವ ನೋಯದವರೆತ್ತ ಬಲ್ಲರು? ಚೆನ್ನಮಲ್ಲಿಕಾರ್ಜುನ, ನೀನಿರಿದಲಗು ಒಡಲಲ್ಲಿ ಮುರಿದು ಹೊರಳುವಳ ನೀವೆತ್ತ ಬಲ್ಲಿರೆ ಎಲೆ ತಾಯಿಗಳಿರಾ?

ಅಳಿ ಸಂಕುಳವೇ, ಮಾಮರವೇ, ಬೆಳುದಿಂಗಳೇ, ಕೋಗಿಲೆಯೇ, ನಿಮ್ಮ ನಿಮ್ಮನೆಲ್ಲರನು ಒಂದ ಬೇಡುವೆನು. ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ.

ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ? ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ? ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ? ಕೊಳನ ತಡಿಯೊಳಾಡುವ ಹಂಸೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ? ಗಿರಿಗಹ್ವರ ದೊಳಗಾಡುವ ನವಿಲುಗಳಿರಾ, ನೀವು ಕಾಣಿರೆ, ನೀವು ಕಾಣಿರೆ? ಚೆನ್ನಮಲ್ಲಿಕಾರ್ಜುನನೆಲ್ಲಿರ್ದಿಹನೆಂದು ನೀವು ಹೇಳಿರೆ, ನೀವು ಹೇಳಿರೆ.

ಆಕಾರವಲ್ಲದ ನಿರಾಕಾರದ ಲಿಂಗವ ಕೈಯಲ್ಲಿ ಹಿಡಿದು, ಕೊರಳಲ್ಲಿ ಕಟ್ಟಿದೆವೆಂದೆಂಬರು ನರಕಿ ಜೀವಿಗಳು. ಹರಿ ಬ್ರಹ್ಮರು ವೇದಶಾಸ್ತ್ರಂಗಳರಸಿ ಕಾಣದ ಲಿಂಗ, ಭಕ್ತಿಗೆ ಫಲಪದಂಗಳಲ್ಲದೆ ಲಿಂಗವಿಲ್ಲ. ಕರ್ಮಕ್ಕೆ ನರಕವಲ್ಲದೆ, ಲಿಂಗವಿಲ್ಲ. ವೈರಾಗ್ಯಕ್ಕೆ ಮುಕ್ತಿಯಲ್ಲದೆ, ಲಿಂಗವಿಲ್ಲ. ಜ್ಞಾನಕ್ಕೆ ಪರಿಭ್ರಮಣವಲ್ಲದೆ, ಲಿಂಗವಿಲ್ಲ. ಇದುಕಾರಣ ಅದ್ವೈತದಿಂದ ತನ್ನ ತಾನರಿದು ತಾನಾದರೆ ಚೆನ್ನಮಲ್ಲಿಕಾರ್ಜುನ ಲಿಂಗ ತಾನೆ ಬೇರಿಲ್ಲ.

ಹೊಳೆವ ಕೆಂಜೆಡೆಗಳ, ಮಣಿಮಕುಟ ಒಪ್ಪುವ, ಸುಲಿಪಲ್ಲ, ನಗೆಮೊಗದ ಕಂಗಳ, ಕಾಂತಿಯಿಂ ಈರೇಳು ಭುವನಮಂ ಬೆಳಗುವ ದಿವ್ಯ ಸ್ವರೂಪನ ಕಂಡೆ ನಾನು. ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು. ಗಂಡ ಗಂಡರೆಲ್ಲ ಹೆಂಡ ಹೆಂಡಿರಾಗಿ ಆಳುವ ಗರುವನ ಕಂಡೆ ನಾನು. ಜಗದಾದಿಶಕ್ತಿಯೊಳು ಬೆರಸಿಯೊಡನಾಡುವ ಪರಮಗುರು ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.

೧೦. ಹರಿಹರ : ಭಕ್ತಿಯ ಆವೇಶ

ಕರೆವುದದೆಂದು ಕಾಲ್ವಿಡಿಸಿಕೊಳ್ವುದದೆಂದು ದಯಾಕಟಾಕ್ಷದಿಂ
ಪೊರೆವುದದೆಂದು ಮೆಲ್ನುಡಿಗಳಿಂ ಮದವೇಱಿಪುದೆಂದು ಸೋಂಕಿನಿಂ
ಹರಿಪುದದೆಂದು ಸಂತಸದೆ ಪೆರ್ಚಿಪುದೆಂದು ಮನಸ್ಸಿ ನೀಂ ಕರಂ
ಕರಗಿಪುದೆನ್ನ ನೆಂದೊಸೆದು ಪೇಳೆನಗಿಂದೆಲೆ ಹಂಪೆಯಾಳ್ದನೇ

ನೋಡದ ಕಣ್ಗಳೇಕೆ ಸಲೆ ಕೇಳದ ಕರ್ಣಮದೇಕೆ ಭಕ್ತಿಯಿಂ
ಪಾಡದ ಬಾಯದೇಕೆ ಪೆಸರ್ಗೊಳ್ಳದ ಜಿಹ್ವೆಯದೇಕೆ ಪೂಜೆಯಂ
ಮಾಡದ ಕೈಗಳೇಕೆ ನೆಱೆ ಸೋಂಕದ ದೇಹಮದೇಕೆ ಕೂಡಿಯ
ಳ್ಕಾಡದ ಚಿತ್ತವೇಕೆನಗೆ ಹಂಪೆಯ ಲಿಂಗವೆ ನಿಮ್ಮೊಳಳ್ಕುಱಿಂ

ಸತಿಪುತ್ರರ್ ಮಿತ್ರರಾಪ್ತರ್ ತನುಧನಮನವೆಂಬಿಂತಿವಂ ನಿತ್ಯಮೆಂದು
ಚ್ಚತರ ವ್ಯಾಸಂಗದಿಂ ಮೆಯ್ಯುಱಿಯದೆ ಮರುಳಾಗಿರ್ದೆನ್ನಂ ದುರಾಶಾ
ವೃತನಂ ದುರ್ಮೋಹಿಯಂ ದುಸ್ತರವಿಷಯವ್ಯಾಪ್ತನಂ ದುರ್ಧರೈನೋ
ಹತನಂ ದುರ್ಬೋಧನಂ ರಕ್ಷಿಪುದೆಲೆ ಕೃಪೆಯಿಂದಂ ವಿರೂಪಾಕ್ಷಲಿಂಗಾ

ನಾನಾಜನ್ಮಂಗಳೊಳ್ ಬಾರದ ಪರಿಭವಮಂ ಬಂದ ತನ್ನಂದಮಂ ತಾ
ನೇನೆಂದೊಂದೆಳ್ಕನಿತ್ತಂ ನೆನೆಯದು ತನಗೆಂತಿಚ್ಛೆಯಂತಿರ್ದು ನಿನ್ನೀ
ಧ್ಯಾನಾರಂಭಕ್ಕಣಂ ಸಲ್ಲದು ಸುಡು ಸುಡು ಛಿಃ! ಮನ್ಮನೋವೃತ್ತಿ ನಿನ್ನಂ
ತಾನಾಱಿಂ ನೀನೆ ಸಂತಂ ನಿಲಿಸಿದನೊಲವಿಂದಂ ವಿರೂಪಾಕ್ಷಲಿಂಗಾ

ಮೋಹಕ್ಕೋರೊರ್ಮೆ ಮಾಧುರ್ಯದ ನುಡಿನೆಲೆಗೋರೊರ್ಮೆ ಸಂದಿರ್ದ ಕಾಮೋ
ತ್ಸಾಹಕ್ಕೋರೊರ್ಮೆ ಮೆಯ್ವೆರ್ಚ್ಚೊದವಿದ ಮದಕೋರೊರ್ಮೆ ಪೆರ್ಚಿರ್ದ ಲೋಭ
ವ್ಯೂಹಕ್ಕೋರೊರ್ಮೆ ಕೋಪೋನ್ನತಿಯನುಮತಿಗೋರೊರ್ಮೆ ಮೆಯ್ವೆರ್ಚಿ
ಮದ್ದೀ
ಹೋಹಂ ಎಂದೆಂಬುದಂ ಮಾಣ್ಸು ಮನಕಮಿದೊಂದಂ ವಿರೂಪಾಕ್ಷಲಿಂಗಾ

ನವನಿಧಿ ಬಾರ ಪುಣ್ಯನಿಧಿ ಬಾರ ಮಹಾನಿಧಿ ಬಾರ ಭಕ್ತರು
ತ್ಸವನಿಧಿ ಬಾರ ಭಾಗ್ಯನಿಧಿ ಬಾರ ಕೃಪಾನಿಧಿ ಬಾರ ಕಾಂತಿಯು
ದ್ಭವನಿಧಿ ಬಾರ ನಿತ್ಯನಿಧಿ ಬಾರ ಕೃಪಾನಿಧಿ ಬಾರ ಸತ್ಯಸಂ
ಭವನಿಧಿ ಬಾರ ತತ್ತ್ವನಿಧಿ ಬಾರೆಲೆ ಬಾರೆಲೆ ಹಂಪೆಯಾಳ್ದನೇ

ಹರಹರ ಕರ್ಮದೊಳ್ ಬಳಲದಿಂತು ಬರ್ದುಂಕಿದೆನ್ನೈ ಸದಾಶಿವಾ!
ನರಪರ ಸೇವೆಯೊಳ್ ಕುದಿಯದಿಂತು ಬರ್ದುಂಕಿದೆನ್ನೈ ಮುಖಾರಿ ಅ
ಸ್ಥಿರ ಪರದೈವದೊಳ್ ತೊಡರದಿಂತು ಬರ್ದುಂಕಿದೆನ್ನೈ ಮಹೇಶ! ಮು
ದ್ದುರುವೆ ಪುರಾರಿ! ಪೂಜ್ಯನೆ ನಿಜಾಂಘ್ರಿಗೆ ಸಾರ್ದೆಲೆ ಹಂಪೆಯಾಳ್ದನೇ

ಹರನಂ ಶಂಕರನಂ ಶಶಾಂಕಧರನಂ ಕಾಪಾಲಿಯಂ ಕಾಲಸಂ
ಹರನಂ ಶೂಲಿಯನೀಶನಂ ಗಿರಿಶನಂ ಭಾಳಾಕ್ಷನಂ ನೀಲಕಂ
ಧರನಂ ಭರ್ಗನನುಗ್ರನಂ ಪರಮನಂ ಸರ್ವಜ್ಞನಂ ಶಂಭುವಂ
ಗಿರಿಜಾವಲ್ಲಭನಂ ಮನೋಜಹರನಂ ಕಂಡೆಂ ವಿರೂಪಾಕ್ಷನಂ

ಎನ್ನಾನಂದಸುಧಾಬ್ಧಿವರ್ಧನಕಳಾಸಂಪನ್ನನಂ ಚಿನ್ನನಂ
ಮುನ್ನಾರುಂ ನೆಱೆ ಕಾಣಬಾರದ ಲಸತ್‌ಕಾಪಾಲಿಯಂ ಶೂಲಿಯಂ
ಭಿನ್ನಾಭಿನ್ನ ಮೆನಲ್ಕೆ ಬಾರದ ಮಹಾನಿಸ್ಸೀಮನಂ ಭೀಮನಂ
ಚೆನ್ನಂಗಂದುಱೆ ತನ್ನನಿತ್ತ ವಿಭುವಂ ಕಂಡೆಂ ವಿರೂಪಾಕ್ಷನಂ

ಆನಂದಾಮೃತವಾರ್ಧಿಯಂ ಕೃಪೆಯೊಳೆನ್ನಂ ತೊಳ್ತುಗೊಂಡಾಳ್ದನಂ
ನಾನಾದೇವ ಕಿರೀಟಕೋಟಿ ವಿಲಸತ್ಪಾದಾಬ್ಜನಂ ಭೃತ್ಯಸಂ
ತಾನಾಂಭೋಧಿ ಸುಧಾಂಶುವಂ ದುರಿತ ಘೋರಧ್ವಾಂತ ಮಾರ್ತಂಡನಂ
ಭಾನುಜ್ಯೋತಿಗತರ್ಕ್ಯಕಾಂತಿಯುತನಂ ಕಂಡೆಂ ವಿರೂಪಾಕ್ಷನಂ

ಪೆಱತೊಂದಂ ನುಡಿಯಂ ಪ್ರಸಂಚರಹಿತಂ ಕಾರ್ಪಣ್ಯಮುಂ ಮಾಡನೊ
ಲ್ಪಿಱಗಂ ಕಾಮದ ಬಟ್ಟೆಯತ್ತಲೆಳಸಂ ತರ್ಕಕ್ಕೆ ಮಾತ್ಸರ್ಯವೆಂ
ದಱಿಯಂ ಲೋಕದ ಮಾನವರ್ಗೆ ಮಣಿಯಂ ಸದ್ಭಕ್ತ ಸತ್ಸಂಗಮಂ
ತೊಱೆಯಂ ಸತ್ಯಮನಲ್ಲದಾಡನಚಲಂ ಭಕ್ತಂ ವಿರೂಪಾಕ್ಷನಾ

ನಿರಪೇಕ್ಷಂ ಕರುಣಾಕರಂ ಸುಖಮಯಂ ಶಾಂತಂ ಮಹೋತ್ಸಾಹಿ ಭ
ಕ್ತಿರತಂ ಮಂಗಳಮೂರ್ತಿ ಲಿಂಗಸುಲಭಂ ಸಂತೋಷಿ ಸತ್ಯಂ ವಿಮ
ತ್ಸರನುರ್ವೀಜನವಂದ್ಯನುನ್ನತನನೇಕಾಶ್ಚರ್ಯಯುಕ್ತಂ ಮಹೇ
ಶ್ವರನಾತಂಗರಿದುಂಟೆ ಹಂಪೆಯ ವಿರೂಪಾಕ್ಷ ಪ್ರಸಾದಾನ್ವಿತಂ

ಮನೆ ನೆಳಲಾಗೆ ಪೆಂಡಿರಿನಿದಾಗೆ ಸುತರ್ ಪಿರಿದಾಗೆ ಅರ್ಥದಾ
ರ್ಜನೆ ಘನವಾಗೆ ಯೌವನಮದಾಗೆ ಬಳಿಕ್ಕದನೇನನೆಂದಪೆಂ
ತನತನಗುಬ್ಬುತಂಕುರಿಸುತುಂ ನೆಱೆ ಪಲ್ಲವಿಸುತ್ತೆ ಪರ್ವುತುಂ
ನನೆಕೊನೆವೋಗಿ ಮಾಯೆ ಕೊಱಚಾಡದೆ ಮಾಣ್ಬಳೆ ಹಂಪೆಯಾಳ್ದನೇ

ನರರಂ ಸೇವಿಪ ಜೀಯ ಜೀಯೆನುತುಮಿರ್ಪೇನೆಂದೊಡಂ ದೈನ್ಯಮು
ಬ್ಬರಿಸುತ್ತುಂ ತನುಗುಂದಿಯುಂ ತನಗೆ ತಾನೆಂತಕ್ಕೆಯುಂ ಬೇಡುತಿ
ರ್ಪಿರವಂ ಸುಟ್ಟು ಬಿಸುಟ್ಟು ಭಕ್ತಿಯೊಳಗೋಲಾಡಲ್ ಮನಂದಂದು ಶಂ
ಕರನಂ ಶಾಶ್ವತನಂ ಕೃಪಾಜಲಧಿಯಂ ಕಂಡೆಂ ವಿರೂಪಾಕ್ಷನಂ

ಪೋಗೆನೆ ಪೋಪ ಬಾರೆಲವೊ ಬಾರೆನೆ ಜೀಯ ಹಸಾದವೆಂದು ಬೆ
ಳ್ಳಾಗುತೆ ಬರ್ಪ ಮಾಣಿಲವೊ ಸುಮ್ಮನಿರೆಂದೊಡೆ ಸುಮ್ಮನಿರ್ಪ ಮ
ತ್ತಾಗಳೆ ಬಗ್ಗಿಸಲ್ ನಡುಗಿ ಬೀಳುವ ಸೇವಿಪ ಕಷ್ಟವೃತ್ತಿಯಂ
ನೀಗಿದೆನಿಂದು ನಿಮ್ಮ ದಯೆಯಿಂ ಕರುಣಾಕರ ಹಂಪೆಯಾಳ್ದನೇ

ಸಡಿ ಫಡ ಮಾನವರ್ ಕುಡುವರೆಂಬುದನಾಡದಿರೆನ್ನ ಮುಂದೆ ಕ
ಪ್ಪಡದ ಶರೀರಗಳ್ ತೃಣದ ಹಾಹೆಗಳಕ್ಕುಟ! ಮಣ್ಣಬೊಂಬೆಗಳ್
ಕುಡುವುವೆ ಬೇಡು ಬೇಡಿದುದನೀವ ಮಹಾನಿಧಿಯಂ ಮಹೇಶನಂ
ಮೃಡನನನೂನದಾನಿಯನಲಂಪಿನ ಪೆಂಪಿನ ಹಂಪೆಯಾಳ್ದನಂ

೧೧. ಚಾಮರಸ: ಅಲ್ಲಮಪ್ರಭುವಿನ ಕರುಣೆ

ದೀನ ಮನದವನಂತೆ ಕಂಡ ನಿ
ಧಾನವನು ತಾನೊಬ್ಬನುಂಬನೆ
ದಾನಿ ಲೇಸೈ ನಿನ್ನ ಪರಿ ನೀ ಕಂಡ ಶಿವಪಥವ
ಮಾನವರಿಗಱುಹೆಂಬ ಮಹದಭಿ
ಮಾನಿ ನೀನೇ ಜಗದ ಗುರುವೆಂ
ದಾ ನಿರುಪಮನನಲ್ಲಮನ ಹೊಗಳಿದನು ಗೊಗ್ಗಯ್ಯ

ಕೇಳಿದೌ ಶಿಶುಗಳಿಗೆ ಮಿಗೆ ಮೊಲೆ
ವಾಲೆ ಜೀವನವಾದಡೆಯು ಎಱಿ
ವಾಲನೆಱಿವುತ ಮೆಲ್ಲಮೆಲ್ಲನೆ ಅಶನವುಣ ಕಲಿಸಿ
ಬಾಲಕರ ಪಟುಮಾಡಬಲ್ಲ ಸ
ಕೀಲಕದವೊಲು ಹೊಱಿಗ ಮಱಿದು ನಿ
ರಾಳದಲಿ ನಿಲಲಱಿವುದೌ ಮುಕ್ತಾಯಿ ಕೇಳಿಂದ

*　　*　　*

ಚಿಂತಿತಾರ್ಥವನಖಿಳ ಭಕ್ತರ
ತಿಂತಿಣಿಗೆ ಕೊಡುತಲ್ಲಮಪ್ರಭು
ಸಂತಸದಲಿರುತಿರ್ದನೆಲ್ಲರ ಹೃದಯಕಮಲದಲಿ

ಬಾಲರನು ವೃದ್ಧರನು ಭೂಮಿ
ಪಾಲರನು ಬಡವರನು ಸದಮಲ
ಶೀಲರನು ಗುಣಿಗಳನು ಗೋಬ್ರಾಹ್ಮಣರನು ಭಕ್ತರನು
ಲೋಲತೆಯಲಿ ಸಮಸ್ತ ಜಾತಿಯ
ಜಾಲವನು ಸರ್ವರನು ಕರುಣಿಸಿ
ಪಾಲಿಸುತಲಿರುತಿರ್ದನೆಮ್ಮಯ ಗುರುಗುಹೇಶ್ವರನು

೧೨. ಷಡಕ್ಷರಿ: ಶಿವಪೂಜೆ

ಅನಂತರಮಾ ಭೂಮಿಪಲಲಾಮಂ ಮರಂದದೊಳ್ ಮುಳುಂಗುವ ಮಧುಕರನಂತೆ ಪರಿಮಳೋದಕದಿಂ ಜಳಕಂಬೊಕ್ಕು, ಶಾರದಾಭ್ರಂ ತಳ್ಕ ಶಶಾಂಕನೆನಿಸಿ ಬೆಳ್ವಟ್ಟಿಯಂ ಪೊದೆದುಟ್ಟು, ಶಶಿಕಳೆಯುಂ ತುಳಿವ ಕೆಂದಾವರೆಯೆನಿಸಿ ಪದತಳದಿಂ ಪಳಕುವಾವುಗೆಯಂ ಮೆಟ್ಟಿ, ಪಾಲ್ಗಡಲ ಪೆರ್ದೆರೆಯೊಳ್ ಪುಗುವ ಮರಾಳನಂತೆ ಶಶಿಕಾಂತ ರಚಿತಮಾದ ಪೂಜಾಗಾರಮಂ ಪೊಕ್ಕರ್ಚನೋಚಿತಾಸನದೊಳುತ್ತರಾಭಿಮುಖಂ ಪ್ರಸನ್ನಮುಖಂ ಪದ್ಮಾಸನಮನವಷ್ಟಂಭಿಸಿ ಋಜುಭಾವದಿಂ ಕುಳ್ಳಿರ್ದು

ಘನ ಸದ್ಯೋಜಾತ ಮುಖ್ಯ ಪ್ರಭವ ಮಹಿಮುಖೋತ್ಪನ್ನ ಸಂಪನ್ನಿ ವೃತ್ಯಾ
ದಿ ನಿಯುಕ್ತೋತ್ಪತ್ತಿ ಭಾಸ್ವದ್ಗಣಯುತ ಕಪಿಲಾದ್ಯ ಪ್ರಭೂತಾವನೀ ಪಾ
ವನರೂಪ ಶ್ರೀ ವಿಭೂತಿ ಪ್ರಭೃತಿಯನುರೆ ಪತ್ಪೂರ್ವಕಂ ಲೇಪನಂ ಗೆ
ಯ್ದು ನಿತಾಂತಂ ತತ್ತ್ರಿಪುಂಡ್ರಂ ತೊಳಗೆ ತಳೆದು ವಿಧ್ಯುಕ್ತಮಂತ್ರಂಗಳಿಂದಂ
ಶಿವನೇತ್ರಾಂಭೋಜಮಂ ಪೂಜಿಸಿ ಸದಮಳ ರುದ್ರಾಕ್ಷಮಂ ಭಕ್ತಿಯಿಂದು
ಕ್ತ ವಿಧಾನಂದಪ್ಪದಾ ತಾಣದೊಳೆ ಗಣನೆಯಂ ಮಾರದೋರಂತೆ ತಾಳ್ದೊ
ಪ್ಪುವ ಹೃತ್ಪಂಕೇಜದೊಳ್ ಜಾನಿಸಿದನಿನಘನದ್ಯೋತಿಯಂ ಸಾಂಬನಂ ಶಂ
ಭುವನಿಂವ್ಪರ್ಧಾಂಕ ಕೋಟೀರನನನಘನನಾನಂದದಿಂ ತನ್ನೃಪಾಲಂ

ಅಂತು ಜಾನಿಸಿ ಜಲಕ್ಯನೆ ತೊಳಪ ಮೂರ್ತಿಯನೊಳಗೆ ಕಂಡು ಕರಣಂಗಳ್ ಕಳೆಯೇರೆ ಮಾನವೇಶ್ವರಂ ಮಾನಸಪೂಜೆಯಂ ರಚಿಸಿ, ಬಾಹ್ಯ ಪೂಜೆಗೆ ಮನಂದಂದು ನಿಜೇಷ್ಟಲಿಂಗಮಂ ಕರಾಬ್ಜಪೀಠದೊಳ್ ನೆಲೆಗೊಳಿಸಿ ನಿರ್ನಿಮೇಷಾಕ್ಷಿಯಿಂ ನಿರೀಕ್ಷಿಸಿ

ಹೃದಯದೊಳೆ ಜಾನಿಸಿದ ಪರಿ
ಜದು ನಿಜಲಿಂಗದೊಳಭಿನ್ನಮೆನಿಸಿರೆ ಕಂಡೇಂ
ಮುದವಾಂತನೊ ನರಪತಿ ಬಗೆ
ಗೊದವಿದುದದು ತೋರೆ ಪೊರಗೆ ಸುಖಿಸದರೊಳರೇ

ಇದು ಮುನಿಗಳ ಮನದೊಳಬೆಳ
ಗಿದು ವಿಧಿ ವಿಷ್ಣುಗಳ ವಾದಮಂ ಮಾಣಿಸಿದ
ಗ್ಗದ ಪರಬೊಮ್ಮಂ ತಾನಿಂ
ತಿದು ಮೋಕ್ಷಾಮಳಫಳಪ್ರದಂ ಸುರಭೂಜಂ

ಎಂದು ಕಣ್ದೆರೆವಿ ನೋಡಿ, ಮನಂದೀವಿ ನೆನೆದು, ಭಾವಂದೀವಿ ಭಾವಿಸಿ, ಮತ್ತೆ ಮತ್ತೆ ಮಾಣದೆ

ಸುರಿವ ಮುದಶ್ರುವೆ ಚಳೆಯಂ
ಶರೀರದೊಳ್ ಮೊಳೆವ ಪುಳಕಮೇ ಗುಡಿ ಲಾಸ್ಯಂ
ಕರಕಂಪಂ ಗದ್ಗದರುತಿ
ವರವಾದ್ಯಮದಾಗೆ ಶಿವನನವನಿದಿರ್ಗೊಂಡಂ

ಅಂತಿದಿರ್ಗೊಂಡು

ಶ್ರುತಿಸತಿಯ ಶಿರೋಮಣಿ ಯತಿ
ಪತಿಗಳ ಹೃದಯಾಬ್ಜ ದಿವ್ಯ ದಿನಮಣಿ ನತಸಂ
ತತಿ ಚಿಂತಾಮಣಿ ಭುವನ
ಸ್ತುತಲಿಂಗಂ ತಾನಿದೆಂದು ಪೊಗಳ್ದಂ ಭೂಪಂ

ನಿರ್ವ್ಯಾಜ ಭಕ್ತಿಯಿನಿಂತು ಪೊಗಳ್ದನಂತರಂ ಪುರುಷಪುಂಗವಂ ಪುಂಗವ ಧ್ವಜಂಗಾತ್ಮಾರ್ಪಣಂ ಗೆಯ್ದಿನಿಸಾನುಂ ಪೊಳ್ತನಿಮಿಷಾಕ್ಷಿಯಿಂ ನಿರೀಕ್ಷಿಸಿ

ಪಳಿಕುಗೊಡದೊಳಗೆ ಪೊರಗು
ಜ್ವಳಿಪಂತರ್ಜ್ಯೋತಿಯಂತಿರೊಳಗಂ ಪೊರಗಂ
ಬೆಳಪ ಮನೋಮಧ್ಯ ಸಮು
ಜ್ವಳಲಿಂಗಮನರಸನಳ್ಕರಿಂ ಜಾನಿಸಿದಂ

ಅಣಿಯರಮಭವನ ಸುಗುಣಮ
ನೆಣಿಪಂತಿರೆ ನಚ್ಚಿ ಮುಚ್ಚಿ ತನ್ಮಹಿಮೆಗಳಂ
ಗುಣಿಪಂತಿರೆ ಜನಪಾಲಾ
ಗ್ರಣಿ ಪಂಚಾಕ್ಷರಮನಮಮ ಜಪಿಸಿದನಾಗಳ್

೧೩. ದಾಸರ ಪದಗಳು

ಪುರಂದರದಾಸರು ಸು. ೧೫೪೦

(i)

ಈ ಪರಿಯ ಸೊಬಗಾವ ದೇವರಲಿ ಕಾಣೆ
ಗೋಪೀಜನಪ್ರಿಯ ಗೋಪಾಲಗಲ್ಲದೆ ॥ ಪ ॥

ದೊರೆಯತನದಲಿ ನೋಡೆ ಧರಣಿದೇವಿಗೆ ರಮಣ
ಸಿರಿಯತನದಲಿ ನೋಡೆ ಶ್ರೀಕಾಂತನು
ಹಿರಿಯತನದಲಿ ನೋಡೆ ಸರಸಿಜೋದ್ಭವನಯ್ಯ
ಗುರುವತನದಲಿ ನೋಡೆ ಜಗದಾದಿ ಗುರುವು

ಪಾವನತ್ವದಿ ನೋಡೆ ಅಮರಗಂಗಾಜನಕ
ದೇವತ್ವದಲಿ ನೋಡೆ ದಿವಿಜರೊಡೆಯ
ಲಾವಣ್ಯದಲಿ ನೋಡೆ ಲೋಕಮೋಹಕನಯ್ಯ
ಆವ ಧೈರ್ಯದಿ ನೋಡೆ ಅಸುರಾಂತಕ

ಗಗನದಲಿ ಸಂಚರಿಪ ಗರುಡದೇವನೆ ತುರಗ
ಜಗತೀಧರ ಶೇಷ ಪರಿಯಂಕಶಯನ
ನಿಗಮಗೋಚರ ಪುರಂದರವಿಠಲಗಲ್ಲದೆ
ಮಿಗಿಲಾದ ದೈವಗಳಿಗೀ ಭಾಗ್ಯವುಂಟೆ

(ii)

ಬಿನ್ನಹಕೆ ಬಾಯಿಲ್ಲವಯ್ಯಾ
ಅನಂತ ಅಪರಾಧ ಎನ್ನಲ್ಲಿ ಇರಲಾಗಿ ॥ ಪ ॥

ಶಿಶುಮೋಹ ಸತಿಮೋಹ ಜನನಿಜನಕರ ಮೋಹ
ರಸಿಕ ಮಿತ್ರರ ಮೋಹ ರಾಜಮೋಹ
ಪಶುಮೋಹ ಭೂಮೋಹ ಬಂಧುವರ್ಗದ ಮೋಹ
ಅಸುರಾರಿ ನಿನ್ನ ಮರೆತೆನೊ ಕಾಯೊ ಹರಿಯೆ

ಅನ್ನಮದ ಅರ್ಥಮದ ಅಖಿಲವೈಭವದ ಮದ
ಮುನ್ನ ಪ್ರಾಯದ ಮದವು ರೂಪಮದವು
ತನ್ನ ಸತ್ವದ ಮದ ಧಾತ್ರಿವಶವಾದ ಮದ
ಇನ್ನು ತನಗೆದುರಿಲ್ಲವೆಂದೆಂಬ ಮದದಿಂದ

ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ
ಅಷ್ಟು ದೊರಕಿದರು ಮತ್ತಷ್ಟರಾಸೆ
ಕಷ್ಟ ಬೇಡೆಂಬಾಸೆ ಕಡುಸುಖವ ಕಾಂಬಾಸೆ
ನಷ್ಟ ಜೀವನದಾಸೆ ಪುರಂದರವಿಠಲ

(iii)

ಉದರವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಭಕುತಿಯಿಲ್ಲ ॥ ಪ ॥

ಉದಯಕಾಲದಲೆದ್ದು ಗಡಗಡ ನಡುಗುತ
ನದಿಯೊಳು ಮಿಂದೆವೆಂದು ಹೇಳುತಲಿ
ಮದ ಮತ್ಸರ ಮೋಹ ಒಳಗೆ ತುಂಬಿಟ್ಟುಕೊಂಡು
ಬದಿಯಲಿದ್ದವರಿಗಾಶ್ಚರ್ಯ ತೋರುವುದು

ಕಂಚುಗಾರರಾ ಅಂಗಡಿಯಂದದಿ
ಕಂಚು ಹಿತ್ತಾಳೆಯ ಪ್ರತಿಮೆಯ ನೆರಹಿ
ಮಿಂಚಲಿನುತೆ ಬಹು ಜೋತಿಗಳನೆ ಹಚ್ಚಿ
ವಂಚನೆಯಲಿ ಘನಪೂಜೆ ಮಾಡುವುದು

ಕರದೊಳು ಜಪಮಣಿ ಬಾಯೊಳು ಮಂತ್ರವು
ಅರಿವೆಯ ಮುಸುಕನು ಮೋರೆಗೆ ಹಾಕಿ
ಪರಸತಿ ಪರಧನಕಾಗಿ ಚಿಂತಿಸುತೆ
ಪರಮವೈರಾಗ್ಯದ ಮೂರ್ತಿಯೆನಿಸುವುದು

ಬೂಟಕತನದಲಿ ಬಹಳ ಬಕುತಿಮಾಡಿ
ನೋಟಕೆ ಇವನಿಗೆ ಸರಿಯಿಲ್ಲೆನಿಸಿ
ನಾಟಕ ಸ್ತ್ರೀಯಳಂತೆ ಬಯಲ ಡಂಬವ ತೋರೆ
ಊಟದ ಮಾರ್ಗದ ಜ್ಞಾನವಿದಲ್ಲದೆ

ನಾನು ಎಂಬುದ ಬಿಟ್ಟು ಜ್ಞಾನಿಗಳೊಡಗೂಡಿ
ಏನೆಲ್ಲಕೆ ದೇವಪ್ರೇರಣೆಯೆಂದು
ಧ್ಯಾನಿಸಿ ಮೌನದಿ ಪುರಂದರವಿಠಲನ
ಕಾಣದೆ ಮಾಡಿದ ಕಾರ್ಯಗಳೆಲ್ಲವು

(iv)

ಹುಚ್ಚು ಹಿಡಿಯಿತು ಎನಗೆ ಹುಚ್ಚು ಹಿಡಿಯಿತು
ಅಚ್ಯುತನ ನಾಮವೆಂಬ ಮೆಚ್ಚು ಮದ್ದು ತಲೆಗೆ ಏರಿ ॥ ಪ ॥

ವಾಸುದೇವನೆಂಬ ನಾಮ ವದನದಲಿ ಒದರುವೆ ಮಾಯಾ
ಪಾಶವೆಂಬ ಅಂಗಿಯನ್ನು ಹರಿದು ಹರಿದು ಬಿಸುಡುವೆ
ಕ್ಲೇಶವೆಂಬ ಮುಡಿದ ಹೂವ ಕಿತ್ತು ಕಿತ್ತು ಬಿಸುಡುವೆ ಕೆಟ್ಟ
ದೋಷವೆಂಬ ಗೋಡೆಯನ್ನು ಕೆರೆದು ಕೆರೆದು ಹಾಕುವಂಥ

ಕೃಷ್ಣನಂಘ್ರಿಕಮಲಕೆರಗಿ ಸೊರಗಿ ಸೊರಗಿ ಬೀಳುವೆ ಎನ್ನ
ಕಷ್ಟವೆಂಬ ಕುಂಭವನ್ನು ಒಡೆದು ಒಡೆದು ಹಾಕುವೆ
ನಿಷ್ಠುರನ್ನು ಕಂಡರವರ ಹಿಂದೆ ಹಿಂದೆ ತಿರುಗುವೆ ಸಲೆ
ದುಷ್ಟರನ್ನು ಕಂಡ ಕಡೆ ಕಲ್ಲು ಕಲ್ಲು ಬೀಸುವಂಥ

ಮಂದಮತಿಗಳನ್ನು ಕಂಡರೆ ಮೂಕನಾಗುವೆನು ಹರಿಯ
ನಿಂದೆ ಮಾಡುವವರಮೇಲೆ ಮಣ್ಣ ತಂದು ಚೆಲ್ಲುವೆ
ತಂದೆ ಸಿರಿ ಪುರಂದರವಿಠಲನ ಪಾದವನ್ನು
ಹೊಂದಿಸುವ ಜನರ ಸೇರಿ ಹಾಡಿ ಹಾಡಿ ಕುಣಿಯುವಂಥ

(v)

ಮಾನವಜನ್ಮ ದೊಡ್ಡದು ಇದ
ಹಾನಿಮಾಡಲುಬೇಡಿ ಹುಚ್ಚಪ್ಪಗಳಿರ ॥ ಪ ॥

ಕಣ್ಣು ಕೈಕಾಲ್ ಕಿವಿ ನಾಲಗೆ ಇರಲಿಕ್ಕೆ
ಮಣ್ಣುಮುಕ್ಕಿ ಮರುಳಾಗುವರೆ
ಹೆಣ್ಣುಮಣ್ಣಿಗಾಗಿ ಹರಿಯ ನಾಮಾಮೃತ
ಉಣ್ಣದೆ ಉಪವಾಸ ಇರುವರೆ ಖೋಡಿ

ಕಾಲನ ದೂತರು ಕಾಲ್ಪಿಡಿದೆಳೆವಾಗ
ತಾಳು ತಾಳೆಂದರೆ ತಾಳುವರೆ
ದಾಳಿ ಬಾರದ ಮುನ್ನ ಧರ್ಮವ ಗಳಿಸಿರೊ
ಸುಳ್ಳಿನ ಸಂಸಾರ ಸುಳಿಗೆ ಸಿಕ್ಕಲು ಬೇಡಿ

ಏನುಕಾರಣ ಯದುಪತಿಯನು ಮರೆತಿರಿ
ಧನ ಧಾನ್ಯ ಪುತ್ರರು ಕಾಯುವರೆ
ಇನ್ನಾದರು ಏಕೋಭಾವದಿ ಭಜಿಸಿರೊ
ಚೆನ್ನ ಶ್ರೀ ಪುರಂದರವಿಠಲರಾಯನ

(vi)

ಬೇವು ಬೆಲ್ಲದೊಳಿಡಲೇನು ಫಲ
ಹಾವಿಗೆ ಹಾಲೆರೆದೇನು ಫಲ ॥ ಪ ॥

ಕುಟಿಲವ ಬಿಡದಿಹ ಕುಜನರು ಮಂತ್ರವ
ಪಠನೆಯ ಮಾಡಿದರೇನು ಫಲ
ಸಟೆಯನ್ನಾಡುವ ಮನುಜರು ಸಂತತ
ನಟನೆಯ ಮಾಡಿದರೇನು ಫಲ

ಕಪಟತನದಲಿ ಕಾಡುತ ಜನರನು
ಜಪವನು ಮಾಡಿದರೇನು ಫಲ
ಕುಪಿತತನವನು ಬಿಡದೆ ನಿರಂತರ
ಉಪವಾಸಮಾಡಿದರೇನು ಫಲ

ಮಾತಾಪಿತರನು ಬಳಲಿಸಿದಾತನು
ಯಾತ್ರೆಯ ಮಾಡಿದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ

ಪತಿಗಳ ನಿಂದಿಪ ಸತಿಯರು ಬಹು ವಿಧ
ವ್ರತಗಳ ಮಾಡಿದರೇನು ಫಲ
ಅತಿಥಿಗಳಿಡೆಯಲಿ ಭೇದವ ಮಾಡುತ
ಗತಿಯನು ಬಯಸಿದರೇನು ಫಲ

ಹೀನಗುಣಂಗಳ ಹಿಂಗದೆ ಗಂಗೆಯ
ಸ್ನಾನವ ಮಾಡಿದರೇನು ಫಲ
ಶ್ರೀನಿಧಿ ಪುರಂದರವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ

(vii)

ಕಂಡು ಕಂಡು ಎನ್ನ ಕೈಬಿಡುವರೆ
ಪುಂಡರೀಕಾಕ್ಷ ಪುರುಷೋತ್ತಮ ದೇವ ॥ ಪ ॥

ಬಂಧುಗಳು ಎನಗಿಲ್ಲ ಬದುಕಿನಲಿ ಸುಖವಿಲ್ಲ
ನಿಂದೆಯಲಿ ನೊಂದೆನ್ನೆ ನೀರಜಾಕ್ಷ
ತಂದೆತಾಯಿಯು ನೀನೆ ಬಂಧು ಬಳಗವು ನೀನೆ
ಎಂದೆಂದಿಗೂ ನಿನ್ನ ನಂಬಿದೆನೊ ಕೃಷ್ಣ

ಕ್ಷಣವೊಂದು ಯುಗವಾಗಿ ತೃಣಕಿಂತ ಕಡೆಯಾಗಿ
ಎಣಿಸಲಾರದ ಭವದಿ ನೊಂದೆ ನಾನು
ಸನಕಾದಿಮುನಿವಂದ್ಯ ವನಜಸಂಭವನ ಪಿತ
ಫಣಿಶಾಯಿ ಪ್ರಹ್ಲಾದವರದ ಶ್ರೀಕೃಷ್ಣ

ಭಕ್ತವತ್ಸಲನೆಂಬೊ ಬಿರುದು ಪೊತ್ತವೇಲೆ
ಭಕ್ತರಾಧೀನನಾಗಿರಬೇಡವೆ
ಮುಕ್ತಿದಾಯಕ ದೇವ ಪುರಂದರವಿಠಲನೆ
ಶಕ್ತ ನೀನಹುದೆಂದು ನಂಬಿದೆನೊ ಕೃಷ್ಣ

(viii)

ಅನುಭವದಡಿಗೆಯ ಮಾಡಿ ಅದ
ಕ್ಕನುಭವಿಗಳು ಬಂದು ನೀವೆಲ್ಲ ಕೂಡಿ ॥ ಪ ॥

ತನುವೆಂಬ ಭಾಂಡವ ತೊಳೆದು ಕೆಟ್ಟ
ಮನದ ಚಂಚಲವೆಂಬ ಮುಸುರೆಯ ಕಳೆದು
ಘನವಾಗಿ ಮನೆಯನ್ನು ಬಳಿದು ಅಲ್ಲಿ
ಮಿನುಗುವ ತ್ರಿಗುಣದ ಒಲೆಗುಂಡನೆಡೆದು

ವಿರಕ್ತಿಯೆಂಬೋ ಮಡಿಯುಟ್ಟು ಪೂರ್ಣ
ಹರಿಭಕ್ತಿಯೆಂಬ ನೀರನ್ನೆ ಸರಿಟ್ಟು
ಅರಿವೆಂಬ ಬೆಂಕಿಯ ಕೊಟ್ಟು ಮಾಯಾ
ಮರವೆಂಬ ಕಾಷ್ಠವ ಮುದದಿಂದ ಸುಟ್ಟು

ಕರುಣೆಯೆಂಬೊ ಸಾಮಗ್ರಿ ಹೂಡಿ ಮೋಕ್ಷ
ಪರಿಕರವಾದಂಥ ಪಾಕವ ಮಾಡಿ
ಗುರು ಶರಣರು ಸವಿದಾಡಿ ನಮ್ಮ
ಪುರಂದರವಿಠಲನ ಬಿಡದೆ ಕೊಂಡಾಡಿ

(ix)

ಎನಗೂ ಆಣೆ ರಂಗ ನಿನಗೂ ಆಣೆ
ಎನಗೂ ನಿನಗೂ ಇಬ್ಬರಿಗೂ ಭಕ್ತರಾಣೆ ॥ ಪ ॥

ನಿನ್ನ ಬಿಟ್ಟು ಅನ್ಯರ ಭಜಿಸಿದರೆನಗೆ ಆಣೆ ರಂಗ
ಎನ್ನ ನೀ ಕೈಬಿಟ್ಟು ಪೋದರೆ ನಿನಗೆ ಆಣೆ

ತನು ಮನ ಧನದಲ್ಲಿ ವಂಚಕನಾದರೆ ಎನಗೆ ಆಣೆ ರಂಗ
ಮನಸು ನಿನ್ನಲ್ಲಿ ನಿಲಿಸದಿದ್ದರೆ ನಿನಗೆ ಆಣೆ

ಕಾಕುಮನುಜರ ಸಂಗವ ಮಾಡಿದರೆನಗೆ ಆಣೆ ರಂಗ
ಲೌಕಿಕವ ಬಿಡಿಸದಿದ್ದರೆ ನಿನಗೆ ಆಣೆ

ಶಿಷ್ಟರ ಸಂಗವ ಮಾಡದಿದ್ದರೆ ಎನಗೆ ಆಣೆ ರಂಗ
ದುಷ್ಟರ ಸಂಗವ ಬಿಡಿಸದಿದ್ದರೆ ನಿನಗೆ ಆಣೆ

ಹರಿ ನಿನ್ನಾಶ್ರಯ ಮಾಡದಿದ್ದರೆ ಎನಗೆ ಆಣೆ ರಂಗ
ಪುರಂದರವಿಠಲ ನೀನೊಲಿಯದಿದ್ದರೆ ನಿನಗೆ ಆಣೆ

(x)

ಈಸಬೇಕು ಇದ್ದು ಜೈಸಬೇಕು
ಹೇಸಿಕೆ ಸಂಸಾರದಲ್ಲಿ ಆಶಾಲೇಶಮಾಡದಂತೆ ॥ ಪ ॥

ತಾವರೆಯ ಜಲದಂತೆ ಪ್ರೇಮವಿಟ್ಟು ಭವದೊಳು
ಸ್ವಾಮಿ ರಾಮನೆನುತ ಪಾಡಿ ಕಾಮಿತ ಕೈಕೊಂಬರೆಲ್ಲ

ಗೇರುಹಣ್ಣಿನಲ್ಲಿ ಬೀಜ ಸೇರಿದಂತೆ ಸಂಸಾರದಿ
ಮಾರಿ ಆಸೆ ಮಾಡದಂತೆ ಧೀರ ಕೃಷ್ಣನ ನೆನೆವರೆಲ್ಲ

ಮಾಂಸದಾಸೆಗೆ ಮತ್ಸ್ಯ ಸಿಲುಕಿ ಹಿಂಸೆಪಟ್ಟ ಪರಿಯಂ
ತೇಸಹೋಗದಂತೆ ಜಗದೀಶ ಪುರಂದರವಿಠಲನೆನುತ

ಕನಕದಾಸರು ಸು. ೧೫೫೦

(i)

ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ॥ ಪ ॥

ಬೆಟ್ಟದಾ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ
ಕಟ್ಟಿಯನು ಕಟ್ಟಿ ನೀರೆರೆದವರು ಯಾರೊ
ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾದಮೇಲೆ
ಘಟ್ಟಿಯಾಗಿ ಸಲಹುವನು ಇದಕೆ ಸಂಶಯ ಬೇಡ

ಅಡವಿಯೊಳಗಾಡುವಾ ಮೃಗಪಕ್ಷಿಗಳಿಗೆಲ್ಲ
ಅಡಿಗಡಿಗೆ ಆಹಾರವಿತ್ತವರು ಯಾರೊ
ಪಡೆದ ಜನನಿಯ ತೆರದೆ ಸ್ವಾಮಿ ಹೊಣೆಗೀಡಾಗಿ
ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ

ಕಲ್ಲೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ
ಅಲ್ಲಲ್ಲಿಗಾಹಾರವಿತ್ತವರು ಯಾರೊ
ಬಲ್ಲಿದನು ಕಾಗಿನೆಲೆಯಾದಿಕೇಶವರಾಯ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ

(ii)

ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ
ನೀ ದೇಹದೊಳಗೊ ನಿನ್ನೊಳು ದೇಹವೊ ॥ ಪ ॥

ಬಯಲು ಆಲಯದೊಳಗೊ ಆಲಯವು ಬಯಲೊಳಗೊ
ಬಯಲು ಆಲಯವೆರಡು ನಯನದೊಳಗೊ
ನಯನ ಬುದ್ಧಿಯೊಳಗೊ ಬುದ್ಧಿ ನಯನದೊಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೆ

ಸವಿಯು ಸಕ್ಕರೆಯೊಳಗೊ ಸಕ್ಕರೆಯು ಸವಿಯೊಳಗೊ
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೊ
ಜಿಹ್ವೆ ಮನಸಿನೊಳಗೊ ಮನಸು ಜಿಹ್ವೆಯೊಳಗೊ
ಜಿಹ್ವೆ ಮನಸುಗಳೆರಡು ನಿನ್ನೊಳಗೊ ಹರಿಯೆ

ಕುಸುಮದೊಳು ಗಂಧವೋ ಗಂಧದೊಳು ಕುಸುಮವೋ
ಕುಸುಮ ಗಂಧಗಳೆರಡು ಘ್ರಾಣದೊಳಗೊ
ಅಸಮಭವ ಕಾಗಿನೆಲೆಯಾದಿಕೇಶವರಾಯ
ಉಸುರಲೆನ್ನಳವಲ್ಲ ಎಲ್ಲ ನಿನ್ನೊಳಗೊ

(iii)

ಕುಲ ಕುಲ ಕುಲವೆನ್ನುತಿಹರು
ಕುಲ ಯಾವುದು ಸತ್ಯ ಸುಖವುಳ್ಳ ಜನರಿಗೆ ॥ ಪ ॥

ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗರ್ಪಿಸಲಿಲ್ಲವೆ
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ

ಮೃಗಗಳ ಮೈಯಲ್ಲಿ ಪುಟ್ಟಲು ಕಸ್ತೂರಿ
ತೆಗೆದು ಪೂಸುವರು ದ್ವಿಜರೆಲ್ಲರು
ಒಗೆಯಿಂದ ನಾರಾಯಣನಾವ ಕುಲವಯ್ಯ
ಜಗವಲ್ಲಭನಾವ ಕುಲ ಪೇಳಿರಯ್ಯ

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ ಮಹಾತ್ಮನು ನೆಲೆಯಾದಿಕೇಶವ
ಯಾತರ ಕುಲವಯ್ಯ ಆತನೊಲಿದಮೇಲೆ

(iv)

ದಾನ ಧರ್ಮವ ಮಾಡಿ ಸುಖಿಯಾಗು ಮನವೆ
ಹೀನವೃತ್ತಿಯಲಿ ನೀ ಕೆಡಬೇಡ ಮನವೆ ॥ ಪ ॥

ಎಕ್ಕನಾತಿ ಎಲ್ಲಮ್ಮ ಮಾರಿ ದುರ್ಗಿ ಚೌಡಿ
ಅಕ್ಕರಿಂದಲಿ ಪೂಜೆಮಾಡಲೇಕೆ
ಕಿಕ್ಕಿರಿದು ಯಮನ ದೂತರೆಳೆದೊಯ್ವಾಗ
ಶಕ್ತಿಯರು ಬಿಡಿಸಿಕೊಂಡಾರೇನೊ ಮರುಳೆ

ಸಂಭ್ರಮದಲ್ಲೊಂದು ಹೊತ್ತು ನೇಮದಲಿದ್ದು
ತಂಬಿಟ್ಟನಾ ದೀಪ ಹೊರಲೇತಕೆ
ಕೊಂಬು ಹೋತು ಕುರಿ ಕೋಣನಾ ಬಲಿಗೊಂಬ
ದೊಂಬಿ ದೈವಗಳ ಭಜಿಸದಿರು ಮನನೇ

ಚಿಗುರೆಲೆ ಬೇವಿನಸೊಪ್ಪು ನಾರಸೀರೆ
ಬಗೆ ಬಗೆಯಿಂದ ಶೃಂಗಾರಮಾಡಿ
ನೆಗೆನೆಗೆದು ಆಡಲು ಕುಣಿಯಲು ನಿನಗಿನ್ನು
ಮಿಗಿಲಾದ ಮುಕುತಿಯುಂಟೆ ಹುಚ್ಚು ಮನವೆ

ದಾನ ಧರ್ಮ ಪರೋಪಕಾರವ ಮಾಡು
ದೀನನಾಗಿ ನೀ ಕೆಡಬೇಡವೊ
ಜ್ಞಾನವಿಲ್ಲದೆ ಹೀನ ದೈವವ ಭಜಿಸಲು
ಏನುಂಟು ನಿನಗಿನ್ನು ಎಲೆ ಹುಚ್ಚು ಮನವೆ

ನರಲೋಕದಿ ಯಮನ ಬಾಧೆಯ ಕಳೆಯಲು
ವರ ಪುಣ್ಯಕಥೆಗಳ ಕೇಳುತಲಿ
ಸಿರಿಯಾದಿಕೇಶವರಾಯನ ನೆರೆ ನಂಬಿ
ಸ್ಥಿರವಾದ ಪದವಿಯ ಪಡೆ ಹುಚ್ಚು ಮನವೆ

೧೪. ಚಿಕದೇವರಾಜ ೧೬೭೨ – ೧೭೦೪

ಬಿನ್ನಪ

ಒಂದು ದೆಸೆಯೊಳ್ ತುರುಕರೊಂದು ಕಡೆಯೊಳ್ ಮೋಸಿಸ
ರೊಂದೆಸೆಯೊಳಾರೆಯರ ಬಿಂದಮಳವಿಂ ಬೇ
ರೊಂದು ಬಳಿಯೊಳ್ ತಿಗುಳರೊಂದಿರವಿನೊಳ್ ಕೊಡಗ
ರೊಂದು ಕೆಲದೊಳ್ ಮಲೆವರೊಂದುವೆರೆದೆಲ್ಲರ್
ಸಂದಣಿಸಿ ಕಾಳಗಕೆ ಮುಂದುವರಿವನ್ನ ಮದ
ಟಿಂದವರ ತಟ್ಟುಗಳ ಪಂದಲೆಗಳಂ ದಿ
ಗ್ಬಂದ ಬಲಿಯಿತ್ತು ನಲವಿಂದೆ ಚಿಕದೇವನೃಪ
ನಂದಮಿಗೆ ಪೆರ್ಜಸಮನೊಂದಿ ಸೊಗವಾಳ್ದಂ

ಶ್ರೀಪತಿಯ ಸೇವೆಯೆಂದೇ
ಈ ಪರಿಯೊಳ್ ಕ್ಷಾತ್ರಧರ್ಮಮೆಸಗುತೆ ಶಾಸ್ತ್ರಾ
ಲಾಪಂಗಳ ತತ್ತ್ವಾರ್ಥನಿ
ರೂಪಣದಿಂ ಪೊಳ್ತುಗಳಿವನಪ್ರತಿಮಾಂಕಂ

ಓದಿ ತಿಳಿದೊಪ್ಪಿನಿಂದಂ
ವೇದಾಂತದ ತತ್ತ್ವಗತಿಯನೆಲ್ಲರುಮರಿವಂ
ತಾದರದಿಂದಪ್ರತಿಮಂ
ಯಾದವಗಿರಿಯೊಡೆಯನಡಿಗೆ ಬಿನ್ನತಿಗೆಯ್ದಂ

ಎಣ್ದೆಸೆಯ ಪಗೆಗಳಡಂಗಿದುದರಿಂ ಪ್ರಜೆಗಳ್ಗೆ ರಾಜಕಭಯಮಿಲ್ಲದೆಯುಂ ದೇವತಾಪ್ರಸಾದದಿಂ ಮಳೆಬೆಳೆಗಳುಂಟಾದುದರಿಂ ದೈವಿಕಭಯವಿಲ್ಲದೆಯುಮಿರ್ಪುದರಿಂ ಪ್ರಜೆಗಳನಿಬರುಂ ಇಹದೊಳ್ ಸೊಗವಾಳ್ದಪರ್. ಇವರ್ಗೆ ಪರಗತಿಯುಮುಂ ಸಂಪಾದಿಸವೇಳ್ಪುದೆಂದಾರಯ್ದು

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ
ಯೋಪಿ ಸ್ಯುಃ ಪಾಪಯೋನಯಃ
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾ
ಸ್ತೇಪಿ ಯಾನ್ತಿ ಪರಾಂ ಗತಿಮ್

ಎಂದು ಗೀತೆಯೊಳ್ ಶ್ರೀಕೃಷ್ಣಂ ತಾನೇ ನಿರೂಪಿಸಿದ ತೆಱದೊಳ್ ಪಿಂತಣ್ಗೆನಿತಾನುಂ ಪಾಪಿಗಳಾದೊಡಂ ಆವ ಜಾತಿಯೊಳ್ ಪುಟ್ಟಿರ್ದೊಡಮಿಗಳುಂ ತತ್ತ್ವಜ್ಞಾನದಿಂ ತನ್ನೊಳ್ ಭಕ್ತಿಗೆಯ್ದುನಂಬಿದವರ್ಗೆ ಮುಕ್ತಿ ತಪ್ಪದೆಂದೆಣಿಸಿ, ಅಕ್ಕರಮನರಿಯದೊಕ್ಕಲಿಗರ್ಗಂ ಪೆಣ್ಗಳ್ಗಂ ಸಕ್ಕದದಿಂ ತತ್ತ್ವಜ್ಞಾನಮುಪ್ಪುದರಿದು ಎಂದು – ಎಲ್ಲರುಮರಿವಂತೆ ಕನ್ನಡವಾತಿನೊಳಂ ಮೆಲ್ನುಡಿಗಳಿಂದೆ



ಶ್ರೀ ಚಿಕದೇವರಾಜ ಒಡೆಯರವರು

ಅಖಿಲ ತತ್ತ್ವಾರ್ಥಂಗಳಂ ಸಂಗತಿಗೊಳಿಸಿ, ತಾನ್ ತನ್ನ ಕುಲದೇವತೆಯಪ್ಪ ಯಾದವಗಿರಿ ನಾರಾಯಣನಡಿದಾವರೆಗಳ್ಗೆ ಬಿನ್ನಪಂಗೆಯ್ವ ನೆವದೊಳ್ ಮೂವತ್ತುಂ ಬಿನ್ನಪಂಗಳಂ ಪವಣ್ಗೆಯ್ದುಂ.

ಗೀತಗೋಪಾಲ

(i)

ನೆವಮಿನಿತಿಲ್ಲದೊಲ್ಮೊಸೆಗುಂ ನೆನೆಗುಂ ಬರಿಕುಂ ದಯಾರಸಂ
ಕವಿತರೆ ನಿಟ್ಟಕುಂ ನಲಿಗುಮಾದರಿಕುಂ ಮನವಾರೆ ಮನ್ನಿಕುಂ
ಸವಿನುಡಿದೋಱುಗುಂ ತಿರುಮಲಾರ್ಯನೊಳಪ್ರತಿಮ ಪ್ರಭಾವದಿಂ
ಪವನಿಯನಾಳ್ಗೆ ಬಾಳ್ಗೆ ಸತತಂ ಚಿಕದೇವನರೇಂದ್ರಚಂದ್ರಮಂ

ಅನವಧಿ ದಯದಿಂದೀ ಪರಿ
ಜನಮನಿತುಮನರಸುಗೆಯ್ತುದಿಂ ಪೊರೆದಿಹದೊಳ್
ನೆನೆವಂ ಪರಸುಖಮನವ
ರ್ಗನುಗೊಳಿಪಿರವಾವುದೆಂದು ಚಿಕದೇವೇಂದ್ರಂ

ಪರಿಕಿಸೆ ಪರಿಕಿಸೆ ಕಿವಿಯೊಳ್
ಪರಾಶರ ವ್ಯಾಸ ಮುಖ್ಯಮುನಿ ಸಮ್ಮತದಿಂ
ಹರಿಸಂಕೀರ್ತನಮೊಂದೇ
ಪರಗತಿಗನುಕೂಲಮೆಂದು ನಿರವಿಸಿ ನೆಗಳ್ದಂ

ಪಾಲಂ ಬಯಸಿದ ರೋಗಿಗೆ
ಪಾಲಿಂದೌಷಧಮನೀವ ವೈದ್ಯನ ತೆಱದಿಂ
ದೀ ಲೋಗರೊಲ್ವ ಗೀತದ
ಮೂಲದೊಳೀ ಮುಕ್ತಿಗತಿಯ ಮೊಗದೋಱಿಸಿದಂ

ತೊಡರ್ದಿರೆ ನುಡಿ ನುಣ್ಪುರಗಳ
ಬೆಡಂಗು ಮನವೊಲ್ದು ಗೀತಗೋಪಾಲವೆಸರ್
ವಡೆದೊಳ್ಗನ್ನಡಗಬ್ಬಮ
ನೊಡರಿಸಿ ಚಿಕದೇವರಾಯನುನ್ನತಿವೆತ್ತಂ

(ii) ನಂಬಿಕೆ

ನಿನ್ನ ನಂಬಿದೆ । ನಿನ್ನ ನಂಬಿದೆ । ನಿನ್ನ ನಂಬಿದೆ ನಂಬಿದೆ ನೀ
ನೆನ್ನ ಸಲಹು ಬಿಡು ನಿನ್ನ ಚಿತ್ತವಿನ್ನು ॥ ಪ ॥

ನೀನಱಿಯದುದೆ ಪೇಳು
ನಿನ್ನವನೆಂಬೇಳ್ಗೆಯೊಂದೆನಗೆ
ನೀನಲ್ಲದನ್ಯವ ನೆನೆವನಲ್ಲ ಕರ್ಮ
ಜ್ಞಾನ ಭಕುತಿ ವೈರಾಗ್ಯವ ನಂಬಿದವನಲ್ಲ

ಎಳಮೆಯೊಳ್ ಪರಿದಾಟ
ಯೌವನದೊಳು ಎಳವೆಣ್ಣ ಕೊಡನಾಟ
ಬಳಿಕ ವಾರ್ಧಿಕದೊಳು ಪಲವೆಡರಿನ ಕಾಟ
ತಿಳಿಯೆ ಕರ್ಮಯೋಗ ತೀರದೆಂದಿಗು ರಂಗ

ವೇದಾಂತಗಳು ಪಲವು
ಅವಱೊಳು ವಿವಾದಂಗಳವು ಕೆಲವು
ಭೇದಿಸಿ ನೋಡಲು ವೇದ್ಯಮಾಗದು ತಲವು
ಓದುಗಳಿಂ ಜ್ಞಾನಯೋಗ ಸಾಗದೆಂದಿಗು

ತನುವ ದಂಡಿಪುದರಿದು
ಕರಣಂಗಳ ತಡೆವುದು ಮಿಗೆಯರಿದು
ಮನವ ಬಲ್ವಿಡಿವುದು ಮತ್ತಮರಿದರಿದು
ನೆನಹಿನೊಳ್ ವೈರಾಗ್ಯ ನೆಲೆಗೊಳ್ಳದೆಂದಿಗು

ಸಿರಿಯಾಸೆ ಕಡುನಿಡಿದು
ಸಗ್ಗದ ನಾಡ ಸೆಱೆಯಾಸೆಯೆಡೆಗೂಡದು
ಮರಳಿ ಕೈವಲ್ಯದ ಮರುಳು ಬೆನ್ನ ಬಿಡದು
ಪರಮ ಭಕುತಿಯೋಗ ಬಲಿಯದೆಂದಿಗು ರಂಗ

(iii) ತಪ್ಪು ಯಾರದು?

ತಪ್ಪದಾರದು। ತಿಳಿದು ನೋಡೆ ತಪ್ಪದಾರದು। ತಪ್ಪು ನೆಪ್ಪುಗಳ
ವಿಕಲ್ಪಿಸದೆಲ್ಲವ। ನೊಪ್ಪುಗೆಯ್ದಿನ್ನ ನೊಲಿದು ಪಾಲಿಸು ಕೃಷ್ಣ ॥ ಪ ॥

ಆರಯ್ಯೆ ಮುಗ್ಗಿರಿವಂಧನ ತಪ್ಪೋ
ದಾಱಿದೋಱಿವ ದಂಡಧಾರನ ತಪ್ಪೋ
ಮೇರೆಯಱಿಯದೆನ್ನ ಮೇಲಣ ತಪ್ಪೋ
ನಾರಾಯಣ ನಿನ್ನ ನಟನೆಯ ತಪ್ಪೋ

ತೊಂಡು ಮೇವ ಪಸುವಿಂಡಿನ ತಪ್ಪೋ
ಕಂಡು ಕಾಯದ ತುಱುಗಾವನ ತಪ್ಪೋ
ಗಂಡು ಮಾಱುವೆನ್ನ ಗೆಯ್ಮೆಯ ತಪ್ಪೋ
ಕೊಂಡಾಳುವ ನಿನ್ನ ಕೂರ್ಮೆಯ ತಪ್ಪೋ

ಬಾನಿಯ ಬಳಸುವ ಪಸುಳೆಯ ತಪ್ಪೋ
ತಾ ವಂದು ತಡೆಯದ ತಾಯದು ತಪ್ಪೋ
ಈ ವಿಷಯಕೆ ಮುಗ್ಗುವೆನ್ನದು ತಪ್ಪೋ
ಆ ವೇಳೆಗಾಪುಗೆಯ್ಯದ ನಿನ್ನ ತಪ್ಪೋ

ಗುಜ್ಜಿಯ ತಾಕದ ಮೊನೆಗೋಲಿನ ತಪ್ಪೋ
ಕುಜ್ಜತೆಸೆಯದ ಬೀರಗುವರನ ತಪ್ಪೋ
ಬಜ್ಜುಗೆಯ್ಮೆ ಗೆಯ್ವೆನ್ನ ಭಾವದ ತಪ್ಪೋ
ಅಜ್ಜುವುದೋಜ್ಜಸದ ನಿನ್ನಾಟದ ತಪ್ಪೋ

ಓಜೆಗುಂದುವ ವೀಣೆಯುಲುಹಿನ ತಪ್ಪೋ
ಬಾಜಿಸುವನ ಕಯ್ಯ ಪವಣಿನ ತಪ್ಪೋ
ರಾಜ ಶ್ರೀ ಚಿಕದೇವರಾಯನಿಗೊಲಿದ ಶ್ರೀ
ರಾಜಗೋಪಾಲ ನಿರಾಕರಿಸದೆ ಪೇಳು

(iv) ಕೃಷ್ಣನ ಕೊಳಲು

ಕಂಗೊಳಿಸದಿರಲಾಜ್ಞೆ ಕಣ್ಣಪುಣ್ಯದ ಬೆಳಸ। ಕಂಗೊಳಿಸದಿರಲಾಜ್ಞೆನೆ
ಪೊಂಗೊಳಲ ನುಡಿಸುತಿಳಿಹೊತ್ತಿನೊಳು ಪುರವೀಧಿ।
ಸಿಂಗರಿಸಿ ಮೆಜ್ಞೆವ ಹರಿಯ ಸಿರಿಯ ॥ ಪ ॥

ಕ್ರಮದಿ ನಡುತೋಳ್ಮಡಿಗಳೊಂದಿನಿಸು ಕೊಂಕಿನೊಳು ಕಮನೀಯವೆಂದೆನಿಸಿ
ಮೆಜ್ಞೆಯೆ।
ಸಮತಳದಿ ನಿಂದಡಿಯ ಮುಂದೆ ಮತ್ತೊಂದಡಿಯ ಸಾರ್ಚಿಯುಂಗುಟವ
ನೂಜ್ಞೆ
ರಮಣೀಯ ರೇಖೆಯೊಳು ನಿಂದು ಕೊಳಲುಲಿಗೊಳುವ
ರಾಯ ಗೋವಳನ ತೋಜ್ಞೆ ನೀಜ್ಞೆ

ಕಳೆವೆತ್ತ ಕತ್ತುರಿಯ ವೀಣೆಯೊಡನೊಡನುಣ್ಮೆ ಕವಿವ ತನಿಗಂಪಿನಂತೆ
ಬಳೆವ ತಾನದ ಗಮಕ ಗತಿಯ ಮೈಸಿರಿಗೆ ಮೊಗ ಬಗೆಬಗೆಯ ಭಾವವಡೆಯೆ
ಕೊಳಲಿಗಿಂದುಟೆಯ ಸವಿದೋಜ್ಞೆ ಒಳುದನಿಗೊಳುವ
ಕೊನಬು ಗೋವಳನ ತೋಜ್ಞೆ ನೀಜ್ಞೆ

ಕವಿವ ಕಡೆಗಣ್ಗೆ ಸೇರುವ ನೀಳ್ವ ನೆಲೆಗೊಳುವ ಕರಗುವರೆಮುಗಿವ ನಗುವ
ನೆವದಿ ತೆರೆಗೊಳುವ ತೇಲುವ ಪೊಳಿವ ಪೊಗರೊಗುವ ನೇಹದಿನಿರಸದಿ ನೆನೆವ
ಸವಿನೋಟದಿಂದ ಕಣ್ಮನವ ಕೈಸೆಜ್ಞೆಗೊಳುವ
ಚದುರ ಗೋವಳನ ತೋಜ್ಞೆ ನೀಜ್ಞೆ

ಹರವಿರಿಂಚರ ಬಗೆಗೆ ಹವಣಿನಿಸದಾನಂದದಿರವ ಗೊಲ್ಲರ ಬೀಡಿನ
ನೆರೆಹೊರೆಯ ಪಲವು ಮರ ಮೊರಡಿ ಮಿಗ ಪಕ್ಕಿ ಕಜ್ಜು ತುಜ್ಜುಗಳಿಗೆ ಸೂಜ್ಞೆ
ಗೊಳಿಸಿ
ತಿರುಮಲಾರ್ಯರ ಮನವ ನೆಲೆವೀಡುಗೊಂಡೆಸೆವ
ದೇವ ಗೋವಳನ ತೋಜ್ಞೆ ನೀಜ್ಞೆ

೧೫. ಹೊನ್ನಮ್ಮ ಸು. ೧೬೯೦

ಹದಿಬದೆಯ ಧರ್ಮ

ಆದಿನಾರಾಯಣನಾ ಶೇಷನೊಡಗೂಡಿ।ಯಾದವದಿಂದವತರಿಸೆ
ಯಾದವಕುಲವೇಳಿಗೆವೆತ್ತಿರ್ದುದು। ಮೇದಿನಿಯೊಳು ಮೈಮೆವಡೆದು
ಆ ಯಾದವರಿಗೆ ಕುಲದೇವರೆನಿಪ ನಾ।ರಾಯಣನಾದಿ ಕಾರಣನು
ಶ್ರೀಯೊಡಗೂಡೀ ಕರ್ನಾಟದೇಶದೊ।ಳೀ ಯಾದವಾದ್ರಿಯೊಳಿಹನು

ಬಲಕೃಷ್ಣರಿಂದೆ ಪಲವು ಪೂಜೆಗೊಂಡಿರ್ಪ। ಕುಲದೇವರ ಸೇವೆಗೆಂದು
ಪಲವು ಯಾದವರಾಯರಾ ದ್ವಾರವತಿಯಿಂ।ದೊಲಿದೈತಂದರೀ ನೆಲಕೆ
ಶ್ರೀ ನಾರಾಯಣನಡಿಗಳಿಗೆರಗಿ ಮು।ಹಾನಂದರಸದ ಮೈಮೆಯೊಳು
ಆ ನೆಲೆಯನು ಬಿಟ್ಟಗಲಲಾರದೆ ತಾ।ವೀ ನಾಡೊಳು ನೆಲಸಿದರು

ಈ ಶೈಲಕೆರಡು ಗಾವುದ ತೆಂಕಣ ರಮ್ಯ। ದೇಶವ ನೆಲೆವೀಡುಗೊಳಿಸಿ
ಈ ಶೂರರು ನೆಲಸಿದರದರಿಂದೆ ಮು।ಹಿಶೂರಪುರವೆನಿಸಿದುದು
ಶ್ರೀರಂಗಪಟ್ಟಣದೊಳು ರತ್ನಸಿಂಹಾಸ।ನಾರೋಹಣವನಾಚರಿಸಿ
ಧಾರಿಣಿಯನು ಧರ್ಮದೊಳು ಪಾಲಿಸುತ ಮು।ಹಾರಾಜನೆನಿಸಿ ರಾಜಿಪನು

ಧರೆಯ ಪೊರೆವ ಧರ್ಮವ ಸಂಪಾದಿಪ। ಧುರವ ಗೆಲುವ ಗೈಮೆಯೊಳು
ನರಪತಿ ಚಿಕದೇವರಾಜೇಂದ್ರಗೆ ಶೌರಿ। ನೆರವಾಗಿಹನು ನೇಮದೊಳು
ಚಿಕದೇವರಾಜಚಂದ್ರಮನ ಪಟ್ಟದರಾಣಿ। ಸಕಲ ಸದ್ಗುಣಸಂಪನ್ನೆ
ಅಕಲುಷ್ಕೆಯೆಳವಂದೂರ ದೇವಮ್ಮನು। ಸಕಲ ಸಂಪದದೊಡನಿಹಳು

ಓಲಗಗೊಳುತೊಂದು ದಿನವೆಡಬಲದ ಸು।ಶೀಲೆಯರೊಳು ಕಡೆಗಣ್ಣು
ಸಾಲುವಿಡಿದು ಸುಳಿಸುಳಿಸಿಯೆನ್ನೊಳು ಸತ್ಕೃ।ಪಾಲೋಕನವನೆಸಗಿದನು
ಕರುಣಾಮೃತಾಬ್ಧಿಯ ಕಲ್ಲೋಲಗಳಂತೆ। ತರತರದೊಳು ಕವಿತರುವ
ಸರಸಕಟಾಕ್ಷವನೆಸಗಿಯೆನ್ನೊಳು ಮನ।ಗರಗಿ ಮನ್ನಿಸಲೆಳಸಿದನು

ಅರಸಿ ಕೇಳೀ ಹೊನ್ನಿ ಸರಸ ಸಾಹಿತ್ಯದ। ವರದೇವತೆ ತಾನೆಂದು
ಪರಮಾರ್ಥವಾದಿಯಳಸಿಂಗರಾರ್ಯನು। ಪರಿಪರಿಯೊಳು ಬಣ್ಣಿಪನು
ಇವಳು ಕಾವ್ಯಾಲಂಕಾರ ನಾಟಕಗಳ । ಪವಣಿಗೆಯಿರವ ಬಲ್ಲವಳು
ಇವಳ ಸಾಹಿತ್ಯದ ಸವಿಗೆಳಸುತ್ತೆನ್ನ । ಕವಿಗಳು ಕದುಬುಗೊಂಡಿಹವು

ಪವಣಿಗೆಯೊಪ್ಪೆ ಪುರುಳು ಪೊಗೆ ರೀತಿಯಂ । ಗವಿಸೆಯಲಂಕಾರಗಳು
ಕವಿದು ಪರಿಯೆ ರಸದೊಳ್ಗಂಪು ಘಮ್ಮನೆ। ಕವಿತೆಯೊಂದನು ಪೇಳಿಸಿಂದು
ಎಂದ ರಾಯನ ನುಡಿಗಾನು ವಿನಯಗೂಡಿ । ಪಿಂದೆಗೆದಿರೆ ಪಟ್ಟದರಸಿ
ಕಂದ ಬಾರೆನ್ನ ಕಟ್ಟಾಣಿ ಪೆಣ್ಮಾಣಿಯೆ ಬಾ।ರೆಂದು ಮುಂದಕೆ ಬರಿಸಿದಳು

ಕನ್ನಡ ಜಾಣೆ ನೀ ಬಾರೆಂದು ಕರವಿಡಿದೆನ್ನ ತನ್ನೊತ್ತಿಗೆ ಬರಿಸಿ
ಎನ್ನೊಳು ನೆವಮಿನಿತಿಲ್ಲದೆರಕಗೂಡಿ । ಮನ್ನಿಸಿ ನುಡಿದಳಿಂತೆಂದು

ಕಲಿತ ಬಿಜ್ಜೆಯ ಬಲ್ಲರಿಗೆ ಕೇಳಿಪುದೈಸೆ । ಫಲವಿದನರಿತು ನೀನಿಂದು
ಅಲಸದೆ ನಾಣ್ಚದಂಜದೆಯಳುಕದೆ ಪೇಳು । ಪಲವಗೆ ಕಬ್ಬದೊಳ್ಪುಗಳಾ

ಇಂತು ನುಡಿದ ರಾಣಿಯ ನುಡಿಗೇಳಿಯೋ।ರಂತೆ ಚಿತ್ತವ ಬಲಿವಿಡಿದು
ಸಂತಸ ಮಿಗೆ ಸಭೆಯೊಳು ರಾಯಗೆ ಮಾ।ರಾಂತು ಬಿನ್ನವಿಸಿದೆನಿಂತು

ಅರಸ ಕೇಳೆನಗೆ ನಿನ್ನ ಡಿಯೂಳಿಗವೊಂ।ದರಸಿಯರಡಿಯೊಲ್ಮೆಯೊಂದು
ಪರಿಕಿಪೊಡಖಿಳಾರ್ಥ ಸಾಧನಂಗಳಿಗಿವು । ನೆರವಾಗಿಹವು ನೇಮದೊಳು

ನಿನ್ನ ಕೃಪಾರಸದಿಂದೈಸೆಯಾನು ಕ।ರ್ಬೊನ್ನು ಚೆಂಬೊನ್ನಾದಂತೆ
ಸನ್ನುತಿವಡೆದೊಳ್ಪುವೆತ್ತು ಸಕಲ ಭಾ।ಗ್ಯೋನ್ನತಿಯೊಡಗೂಡಿಹೆನು

ನಿನ್ನಡಿಸೋಂಕಿನೊಳಖಿಲದುರಿತಗಳ । ಸನ್ನಾಹವ ಸದೆದಟ್ಟಿ
ಚೆನ್ನಿಗ ಚಿಕದೇವರಾಯನ ಸಂಚಿಯ । ಹೊನ್ನಿಯೆಂಬೇಳ್ಗೆವೆತ್ತಿಹೆನು

ಒಡೆಯನಿರಿಸಿದಂತಿರ್ಪುದಲ್ಲದೆ ಪೇ।ಳೊಡವೆಗೆ ಬೇರಿರವುಂಟೆ
ಕಡುಗೂರ್ಮೆಯಿಂದೆ ನಿನ್ನ ಡಿಯಾಣತಿಯನೆನ್ನ।ಮುಡಿಯೊಳಾಂತೆನು
ಮತ್ತೇನು

ಪದಿನೆಂಟು ಬನ್ನಣೆಯೆಂದು ಬವಣಿಗೊಂಡು । ಪದಗೆಟ್ಟು ಬಯಲ ಬಣ್ಣಿಸದೆ
ಮುದದೊಡನಿಹಪರದೇಳ್ಗೆ ವಡೆಯೆ ಹದಿ।ಬದೆಯ ಧರ್ಮವ ಬಣ್ಣಿಪೆನು

ಪೆಣ್ಣ ಪೆತ್ತವರ ಬಳಗ ಬಳೆವುದು ಬೇಗ । ಪೆಣ್ಣ ಪೆತ್ತವರು ಪೆಚ್ಚುವರು
ಪೆಣ್ಣ ಪೆತ್ತುದರಿಂದೆ ಪೆಸರೆನಿಸಿತು ಮಿಗೆ । ಬಣ್ಣವೇರಿತು ಪಾಲ್ಗಡಲು

ಪೆಣ್ಣಿಂದೆ ಪೆರ್ಮೆಗೊಂಡನು ಪಮನವಂತನು । ಪೆಣ್ಣಿಂದೆ ಭೃಗು ಪೆರ್ಚಿದನು
ಪೆಣ್ಣಿಂದೆ ಜನಕರಾಯನು ಜಸವಡೆದನು । ಪೆಣ್ಣ ನಿಂದಿಸಲೇಕೆ ಪೆರರು

ಸಿರಿರಾಣಿಯ ಸೀತೆಯ ರುಕ್ಮಿಣಿಯ ಶ್ರೀ।ಹರಿಯೊಡನೊಂದೆ ಹಂತಿಯೊಳು
ಇರಿಸಿ ಪೂಜೆಯನೊಡರಿಸುವರು ಪಿರಿಯರು । ಪರಿಕಿಪೊಡಿವರು ಪೆಣ್ಣೈಸೆ

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ । ಪೆಣ್ಣಲ್ಲವೆ ಪೊರೆದವಳು
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು । ಕಣ್ಣು ಕಾಣದ ಗಾವಿಲರು

೧೬. ಶ್ರೀವಾಸ ಸು. ೧೮೩೦

ಮುಮ್ಮಡಿ ಕೃಷ್ಣರಾಜ ಒಡೆಯರ ವರ್ಧಂತಿ

ಇಂತು ಸಂತರ್ಪಣೆಯ ಸೊಬಗನುರೆ ಬಣ್ಣಿಸುತ
ಸಂತಸದಿ ಮನೆಗೈದಿ ಮಾಧ್ಯಾಹ್ನಿಕಾದಿಗಳ
ನಂತೆಲ್ಲಮಂ ಗೈದು ಶುಚಿಯಾಗಿ ಸತಿ ಗೈದ ಪಾಕಮಂ ಹರಿಗರ್ಪಿಸಿ

ಅಂತರದಿ ಸುತರೊಡನೆ ರುಚಿಯಾಗಿ ಭುಂಜಿಸಿದ
ನಂತರದೊಳಾ ಸತಿಯು ಭೋಜನಂಗೈದ ಬಳಿ
ಕಂತರ ಹಿತಾಹ್ಲಾದದಿಂದ ಜನರಲ್‌ಸುರಟ ನೋಡಲ್ಕೆ ಪೊರಮಟ್ಟನು

ಬಂದು ಸತಿಸುತರೊಡನೆಯರಮನೆಯ ಬಾಗಿಲೊಳ್
ನಿಂದಿರುವ ಗಜ ಹಯ ವರೂಥಾದಿ ರೋಹಕರ
ಸಂದಣಿಯ ಬಾಯ ಭಲ್ಲೆಗಳ ಪಿಡಿದಿರ್ಪವರನಿಂಗ್ಲೀಷು ವಾದ್ಯದವರ
ಚೆಂದದಿಂ ಶ್ರುತಿವಾರಿಕೊಳಲುಗಳ ನುಡಿಸುವರ
ಬಂದುರದಿ ಕಹಳೆ ತುತ್ತೂರಿಗಳನೂದುವರ
ನಿಂದು ಸಾನಂದದಿಂ ಭೇರೀನಗಾರಿಗಳ ಬಡಿವವರ ತೋರಿಸಿದನು

ಬಳಿಕ ಕೃಷ್ಣೇಂದ್ರನೃಪನಂಬಾವಿಲಾಸದೊಳ್
ತಳತಳಿಸುತಿರುವ ನವರತ್ನ ಭದ್ರಾಸನದಿ
ಕಲಿತ ಸಂತೋಷದಿಂ ಕುಳಿತಿರಲು ಸಕಲಾಧಿಕಾರಿಗಳ್ ಭಕ್ತಿಯಿಂದ
ನೆಲತನಕ ತಲೆಗಳಂ ಬಾಗಿಸುತ ಮುಜುರೆಯಂ
ಕಲಿಕ್ಷಾಲ ಕೃಷ್ಣನಾದೀ ಕೃಷ್ಣರಾಜಂಗೆ
ನಿಲವಿಲ್ಲದೇಗೈದರೀ ಮಹಾವಿಭು ಸದೃಶರಾರುಂಟು ಲೋಕದೊಳಗೆ

ಇಂತು ಸಂಭ್ರಮದಿಂದ ಕೃಷ್ಣರಾಜೇಂದ್ರನೊ
ಡ್ಡಂತಿಯುತ್ಸವವ ಕವಿ ಸತಿಸಹಿತ ನೋಡುತ್ತ
ಸಂತಸದಿ ಪೊಗಳುತ್ತ ನಲಿದು ಕುಣಿದಾಡುತ್ತ ಮಕ್ಕಳಿಗೆ ತೋರಿಸುತ್ತ
ಸಂತೋಷವಾಯಿತೇ ನಿಮಗೆಂದು ಕೇಳುತ್ತ
ಕಂತುಸಮ ಕೃಷ್ಣೇಂದ್ರ ದರ್ಶನದ ಪುಣ್ಯಮೆಮ
ಗಂತವಿಲ್ಲದ ಸಕಲ ಸಂಪತ್ತುಗಳ ಕೊಡುವುದೆಂದು ತಾ ಪೇಳ್ದ ಸತಿಗೆ

೧೭. ಅಯ್ಯಶಾಸ್ತ್ರಿ ೧೮೫೩ – ೧೯೩೪

ನಾಲ್ವಡಿ ಕೃಷ್ಣರಾಜ ಒಡೆಯರವರು ರಾಜ್ಯಭಾರ ವಹಿಸಿದ್ದು

ಘನ ತೇಜೋನಿಧಿ ಕರ್ಜನೆಂದೆನಿಸಿದಾ ಆಂಗ್ಲೇಯ ಸರ್ವಾಧಿಕಾ
ರಿ ನಿಜಾನೀಕ ಸಮೇತನಾಗಿ ಮುದದಿಂ ಶ್ರೀಮನ್ಮಹೀಶೂರ ಪ
ತ್ತನಮಂ ಸಾರ್ತರೆ ರಾಯವನ್ನಣೆಗಳಂ ಮಾರಾಣಿಯಾತಂಗೆ ನಂ
ದನನಿಂ ಮಾಡಿಸಿದಳ್ ಮಹಾವಿಭವದಿಂ ಶ್ರೀಕೃಷ್ಣರಾಜೇಂದ್ರನಿಂ

ಅಂತಾತಂ ಬಂದಾಂಗ್ಲೇಯ ಮಹಾಧಿಕಾರಿ ನಿವಾಸಾರ್ಥಮಪ್ಪ ಮಹಾ
ಸೌಧದೊಳ್ ಬೀಡಂ ಬಿಟ್ಟ ಸಮನಂತರಮೆ ಶಾಲಿವಾಹನ ಶಕದ ಶರ ನೇತ್ರ ವಸು
ಚಂದ್ರ ಮಿತ ಶುಭಕೃದ್ವತ್ಸರ ಶ್ರಾವಣ ಶುಕ್ಲ ಪಂಚಮಿಯ ಪೊಳ್ತಡಮೆ ನಿಜ
ವೈಭವ ಪರಾಜಿತ ವೈಜಯಂತಮಪ್ಪ ರಾಜಸಭಾಮಂಟಪದೊಳ್ ಪಲಬರ್

ಮಹಾಧಿಕಾರಿಗಳುಂ ಪ್ರಮುಖರೆನಿಸಿದ ಪೌರರುಂ ನಾಡಿಗರುಂ ಪೆಸರ್ವೆತ್ತ ಸುಧೀಮಣಿಗಳುಂ ಸಾಮಂತರಾಜರುಂ ತಮ್ತಮ್ಮ ಸಮುಚಿತ ಸ್ಥಾನಂಗಳೊಳ್ ಮಂಡಿಸಿರ್ಪಿನಂ ಮಹಾರಾಜ್ಞಿ ನಿಜಪರಿವಾರಂ ಬೆರಸಂತಃಪುರೋಚಿತಮಾದ ಮೇಲುಪ್ಪರಿಗೆಯನಲಂಕರಿಸಿರ್ಪಿನೆಗಂ ಮಹಾವೀರರಪ್ಪ ಸೈನಿಕರ್ ತಮ್ತಮ್ಮ ಕೈದುಗಳಂ ಪಿಡಿದು ಗಂಡಭೇರುಂಡ ಧ್ವಜದಿಂದೊಡಗೂಡಿ ಮುಂಗಡೆಯಂಗಳ ದೊಳ್ ವಂಗಡಂಗೊಂಡು ನಿಂದಿರ್ಪನ್ನಮೂಳಿಗದ ಜನಮಲ್ಲಲ್ಲಿ ಕಯ್ಗಳಂ ಕಟ್ಟಿ ಕೊಂಡು ನಿಂದು ರಾಯಸಮಂ ಕಾದುಕೊಂಡಿರ್ಪನ್ನೆಗಂ

ಆ ರಾಜಸದಕ್ಕೆ ಶತ
ಸ್ಫೀರವಮೆಣ್ದೆಸೆಯನೆಯ್ದಲೆಯ್ತಂದಂ ನಾ
ಲ್ವಾರುವದ ತೇರನಡರ್ದಾ
ಭಾರತ ಸರ್ವಾಧಿಕಾರಿಯಾಂಗ್ಲೇಯವರಂ

ಅಂತು ಬಂದಾತನಿದಿರ್ವಂದು ತನ್ನಂ ಮನ್ನಿಸಿದ ಮಹಾರಾಜ ಶ್ರೀ ಕೃಷ್ಣರಾಜೇಂದ್ರನೊಡನಾಸ್ಥಾನಮನೊಳಪೊಕ್ಕು ಸಭಾಮಧ್ಯದೊಳ್ ನಿಂದು ಸಭಾಸದರಂ ನೋಡಿ ಕೇಳಿರೈ ಮಹಾಶಯರಪ್ಪ ಸಾಮಾಜಿಕರಿರಾ ಮಹಾರಾಜನೀ ಕೃಷ್ಣರಾಜಂ ಬಾಲ್ಯಮಂ ಕಳೆದು ಯೌವನಸ್ಥನಾಗಿರ್ಪನೆಂಬುದುಂ ಮುನ್ನಮೆ ತನಗೆ ಪಟ್ಟಾಭಿಷೇಕ ಮಹೋತ್ಸವಂ ಬಳೆದಂದಿನಿಂದಿನ್ನೆವರಮೀತಂ ಸನ್ಮಾರ್ಗ ವರ್ತಿಯಾಗಿ ನಿರವದ್ಯ ವಿದ್ಯಾಭ್ಯಾಸಂಗೆಯ್ದನೇಕ ರಾಜಧರ್ಮಂಗಳುಮಂ ಸ್ವದೇಶದೊಳಮನ್ಯದೇಶಂಗಳೊಳಂ ಸಂಚಾರಂಗೆಯ್ದು ಸಮುಂಚಿತ ಲೋಕ ವ್ಯವಹಾರಮುಮಂ ತಿಳಿದು ರಾಜ್ಯಾಧಿಕಾರಕ್ಕೆ ತಕ್ಕ ತಕ್ಕುಮೆಯಂ ಪಡೆದಿರ್ಪ ನೆಂಬುದುಂ ನಿಮ್ಮೆಲ್ಲರ್ಗಂ ವಿದಿತವಾಗಿರ್ಪುದೈಸೆ, ರಾಜ್ಯಮಿದಾದೊಡಯ್ವತ್ತುಂ ಲಕ್ಕದೆಣ್ಕೆಯ ಜನಂಗಳನೊಳಕೊಂಡು ನೀಡುಂ ಪಿರಿದಾಗಿರ್ಪುದು ಸಾಮಾನ್ಯ ಮಲ್ತು ಮತ್ತಂ ನಿರತಿಶಯ ಬುದ್ಧಿ ಪ್ರಾಚುರ್ಯನೆನಿಸಿದ ಶೇಷಾದ್ರಿಯಾರ್ಯನ ಮಂತ್ರಿತ್ವದೊಳ್ ಪಿರಿದುಮೇಳ್ಗೆವಡೆದಿರ್ಪುದಿಂತಿದಂ ಬಾಲನಪ್ಪ ಕುವರಂಗೆ ಪಡಿಯೆನಿಸಿ ಕಂದು ಕುಂದುಗಳೇನೊಂದುಮಿಲ್ಲದಿನ್ನೆವರಂ ಕಯ್ಗಾಯ್ದ ವಾಣೀ ವಿಲಾಸದ ಮಾರಾಣಿಯ ಜಾಣ್ಮೆ ನಾಡೆ ಪೊಗಳ್ಕೆಗೆಡೆಯಾದುದಿಂತೀ ಮಹೀಶೂರ ರಾಜ್ಯದಧಿಕಾರಮನೀಗಳೀ ಮಹಾರಾಜ ಕೃಷ್ಣರಾಜೇಂದ್ರನಧೀನಮುಂ ಮಾಡಿರ್ಪನದನೀತಂ ನಿಜಧರ್ಮದಿಂ ಪಾಲಿಸುತ್ತೆ ಚಿರಕಾಲಂ ಸೊಗದಿಂದಿರ್ಕೆಂದು ಜಗದೀಶನಂ ಪ್ರಾರ್ಥಿಸುವೆನೆಂದು ಘಂಟಾಘೋಷದಿಂ ನುಡಿವುದುಮೆಲ್ಲರುಂ ಜಯಘೋಷಮಂ ಮಾಡಿದರಾ ಕ್ಷಣದೊಳ್

ದೊರೆವಡೆದ ಸತ್ಯಮೇವೋ
ದ್ಧರಾಮ್ಯಹಮೆನಿಪ್ಪ ಲೇಖನದ ಕನ್ನಡ ನಾ
ಡರಸರೆರಳ್ದಲೆವಕ್ಕಿಯ
ಕುರುಪಿನ ಪಳವಿಗೆಯನೆತ್ತಿದರ್ ಪಡೆವಳ್ಳರ್

ನೆಗಪಿದ ತಮ್ಮಾಳ್ದನ ಪಳ
ವಿಗೆಯಂ ಕಂಡೊಡನೆ ಪೊರಗೆ ನೆರೆದಿರ್ದ ಜನಂ
ಮುಗಿಲಂ ಮುಟ್ಟಿ ಜಯಧ್ವನಿ
ನೆಗಳ್ದುದು ಕರತಾಳ ಘೋಷಮುಂ ಮುದದಿಂದಂ

ತೀವಿತ್ತು ಸೈನಿಕರ ಕ
ಯ್ಗೋವಿಗಳೊಗ್ಗೊಗ್ಗಿನುಣ್ಮೆದಬ್ಬರಮುಂ ಪೆ
ರ್ಗೋವಿಗಳಿಂದಂ ಪೊಣ್ಮೆದ
ಗಾವರಮುಂ ಭೂ ನಭೋಂತರಾಳಮನೆಲ್ಲಂ

ಮೂರನೆಯ ತೆನೆ

ನಾಡಪದಗಳಿಂದ

ಒಳಪಿಡಿ

೧ ಗರತಿ ಹಾಡುಗಳು ೭೫

೨ ಗೋವಿನ ಹಾಡು ೭೪

೩ ಮಾನವನು ಪದ ೭೮

೧. ಗರತಿ ಹಾಡುಗಳು

ತಾವರಿಯ ಗಿಡ ಹುಟ್ಟ ದೇವರಿಗೆ ನೆರಳಾದಿ
ನಾ ಹುಟ್ಟ ಮನಿಗೆ ಎರವಾದೆ । ಹಡೆದವ್ವ
ನೀ ಕೊಟ್ಟ ಮನೆಗೆ ಹೆಸರಾದೆ

ಬ್ಯಾಸಗಿ ದಿವಸಕ ಬೇವೀನ ಮರ ತಂಪ
ಭೀಮರತಿಯೆಂಬ ಹೊಳಿ ತಂಪ । ಹಡೆದಮ್ಮ
ನೀ ತಂಪ ನನ್ನ ತವರೀಗ

ಹೆಣ್ಣ ಹಡೆಯಲಿ ಬ್ಯಾಡ ಹೆರವರಿಗಿ ಕೊಡಬ್ಯಾಡ
ಹೆಣ್ಣ ಹೋಗಾಗ ಅಳಬ್ಯಾಡ । ಹಡೆದವ್ವ
ಸಿಟ್ಟಾಗಿ ತಿವಗ ಬೈಬ್ಯಾಡ

ತಾಯಿಮಕ್ಕಳ ದನಿಯು ತಾಳ ಬಾರಿಸಿದಾಂಗ
ಜೋಡ ಕಿನ್ನೂರಿ ನುಡಿದಾಂಗ । ಹಲಸಂಗಿ
ಹೊತ್ತೇರಿ ತಾಸೆ ಬಡೆದಾಂಗ

ತಾಯಿ ಕಾಣದ ಜೀವ ತಾವೂರಿ ಬಾವೂರಿ
ಭಾಳ ಬಿಸಲಾನ ಅವರೀಯ । ಹೂವಿನ್ಹಾಂಗ
ಬಾಡತೀನಿ ತಾಯಿ ಕರೆದೊಯ್ಯ

ಗಂಜೀಯ ಕುಡಿದರು ಗಂಡನ ಮನಿ ಲೇಸ
ಅಂದಣದ ಮ್ಯಾಲ ಚವುರವ । ಸಾರಿದರ
ಹಂಗೀನ ತವರ ಮನಿ ಸಾಕ

ತಾಯಿಲ್ಲ ತವರೀಗಿ ಹೋಗದಿರು ನನ ಮನವ
ನೀರಿಲ್ದ ಕೆರಿಗಿ ಕರ ಬಂದು । ತಿರುಗಾಗ
ಆಗ ನೋಡದರ ದುಃಖಗಳ

ಅಡಗೀಯ ಮನಿಯಾಗ ಮಡದೀಯ ಸುಳುವಿಲ್ಲ
ಅಡಗಿ ಬಾಯೀಗಿ ರುಚಿಯಿಲ್ಲ । ಹಡೆದವ್ವ
ಮಡದಿ ತವರೀಗಿ ಹೋಗ್ಯಾಳ

ಹಚ್ಚಡದ ಪದರಾಗ ಅಚ್ಚ ಮಲ್ಲಿಗಿ ಹೂವ
ಬಿಚ್ಚಿ ನನಮ್ಯಾಲ ಒಗೆವಂಥ । ರಾಯರನ
ಬಿಟ್ಹ್ಯಾಂಗ ಬರಲೆ ಹಡೆದವ್ವ

ಬಟ್ಟಲಗಣ್ಣೀಲಿ ದಿಟ್ಟೀಸಿ ನೋಡ್ಯಾರ
ಸಿಟ್ಯಾಕೊ ರಾಯ ನನಮ್ಯಾಲ । ನಾ ಅಂಥ
ಹುಟ್ಟಿಸ್ಯಾಡವರ ಮಗಳಲ್ಲ

ರಾಯ ಬರತಾರಂತ ರಾತ್ರಿಯಲಿ ನೀರಿಟ್ಟ
ರನ್ನ ಬಚ್ಚಲಕ ಮಣೆಹಾಕಿ । ಕೇಳೀನ
ಸಣ್ಣವಳವ್ಯಾಲ ಸಂವತ್ಯಾಕ

ಯಾಲಕ್ಕಿಕಾಯ್ ಸುಲಿದು ಯಾವಡಗಿ ಮಾಡಲಿ
ಊರಿಗ್ಹೊೀಗ್ಯಾರ ರಾಯರು । ಬಾರದೆ
ಯಾವಡಗಿ ಮಾಡಿ ಫಲವೇನ

ಅಳುವ ಕಂದನ ತುಟಿಯು ಹವಳದ ಕುಡಿಯಂಗ
ಕುಡಿಹುಬ್ಬು ಬೇವಿನೆಸಳಂಗ । ಕಣ್ಣೊೀಟ
ಸಿವನ ಕೈಯಲಗು ಹೊಳೆದಂಗ

ತಾಯಿದ್ರ ತವರ್ಹೆಚ್ಚು ತಂದಿದ್ರ ಬಳಗ್ಹೆಚ್ಚು
ಸಾವಿರಕೆ ಹೆಚ್ಚು ಪತಿವುರುಷ । ಹೊಟ್ಟೀಯ
ಮಾಣಿಕದ ಹರಳು ಮಗ ಹೆಚ್ಚು

ನನ್ನ ಅಂಗಳದಾಗ ಮಲ್ಲಿಗಿ ಗಿಡ ಹುಟ್ಟ
ಝುಲ್ಲೀಸಬ್ಯಾಡೊ ಗಿಣಿರಾಮಾ । ನಿಮ್ಮಂಥ
ಬಾಲರ್ಹೊೀಗ್ಯಾರ ಝುಳಕಾಕ

ಬಾಲಕರಿಲ್ಲದ ಬಾಲೀದ್ಯಾತರ ಜನ್ಮ
ಬಾಡೀಗಿ ಎತ್ತು ದುಡಿದಂಗ । ಬಾಳೆಲೆಯ
ಹಾಸ್ಯಂಡು ಬೀಸಿ ಒಗೆದಂಗ

ಕಂದನ ಕುಡು ಶಿವನೆ ಬಂಧನ ಬಡಲಾರೆ
ಹಂಗೀನ ಬಾನ ಉಣಲಾರೆ । ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ

೨. ಗೊೀವಿನ ಹಾಡು

೧

ಧರಣಿ ಮಂಡಲ ಮಧ್ಯದೊಳಗೆ
ಮೆರೆಯುತಿಹ ಕರ್ನಾಟ ದೇಶದೊ
ಳಿರುವ ಕಾಳಿಂಗನೆಂಬ ಗೊಲ್ಲನ
ಪರಿಯ ನಾನೆಂತು ಪೇಳ್ವೆನು

ಗಿರಿಗಳಿಡೆಯಲಿ ಅಡವಿ ನಡುವೆ
ತುರುವ ದೊಡ್ಡಿಯ ಮಾಡಿಕೊಂಡು
ಮೆರೆವ ಕಾಳಿಂಗನೆಂಬ ಗೊಲ್ಲನ
ಸಿರಿಯ ನಾನೆಂತು ಪೇಳ್ವೆನು

ಗೊಲ್ಲದೊಡ್ಡಿಯೊಳಿರುವ ಹಸುಗಳು
ಎಲ್ಲ ಬೆಟ್ಟದ ಮೇಲೆ ಮೇಯುತ
ಹುಲ್ಲನೊಳ್ಳೆಯ ನೀರ ಕುಡಿಯುತ
ಅಲ್ಲಿ ಮೆರೆದುವರಣ್ಯದಿ

ಕರುಗಳನು ನೆನೆನೆನೆದು ಹಸುಗಳು
ಕೊರಳ ಘಂಟೆ ಢಣಿರು ಢಣಿರೆನೆ
ಪರಿದು ಲಂಘಿಸಿ ಚಿಮ್ಮಿ ನೆಗೆಯುತ
ಮರಳಿ ಬಂದುವು ದೊಡ್ಡಿಗೆ

ತಮ್ಮ ತಾಯನು ಕಂಡು ಕರುಗಳು
ಅಮ್ಮಾ ಎಂದು ಕೂಗಿ ನಲಿಯುತ
ಸುಮ್ಮಾನದೊಳು ಮೊಲೆಯನುಂಡು
ನಿರ್ಮಲದೊಳು ಇದ್ದುವು

ಉದಯಕಾಲದೊಳೆದ್ದು ಗೊಲ್ಲನು
ನದಿಯ ಸ್ನಾನವ ಮಾಡಿಕೊಂಡು
ಮುದದಿ ತಿಲಕವ ಹಣೆಯೊಳಿಟ್ಟು
ಚದುರ ಶಿಖೆಯನು ಹಾಕಿದ

ಎಳೆಯ ಮಾವಿನ ಮರದ ಕೆಳಗೆ
ಕೊಳಲನೂದುತ ಗೊಲ್ಲಗೌಡನು
ಬಳಸಿ ನಿಂದ ತುರುಗಳನ್ನು
ಬಳಿಗೆ ಕರೆದನು ಹರುಷದಿ

ಗಂಗೆ ಬಾರೇ ಗೌರಿ ಬಾರೇ
ತುಂಗಭದ್ರೇ ತಾಯಿ ಬಾರೇ
ಕಾಮಧೇನು ನೀನು ಬಾರೆಂದು
ಪ್ರೇಮದಲಿ ಗೊಲ್ಲ ಕರೆದನು

ಗೊಲ್ಲ ಕರೆದ ಧ್ವನಿಯ ಕೇಳಿ
ಎಲ್ಲ ಹಸುಗಳು ಬಂದು ನಿಂತು
ಚೆಲ್ಲಿ ಸೂಸಿ ಹಾಲು ಕರೆಯಲು
ಅಲ್ಲಿ ತುಂಬಿತು ಬಿಂದಿಗೆ

೨

ಹಬ್ಬದಾ ಮಲೆ ಮಧ್ಯದೊಳಗೆ
ಅರ್ಭುತನೆಂದೆಂಬ ವ್ಯಾಘ್ರನು
ಅಬ್ಬರಿಸಿ ಹಸಿ ಹಸಿದು ಬೆಟ್ಟದ
ಕಿಬ್ಬಿಯೊಳು ತಾನಿದ್ದನು

ಸಿಡಿದು ರೋಷದಿ ಮೊರೆಯುತಾ ಹುಲಿ
ಘುಡುಘುಡಿಸಿ ಭೋರಿಡುತ ಛಂಗನೆ
ತುಡುಕಲೆರಗಿದ ರಭಸಕಂಜಿ
ಚೆದರಿಹೋದುವು ಹಸುಗಳು

ಪುಣ್ಯಕೋಟಿ ಎಂಬ ಗೋವು
ತನ್ನ ಕಂದನ ನೆನೆದುಕೊಂಡು
ಮುನ್ನ ಹಾಲನು ಕೊಡುವೆನೆನುತ
ಚೆನ್ನಾಗಿ ತಾ ಬರುತಿರೆ

ಇಂದಿನಗೆ ಆಹಾರ ಸಿಕ್ಕಿತು
ಎಂದು ಬೇಗನೆ ದುಷ್ಟ ವ್ಯಾಘ್ರನು
ಬಂದು ಬಳಸಿ ಅಡ್ಡಗಟ್ಟಿ
ನಿಂದನಾ ಹುಲಿರಾಯನು

ಮೇಲೆ ಬಿದ್ದು ನಿನ್ನನೀಗಲೆ
ಬೀಳಹೊಯ್ವೆನು ನಿನ್ನ ಹೊಟ್ಟೆಯ
ಸೀಳಿ ಬಿಡುವೆನು ಎನುತ ಕೋಪದಿ
ಖೂಳ ವ್ಯಾಘ್ರನು ಕೂಗಲು

ಒಂದು ಬಿನ್ನಹ ಹುಲಿಯೆ ಕೇಳು
ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಯ ಕೊಟ್ಟು
ಬಂದು ಸೇರುವೆನಿಲ್ಲಿಗೆ

ಹಸಿದ ವೇಳೆಗೆ ಸಿಕ್ಕಿದೊಡವೆಯ
ವಶವ ಮಾಡದೆ ಬಿಡಲು ನೀನು
ನುಸುಳಿ ಹೋಗುವೆ ಮತ್ತೆ ಬರುವೆಯ
ಹುಸಿಯನಾಡುವೆಯೆಂದಿತು

ಸತ್ಯವೇ ನಮ್ಮ ತಾಯಿತಂದೆ
ಸತ್ಯವೇ ನಮ್ಮ ಸರ್ವ ಬಳಗ
ಸತ್ಯವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು

೩

ಕೊಂದು ತಿನ್ನುವೆನೆಂಬ ಹುಲಿಗೆ
ಚೆಂದದಿಂದ ಭಾಷೆಯಿತ್ತು
ಕಂದ ನಿನ್ನನು ನೋಡಿ ಹೋಗುವೆ
ನೆಂದು ಬಂದೆನು ದೊಡ್ಡಿಗೆ

ಅಮ್ಮ ನೀನು ಸಾಯಲೇಕೆ
ನನ್ನ ತಬ್ಬಲಿ ಮಾಡಲೇಕೆ
ಸುಮ್ಮನಿಲ್ಲಯೆ ನಿಲ್ಲೆನುತ್ತ
ಅಮ್ಮನಿಗೆ ಕರು ಹೇಳಲು

ಕೊಟ್ಟ ಭಾಷೆಗೆ ತಪ್ಪಲಾರೆನು
ಕೆಟ್ಟ ಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಷಿಸಿನಲ್ಲಿಗೆ
ಕಟ್ಟಕಡೆಗಿದು ಖಂಡಿತ

ಆರ ಮೊಲೆಯನು ಕುಡಿಯಲಮ್ಮ
ಆರ ಸೇರಿ ಬದುಕಲಮ್ಮ
ಆರ ಬಳಿಯಲಿ ಮಲಗಲಮ್ಮ
ಆರು ನನಗೆ ಹಿತವರು

ಅಮ್ಮಗಳಿರ ಅಕ್ಕಗಳಿರ
ನಮ್ಮ ತಾಯೊಡಹುಟ್ಟುಗಳಿರ
ನಿಮ್ಮ ಕಂದನೆಂದು ಕಾಣಿರಿ
ತಬ್ಬಲಿಯನೀ ಕರುವನು

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು

ಕಟ್ಟಕಡೆಯಲಿ ಮೇಯಬೇಡ
ಬೆಟ್ಟದೊತ್ತಿಗೆ ಹೋಗಬೇಡ
ದುಷ್ಟ ವ್ಯಾಘ್ರನು ಹೊಂಚುತಿರುವನು
ನಟ್ಟನಡುವಿರು ಕಂದನೆ

ತಬ್ಬಲಿ ನೀನಾದೆ ಮಗನೆ
ಹೆಬ್ಬುಲಿಯ ಬಾಯನ್ನು ಹೊಗುವೆನು
ಇಬ್ಬರಾ ಋಣ ತೀರಿತೆಂದು
ತಬ್ಬಿಕೊಂಡಿತು ಕಂದನ

೪

ಗೋವು ಕರುವನು ಬಿಟ್ಟು ಬಂದು
ಸಾವಕಾಶವ ಮಾಡದಂತೆ
ಗವಿಯ ಬಾಗಿಲ ಸೇರಿ ನಿಂತು
ತವಕದಲಿ ಹುಲಿಗೆಂದಿತು

ಖಂಡವಿದೆ ಕೋ ಮಾಂಸವಿದೆ ಕೋ
ಗುಂಡಿಗೆಯ ಬಿಸಿ ರಕ್ತವಿದೆ ಕೋ
ಚಂಡ ವ್ಯಾಘ್ರನೆ ನೀನಿದೆಲ್ಲವ
ನುಂಡು ಸಂತಸದಿಂದಿರು

ಪುಣ್ಯಕೋಟಿಯ ಮಾತ ಕೇಳಿ
ಕಣ್ಣನೀರನು ಸುರಿಸಿ ನೊಂದು
ಕನ್ನೆಯಿವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು

ಎನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ನಾನೇನ ಪಡೆವೆನು
ಎನ್ನುತಾ ಹುಲಿ ಹಾರಿ ನೆಗೆದು
ತನ್ನ ಪ್ರಾಣವ ಬಿಟ್ಟಿತು

೩. ಮಾನವಮಿ ಪದ

ಆಶ್ವಯುಜ ಶುದ್ಧ ಮಾನವಮಿ ಬರಲೆಂದು
ಶಾಶ್ವತದಿ ಹರಸಿದೆವು ಬಾಲಕರು ಬಂದು
ಈಶ ನಿಮಗತ್ಯಧಿಕ ಸುಖವ ಕೊಡಲೆಂದು
ಲೇಸಾಗಿ ಹರಸಿದೆವು ಬಾಲಕರು ಬಂದು

ಧನಕನಕ ವಸ್ತುವಾಹನವಾಗಲೆಂದು
ಕನಕದಂಡಿಗೆ ಚೌರಿ ನಿಮಗಾಗಲೆಂದು
ದಿನದಿನಕೆ ರಾಜಮನ್ನಣೆ ಹೆಚ್ಚಲೆಂದು
ಅನುದಿನವು ಹರಸಿದೆವು ಬಾಲಕರು ಬಂದು

ಛತ್ರ ಚಾಮರ ತೇಜಿ ನಿಮಗಾಗಲೆಂದು
ಅರ್ತಿಯಿಂ ಮಾಲಕುಮಿ ನಿಮಗೊಲಿಯಲೆಂದು
ಪುತ್ರಪೌತ್ರರು ನಿಮಗೆ ಹೆಚ್ಚುತಿರಲೆಂದು
ಅರ್ತಿಯಿಂ ಹರಸಿದೆವು ಬಾಲಕರು ಬಂದು

ಮಳೆ ಬಂದು ಬೆಳೆ ಬೆಳೆದು ಧರೆ ತಣಿಯಲೆಂದು
ತಿಳಿಗೊಳಗಳುಕ್ಕಿ ತುರುಗಳು ಕರೆಯಲೆಂದು
ನಳಿನಮುಖಿಯರು ಸುಪುತ್ರರ ಪಡೆಯಲೆಂದು
ಇಳೆಯೊಳಗೆ ಹರಸಿದೆವು ಬಾಲಕರು ಬಂದು

ಆಯುರಾರೋಗ್ಯಗಳು ನಿಮಗಾಗಲೆಂದು
ಶ್ರೇಯಸ್ಸು ಸಂಪತ್ತು ಹೆಚ್ಚುತಿರಲೆಂದು
ಆಯತದಿ ಜಗದೊಡೆಯನೊಲವಾಗಲೆಂದು
ಪ್ರೀಯದಿಂ ಹರಸಿದೆವು ಬಾಲಕರು ಬಂದು

ನಾಲ್ಕನೆಯ ತೆನೆ

ಹೊಸ ಕವಿತೆಗಳಿಂದ

ಒಳಪಿಡಿ

೧ ಕಾಣಿಕೆ ೮೩
೨ ಸ್ವಾಗತಗೀತ ೮೪
೩ ಮೈಸೂರು ಮಕ್ಕಳು ೮೬
೪ ಸ್ವಾಗತ (ಹೈದರಾಬಾದಿಗೆ) ೮೮
೫ ಕನ್ನಡ ನುಡಿ ೮೯
೬ ಕನ್ನಡ ೮೯
೭ ಕನ್ನಡ್ ಪದಗೊಳು ೯೦
೮ ಕನ್ನಡಿಗನ ಕೊರಗು ೯೧
೯ ರಕ್ಷಿಸು ಕರ್ನಾಟಕ ದೇವಿ ೯೨
೧೦ ಕನ್ನಡಿಗರ ತಾಯಿ ೯೩
೧೧ ತುಳುನಾಡ ರಾಣಿ ೯೫
೧೨ ಕನ್ನಡನಾಡ ರಾಣಿ ೯೬
೧೩ ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು ೯೭
೧೪ ಅರುಣೋದಯ ೯೭
೧೫ ನಾಡಿನ ಹಾಡು ೯೯
೧೬ ಕಾರ್ಗಾಲದ ವೈಭವ ೧೦೦
೧೭ ಹೈದರಾಬಾದು ೧೦೧
೧೮ ಕೊಡಗು ೧೦೨
೧೯ ಮಡಿಕೇರೀಲಿ ಮಂಜು ೧೦೪
೨೦ ಹುತ್ತರಿ ಹಾಡು ೧೦೫
೨೧ ತೆಂಕಣ ಗಾಳಿಯಾಟ ೧೦೬
೨೨ ಹಾವಿನ ಹಾಡು ೧೦೮
೨೩ ಕೊಂಬು ೧೦೯
೨೪ ಕೋಗಿಲೆ ೧೧೧
೨೫ ಶಿವನಸಮುದ್ರ ೧೧೨
೨೬ ಲಲಿತಾದ್ರಿ ೧೧೩
೨೭ ಲಾಲ್‌ಬಾಗ್ ೧೧೬
೨೮ ಮಡಿಕೇರೀಲಿ ರತ್ನ ೧೧೯
೨೯ ಕುಮಾರವ್ಯಾಸ ೧೨೧
೩೦ ಕನ್ನಡನಾಡಿನ ಸ್ಥಿತಿಯನು ನೆನೆದು ೧೨೩
೩೧ ಎಂಥ ನಾಡಿದು ೧೨೪
೩೨ ಹಂಪೆಗೆ ೧೨೪
೩೩ ಹಂಪೀ-ವಿಜಯ ನಗರ ದರ್ಶನ ೧೨೫
೩೪ ಕನ್ನಡ ದಾಸಯ್ಯ ೧೨೬
೩೫ ತರುಣರ ದಸರೆ ೧೨೭
೩೬ ಶ್ರೀಕೃಷ್ಣರಾಜ ರಜತ ಮಹೋತ್ಸವ ಪ್ರಗಾಥ ೧೨೯
೩೭ ಕನಸಿನೊಳಗೊಂದು ಕಣಸು ೧೩೪
೩೮ ಭಾರತ ತಪಸ್ವಿನಿ ೧೩೫
೩೯ ಬೇಲೂರಿನ ಶಿಲಾಬಾಲಿಕೆಯರು ೧೩೬
೪೦ ವನಸುಮ ೧೩೮
೪೧ ತೆಂಗಾಳಿ ೧೩೯
೪೨ ಕಸ್ಮೈ ದೇವಾಯ ೧೪೦
೪೩ ಕೋಗಿಲೆ ೧೪೧
೪೪ ಅಭೀಃ ೧೪೩
೪೫ ನವೀನ ೧೪೪
೪೬ ಯುಗಾದಿಯ ಹಾಡು ೧೪೫
೪೭ ಕನ್ನಡತಾಯ ನೋಟ ೧೪೭

೧. ಕಾಣಿಕೆ

ಮೊದಲು ತಾಯ ಹಾಲ ಕುಡಿದು,
ಲಲ್ಲೆಯಿಂದ ತೊದಲಿ ನುಡಿದು,
ಕೆಳೆಯರೊಡನೆ ಬೆಳೆದು ಬಂದ
ಮಾತದಾವುದು–
ನಲ್ಲೆಯೊಲವ ತೆರೆದು ತಂದ
ಮಾತದಾವುದು–

ಸವಿಯ ಹಾಡ, ಕಥೆಯ, ಕಟ್ಟಿ,
ಕಿವಿಯಲೆರೆದು, ಕರುಳ ತಟ್ಟಿ,
ನಮ್ಮ ಜನರು, ನಮ್ಮ ನಾಡು,
ಎನಿಸಿತಾವುದು–
ನಮ್ಮ ಕವಿಗಳೆಂಬ ಕೋಡು
ತಲೆಗದಾವುದು–

ಕನ್ನಡ ನುಡಿ, ನಮ್ಮ ಹೆಣ್ಣು,
ನಮ್ಮ ತೋಟದಿನಿಯ ಹಣ್ಣು;
ಬಳಿಕ, ಬೇರೆ ಬೆಳೆದ ಹೆಣ್ಣು
ಬಳಿಗೆ ಸುಳಿದಳು;
ಹೊಸದು ರಸದ ಬಳ್ಳಿ ಹಣ್ಣು
ಒಳಗೆ ಸುಳಿದಳು.

ಪಡುವ ಕಡಲ ಹೊನ್ನ ಹೆಣ್ಣು,
ನನ್ನ ಜೀವದುಸಿರು, ಕಣ್ಣು,
ನಲಿಸಿ, ಕಲಿಸಿ, ಮನವನೊಲಿಸಿ
ಕುಣಿಸುತಿರುವಳು;
ಒಮ್ಮೆ ಇವಳು, ಒಮ್ಮೆ ಅವಳು,
ಕುಣಿಸುತಿರುವಳು.

ಹೀಗೆ ನನಗೆ ಹಬ್ಬವಾಗಿ,
ಇನಿಯರಿಬ್ಬರನ್ನು ತೂಗಿ,
ಇವಳ ಸೊಬಗನವಳು ತೊಟ್ಟು,
ನೋಡಬಯಸಿದೆ;
ಅವಳ ತೊಡಿಗೆ ಇವಳಿಗಿಟ್ಟು
ಹಾಡಬಯಸಿದೆ.

ಬಲ್ಲವರಿಗೆ ಬೆರಗೆ ಇಲ್ಲಿ?
ಅರಿಯದವರು ನಾಲ್ವರಲ್ಲಿ
ಕಳೆಯ ಬೆಳಕು ಹೊಳೆಯಲಂದು
ದಣಿದುಹೋದೆನು.
ಬಡವನಳಲುಸೇವೆಯೆಂದು
ಧನ್ಯನಾದೆನು.

ಶ್ರೀ

೨. ಸ್ವಾಗತ ಗೀತ

೧

ಗೆಳೆಯ ಕನ್ನಡಿಗರೇ, ಸ್ವಾಗತವು ನಿಮಗೆ!
ಬೆಳೆವ ಸಿರಿಗನ್ನಡದ ಬಳ್ಳಿ ಪಡೆದರಳುಗಳೆ,
ಸ್ವಾಗತವು ನಿಮಗೆ!

೨

ಒಬ್ಬ ಕನ್ನಡ ದೇವಿಯುದರದಿಂದೊಗೆದು,
ಒಬ್ಬ ಕನ್ನಡ ಜನನಿಯೆದೆಹಾಲ ಮೊಗೆದು,
ಒಬ್ಬ ಮಾತೆಯ ಮಡಿಲು ತೊಡೆಗಳಲಿ ಕುಣಿದು,
ಒಬ್ಬ ತಾಯುಲಿಗಳನೆ ತೊದಲಿ ನುಡಿದು,
ಬೆಳೆದ ಕನ್ನಡಿಗರೇ, ಬಂಧು ಕನ್ನಡಿಗರೇ
ಇನಿಯ ಕನ್ನಡಿಗರೇ, ಸ್ವಾಗತವು ನಿಮಗೆ!

೩

ಪಡುಗಡಲ ತೆರೆ ಮೊಳಗಿ, ಹಲವು ಹೊಳೆಗಳು ಮಿನುಗಿ,
ಸೊಬಗು ಸುಳಿಯುವ, ಸುಖದ ಬೀಡಿನಿಂದ,
ತುಳು ನೆರೆಯ ನಾಡಿನಿಂದ–
ಕನ್ನಡದ ಕಲಿಗಳನು, ಕನ್ನಡದ ಕವಿಗಳನು
ತನ್ನ ಬಸಿರಲಿ ಮುನ್ನ ಹೊರೆದು, ಜಗದಲಿ ಮೆರೆದು
ಮತ್ತೆ ಮಿಗುವುತ್ಸಹದ ಕೊಯಲಿನಿಂದ,
ಬೆಳವಲದ ಬಯಲಿನಿಂದ–
ವನದೇವಿ ಜಲದೇವಿಯರಿಗೆ ತೌರೂರೆನಿಸಿ,
ಜನದ ಕಣ್ ಮನಗಳನು ಸೆಳೆದು ಸೆರೆಸಿಕ್ಕಿಸುವ
ಪ್ರಕೃತಿರಚನೆಯ ಬೆಗಡು ಬೆಡಗಿನಿಂದ,
ಮಲೆನಾಡು ಕೊಡಗಿನಿಂದ–

ಹೆರರು ಕೊಡುವಟ್ಟುಳಿಗೆ ಹಿಮ್ಮೆಟ್ಟದೆಯೆ ನಿಂತು
ಸಿರಿಗನ್ನಡ ಧ್ವಜವನೆತ್ತಿ ಮೆರೆಯಿಸುತಿರುವ
ಗಂಡುಮೆಟ್ಟಿನ ನೆಲದ ತಡಿಗಳಿಂದ,
ಕನ್ನಡದ ಗಡಿಗಳಿಂದ–
ಬಂದಿಹಿರಿ, ಬಂದಿಹಿರಿ ಕನ್ನಡದ ಮಣಿಗಳಿರ,
ಬಂದಿಹಿರಿ, ಕನ್ನಡದ ದೇವಿಯಾರಾಧನೆಗೆ,
ಇಂದು ಸ್ವಾಗತವು ನಿಮಗೆ!
ತಂದಿಹಿರಿ ನೀವಿಂದು ಹೊಸದೊಂದು ಭಾಗ್ಯವನು
ಈ ನಮ್ಮ ಮೈಸೂರಿಗೆ!

೪

ಬೆಟ್ಟತುದಿಯಲಿ ನಿಂತು ಬೆಳಗಿ ದೆಸೆದೆಸೆಗೆ,
ಭಕ್ತರಳಲೆಲ್ಲವನು ತುಳಿದು ನೆಲದಡಿಗೆ,
ಒಲುಮೆಯಲಿ ನಲುಮೆಯಲಿ ಚಾಮುಂಡಿದೇವಿ,
ಕನ್ನಡಿಗರಧಿದೇವಿ ಶುಭಗಳನು ತೀವಿ
ಕಾಯುತಿರುವೀ ನಮ್ಮ ಮೈಸೂರಿಗೆ,
ಇಂದು ಸ್ವಾಗತವು ನಿಮಗೆ!

೫

ಇಲ್ಲಿ ಕೆರೆ, ಅಲ್ಲಿ ಗಿರಿ; ಎಲ್ಲೆಲ್ಲಿ ನೋಡಿದರೆ
ಅಲ್ಲಲ್ಲಿ ತಂಪೆರಚುವುಪವನಗಳು.
ಬನ್ನಿ, ವಿಶ್ರಮಿಸಿಕೊಳಿ, ಬಳಲಿಕೆಯ ಹರಿಸಿಕೊಳಿ–
ಎಂದು ಅದೊ ಕರೆಯುತಿಹವು!
ತನ್ನಂತರಂಗವನು ತೆರೆದು ತೋರಿಸಿ ಬೆಳಗಿ
ತನ್ನ ನಲವನು ನಿಮಗೆ ಪುರವರುಹುವಂತಿರುವ
ಉರಿವ ದೀಪದ ಹಿರಿಯ ಬೀದಿ ಸಾಲು
ಸ್ವಾಗತವ ಬಯಸುತಿಹುದು!–ನಿಮಗಿದೋ
ಮೈಸೂರು ಬಯಸುತಿಹುದು!

೬

ಕನ್ನಡದ ಸೇವೆಯಲಿ ನುರುಗಿ ಹಣ್ಣಾದವರೆ,
ಹಿರಿಯ ಕನ್ನಡ ಧೀರರೇ,
ಕನ್ನಡದ ಮೇಲ್ಮೆಯಾ ಕನಸ ನನಸಾಗಿಸುವ
ತರುಣ ಕನ್ನಡ ವೀರರೇ,

೮೬

ಕನ್ನಡದ ಸೊಂಪು ಸವಿಯುಗುವ ರಸಕಾವ್ಯಗಳ
ಬರೆವ, ಬರೆಯಿಸುತಿರುವ ಸುಂದರಿಯರೇ,
ಆರ್ಯಮಹಿಳೆಯರೇ,
ಸ್ವಾಗತವು ನಿಮಗಿಂದು ಮೈಸೂರಿಗೆ!

೭

ನಾವೆಲ್ಲರೊಡಗೂಡಿ, ಒಡನಾಡಿ, ಕಲೆತು,
ಕನ್ನಡದ ಸೇವೆಯಲಿ ನಮ್ಮ ಮೈಮರೆತು,
ಕುಂದು ಕೊರತೆಗಳೊಂದಕಿಂಬಿಲ್ಲದಂತೆ,
ನಮ್ಮ ಸಖ್ಯದ ಮೊಗ್ಗು ಬಿರಿದರಳುವಂತೆ,
ದೇವಿ ಕರುಣಿಸಲಿ ವರವ!—ಕನ್ನಡದ
ದೇವಿ ಕೈಕೊಳಲಿ ಫಲವ!

೮

ಕನ್ನಡಿಗ ಸೋದರರೆ, ಸ್ವಾಗತವು ನಿಮಗೆ!
ಕನ್ನಡದ ಸಿರಿಬಳ್ಳಿ ಹೊಮ್ಮಿಸಿರುವರಳುಗಳೆ,
ಇಂದು ಸ್ವಾಗತವು ನಿಮಗೆ!—ನಿಮಗಾಗಿ
ಕಾದಿರುವ ಮೈಸೂರಿಗೆ!

ತೀ. ನಂ. ಶ್ರೀಕಂಠಯ್ಯ

೩. ಮೈಸೂರು ಮಕ್ಕಳು

ನಿಮ್ಮ ನಾಡಾವುದು?
ಮೈಸೂರು.
ನಿಮ್ಮೂರದಾವುದು?
ಮೈಸೂರು.
ಕನ್ನಡದ ಕಣ್ಣದು,
ಮೈಸೂರು.
ನಾಲುಮಡಿ ಕೃಷ್ಣನ
ಮೈಸೂರು.

ಅಲ್ಲೆಲ್ಲಿ ನೋಡಿದರು ಬಾನ ಕರೆಯಲಿ ಹುದುಗಿ ಕಾರಮುಗಿಲಂತಿಹುವ
ಬೆಟ್ಟ ಹಬ್ಬಿ;
ತೆರೆ ಎದ್ದು ಬಿದ್ದು ಬಹ ಬಯಲಲ್ಲಿ ಹಳ್ಳಿಗಳು, ತಾವರೆಯ ಕೆರೆ, ತೋಟ,
ಹೊಲದ ಹಸುರು;

ಕಾಡಿನಲಿ ನುಸಿಯುತ್ತ, ಕಲ್ಲಿನಲಿ ಮೊರೆಯುತ್ತ, ಮರಳಿನಲಿ ಸುಳಿಸುಳಿದು,
ಸರಿಯ ದುಮುಕಿ,
ಪಯಿರುಗಳ ಬದುಕಾಗಿ, ಹೊಳಲುಗಳ ಬೆಳಕಾಗಿ, ಕಣ್ಣುಗಳ ಬೆರಗಾಗಿ
ಹರಿವ ಹೊನಲು.
ಅಲ್ಲಿ ಅಲೆಯಲೆಯಾಗಿ ಬಂದು, ನೆಲೆ ನೆಲೆಯಾಗಿ ನಿಂದು, ಹಲತೆರದಿಂದ
ನುಡಿದು, ನಡೆದು,
ಕಡೆಗೆ ನಾಡೊಂದೆಂದು, ದೊರೆಯೊಬ್ಬ ನಮಗೆಂದು, ಬಾಳ ಬೆಲೆ ಹುದುವೆಂದು
ಕಲಿತು, ಕಲೆತು,
ಜಾಣಿನಲಿ, ಚಿಲುವಿನಲಿ, ಸೊಗಸಿನಲಿ, ನಯದಲೌದಾರ್ಯದಲಿ, ಕಾರ್ಯದಲಿ
ಕಳಶವೆನಿಸಿ,
ಮೆರೆಯುತಿಹ ಜನವ ನಾನೇನೆಂಬೆ, ಎಂತು ನಾ ಕನ್ನಡಿಗರೈಸಿರಿಯ
ಬಣ್ಣಿಸುವೆನು.

ಚಿನ್ನದ ನಾಡದು,
ಮೈಸೂರು.
ಗಂಧದ ಗುಡಿಯದು,
ಮೈಸೂರು.
ವೀಣೆಯ ಬೆಡಗದು,
ಮೈಸೂರು.
ನಾಲುಮಡಿ ಕೃಷ್ಣನ
ಮೈಸೂರು.

ಅಲ್ಲೊಬ್ಬ ನಮಗಿಹನು ನಾಯಕನು; ಭಕ್ತಿಯಲಿ ನಿಲುನಿಲುಕಿ ಕಣ್ತುಂಬ
ನೋಡುತಿರಲು,
ಆನೆಯಂಬಾರಿಯಲಿ ನಸುನಗೆಯನಿಕ್ಕೆಲಕೆ ಬೀರಿ, ಜನರಕ್ಕರೆಯನುಕ್ಕಿಸುವನು.
ಧೀರನಾತನು; ತುಂಬು ಗಾಂಭೀರ್ಯದಲಿ ಸತ್ಯವನೆ ಎತ್ತಿ ನಿಲಿಸುವನು
ಪ್ರಜೆಯ ತಂದೆ;
ಮರೆತು ತನ್ನನು ರಾಜ್ಯಸೇವೆಯಲಿ, ಸಲಿಸುವನು ಧರ್ಮವನು ರಾಜರ್ಷಿ
ಕರ್ಮಯೋಗಿ.
ಬನ್ನಿ ಕೆಳೆಯರ, ನಮ್ಮ ಬಾಳಿಕೆಯ ಕಾಣಿಕೆಯನೊಪ್ಪಿಸುವ, ಕೈಕೊಳುವ
ದೊರೆಯ ಗುರಿಯ;
ನೋಹಿಯಾತನದು – ತನ್ನರಮನೆಯ ಹಸಗೆಯ್ದು ಬೆಳಗಿದಂತೆಯೆ, ಬೆಳಗಿ
ಊರ, ನಾಡ,

ಹಸಗೆಯ್ವೆ, ಹೊಸಗೆಯ್ವೆನೆಂಬೊಲುಮೆ ; ನಾವೆಲ್ಲರಾ ನಾಯಕನ ದಳದಿ
ದೀಕ್ಷೆ ಪಡೆದು,
ಮಿಾರಿ ಬಳಸುವ ಬನ್ನಿ ಬುದ್ಧಿಯನು ಶ್ರದ್ಧೆಯನು, ಕನ್ನಡಿಗರೈಸಿರಿಯ
ಬೆಳೆಯ ಬೆಳಸಿ.

ಬೆಳೆಯುವ ನಾಡದು,
ಮೈಸೂರು.
ಇಳೆಯ ಮಾದರಿಯದು,
ಮೈಸೂರು.
ಕನ್ನ ಡಿಗನುಸಿರದು,
ಮೈಸೂರು.
ನಾಲುಮಡಿ ಕೃಷ್ಣನ
ಮೈಸೂರು.

ಶ್ರೀ

೪. ಸ್ವಾಗತ

(ಹೈದರಾಬಾದಿಗೆ)

ಈ ನಮ್ಮ ನಾಡಿಂಗೆ ಓಡಿಬನ್ನಿ,
ನಿಮ್ಮವರ ನೋಡಬನ್ನಿ.
ಕಕ್ಕುಲತೆಯಿಂದ ಮಾತಾಡಬನ್ನಿ,
ಎಮ್ಮೊಡನೆ ಕೂಡಬನ್ನಿ.

ತುಂಗನಾಳಿದ ತಿರುಳುಗನ್ನಡದ ನಾಡು,
ದಾಸರಿಂ ಪಾವನತೆಯೊಂದಿದೀ ನಾಡು,
ಇಕ್ಕೆಲದ ಸೆಳತಕ್ಕೆ ಸೀಳಾಗಿ ಪಾಡು
ವಿಂಗಡಿಸಿ ಹೇಗಾಗಿ ಹೋಗಿಹುದು ನೋಡು.

ಕಳೆದುದಕೆ ಅಳುತಳುತ ಕುಳಿತು ಫಲವೇನು?
ಮೊಳೆತಿರಲು ತನ್ನರಿವು ಸಾಲದೇನು?
ಮೊಳಕೆ ಕಮರದ ತೆರದಿ ಮಳೆಗರೆದು ನೀನು,
ಪಾಲಿಸೈ, ಲಾಲಿಸೈ, ಕೇಳಲಿನ್ನೇನು?

ಬಿಸಿಲ ಬೇಗೆಗೆ ಬೆಂದು ಬಾಡುತಿದೆ ನಾಡು
ಆಚಾರ್ಯ ನಿನಗೆ ಮರೆಹೊಗುತಲಿದೆ ಕಾಡು.
ಬೇಗ ಬಾ, ಬೇಗ ಬಾ, ಬಂದು ಕಾಪಾಡು.
ಶುಷ್ಕಹೃದಯಕೆ ತಂಪ– ಕಂಪ– ನೀಡು.

ಮುಂದಮಾರುತವಾಗಿ ತೇಲಿ ಬಾರೈ
ಹರಿವ ಹೊಳೆಯಾಗಿ ನೀ ಸಾಗಿ ಬಾರೈ
ಭೋಗರೆವ ಮಳೆಯಾಗಿ ಮೊರೆದು ಬಾರೈ
ನಿನಗೆ ಸುಸ್ವಾಗತವು ಗುರುವೆ ಬಾರೈ.

ಜೆ. ಕೆ. ಪ್ರಾಣೇಶಾಚಾರ್ಯ

೫. ಕನ್ನಡ ನುಡಿ

ಎನಿತು ಇನಿದು ಈ ಕನ್ನಡ ನುಡಿಯು
ಮನವನು ತಣಿಸುವ ಮೋಹನ ಸುಧೆಯು!

ಗಾನವ ಬೆರೆಯಿಸಿ
ವೀಣೆಯ ದನಿಯೊಳು
ವಾಣಿಯ ನೇವುರ
ನುಡಿಸುತೆ ಕುಣಿಯಲು
ಮಾಣದೆ ಮೆರೆಯುವ ಮಂಜುಲ ರವವೋ?
ಎನಿತು ಇನಿದು ಈ ಕನ್ನಡ ನುಡಿಯು!

ರಂಗನ ಮುರಲಿಯ
ಹಿಂಗದ ಸರದಲಿ
ಹೆಂಗಳೆಯರು ಬೆಳ
ದಿಂಗಳನಿರುಳಲಿ
ಸಂಗೀತವನೊರೆದಂಗವಿದೇನೋ?
ಎನಿತು ಇನಿದು ಈ ಕನ್ನಡ ನುಡಿಯು!

ಗಿಳಿಗಳು ಉಲಿಯುವ
ಮೆಲುಮಾತುಗಳೋ?
ಕಳಕಂಠಗಳಾ
ಚೆಲುವಿನ ಕುಕಿಲೋ?
ಅಳಿಗಳ ಬಳಗದ ಬೆಳಗಿನ ಉಲಿಯೋ?
ಎನಿತು ಇನಿದು ಈ ಕನ್ನಡ ನುಡಿಯು.

ಆನಂದಕಂದ
(ಕೃಷ್ಣಶರ್ಮ ಬೆಟಗೇರಿ)

೬. ಕನ್ನಡ

ತನ್ನದು ಎಂಬುದು ಎನಿಲ್ಲೆ
ಕನ್ನಡ ನುಡಿಯಲಿ ಹುರುಳಿಲ್ಲೆ? ॥ ಪ ॥

ಮಾನವ ಜಾತಿಯ ಜೀವಾಳ। ಭಾಷಾದೇವಿಯೊಳಿಲ್ಲೀನು ?
ಏನಿದು ? ಐಕ್ಯದ ನಿಜಬೀಜ। ತಾಯ್ನುಡಿಯೊಲವಿನೊಳಿಲ್ಲೀನು ?
ಉನ್ನತ ಸಂಸ್ಕೃತಿಯೊಳ ಬೆಳಸು । ಕನ್ನಡ ತಾಯಿಗೆ ಇಲ್ಲೀನು ?
ಜೀವಕೆ ಜೀವವ ಬೆರಸುತಿಹ
ಭಾವದ ಬೆಳಗನು ಬೀರುತಿಹ
ಸಾವಿಲ್ಲದೊಲವನುಣಿಸುತಿಹ
ತನ್ನಯ ಭಾಷೆಯೆ ತನಗಲ್ಲೆ ; । ಅಂತಹ ಭಾಷೆಯು ನಮಗಿಲ್ಲೆ ?
ನನ್ನೀ ಭಾಷೆಯ ನಂದನದಿ। ಸೊಗಸಿನ ಝರಿಗಳು ಹರಿದಿಲ್ಲೆ ?
ಕನ್ನಡದಿನಿನುಡಿಗಡಲೊಳಗೆ। ವಿದ್ಯೆಯ ನದಿಗಳು ಕೂಡಿಲ್ಲೆ ?
ಸನ್ನುತ ನಾಡಿನ ಗೂಡಿನಲಿ। ಧಾರ್ಮಿಕ ಶುಕಗಳು ಜನಿಸಿಲ್ಲೆ ?
ಕವಿಕೋಕಿಲಗಳು ಉಲಿದಿಲ್ಲೆ ?
ಸವಿಯರಸಂಚೆಯು ಚರಿಸಿಲ್ಲೆ ?
ನವ ಸಾಧುವೃಕ್ಷ ಮೊಳೆತಿಲ್ಲೆ ?
ನನ್ನಿಯ ಮೇಘವು ಕರೆದಿಲ್ಲೆ ? । ಬನ್ನದ ಬೀಜವು ಹುರಿದಿಲ್ಲೆ ?
ಗರ್ವದ ರಾವಣನಳಲಿಸಿದಾ। ಹನುಮಂತನಾವ ನುಡಿಗುಡಿಯು
ಪೂರ್ವದ ಹರ್ಷನ ಸೋಲಿಸಿದಾ। ಪುಲಿಕೇಶಿ ಯಾವ ನುಡಿಗುಡಿಯು
ಒರ್ವಳಿ ಶಿವರಾಜನ ತಡೆದಾ । ಮಲ್ಲವ್ವನಾವ ನುಡಿಗುಡಿಯು
ಕನ್ನಡಿಗರ ಕರವೀರರವು
ಕನ್ನಡಿಗರ ಶಿರಚದುರರವು
ಕನ್ನಡಿಗರ ಉರಭಕ್ತರವು
ಕನ್ನಡ ಕತ್ತುರಿ ಕಂಪಲ್ಲೆ ? । ಕನ್ನಡಿಗರ ಸಿರಿ ಮೆರೆದಿಲ್ಲೆ ?

ಹನುಮಂತ ಗೋವಿಂದ ಸೆಟ್ಟಿ

✓ ೭. ಕನ್ನಡ್ ಪದಗೊಳು

ಯೆಂಡ ಯೆಡ್ತಿ ಕನ್ನಡ್ ಪದಗೊಳ್
ಅಂದ್ರೆ ರತ್ನಂಗ್ ಪ್ರಾಣ!
ಬುಂಡೇನ್ ಎತ್ತಿ ಕುಡದ್ಬುಟ್ಟಾಂದ್ರೆ–
ತಕ್ಕೊ! ಪದಗೊಳ್ ಬಾಣ!
ಬಗವಂತ್ ಏನ್ರ ಭೂಮಿಗ್ ಇಳದು
ನನ್ತಾಕ್ ಬಂದಾಂತ್ ಅನ್ನು ;
ಪರ್‌ಗಿರೀಕ್ಸೆ ಮಾಡ್ತಾನ್ ಔನು–
ಬಕ್ತನ್ ಮೇಲ್ ಔನ್ ಕಣ್ಣು!

'ಯೆಂಡ ಕುಡಿಯಾದ್ ಬುಟ್‌ಬುಡ್ ರತ್ನ !'
ಅಂತ್ ಔನ್ ಏನಾರ್ ಅಂದ್ರೆ–
ಮೂಗ್ ಮೂರ್ ಚೂರಾಗ್ ಮುರಸ್ಕೋಂತೀನಿ
ದೇವರ್ ಮಾತ್ಗ್ ಅಡ್ಬಂದ್ರೆ !
ಯೆಂಡ ಬುಟ್ಟಿ ಯೆಡ್ತೀನ್ ಬುಟ್‌ಬುಡ್ !
ಅಂತ್ ಔನ್ ಏನಾರ್ ಅಂದ್ರೆ
ಕಳದೋಯ್ತ್ ಅಂತ ಕುಣದಾಡ್ತೀನಿ
ದೊಡ್ಡ್ ಒಂದ್ ಕಾಟ! ತೊಂದ್ರೆ !
'ಕನ್ನಡ್ ಪದಗೋಳ್ ಆಡೋದ್ನಿಲ್ಲ
ನಿಲ್ಲೀಸ್ ಬುಡಬೇಕ್ ರತ್ನ !'
ಅಂತ್ ಔನ್ ಅಂದ್ರೆ – ದೇವ್ರ ಆಜ್ಞ ಏನು !
ಮಾಡ್ತೀನ್ ಔನ್ಗ ಖತ್ನ !
ಆಗ್ನೆ ಮಾಡೋ ಐಗೊಳ್ ಎಲ್ಲಾ
ದೇವ್ರೆ ಆಗ್ಲಿ – ಎಲ್ಲ !
ಕನ್ನಡ್ ಸುದ್ದೀಗ್ ಏನ್ರ ಬಂದ್ರೆ
ಮಾನಾ ಉಳಸಾಕಿಲ್ಲ !
ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ–
ಮೂಗ್ನಲ್ ಕನ್ನಡ್ ಪದವಾಡ್ತೀನಿ !
ನನ್ನ ಮನಸನ್ನ ನೀ ಕಾಣೆ !
ಯೆಂಡ ಓಗ್ಲಿ ! ಯೆಡ್ತಿ ಓಗ್ಲಿ !
ಎಲ್ಲಾ ಕೊಚ್ಕೊಂಡ್ ಓಗ್ಲಿ !
ಪರ್ಪಂಚ್ ಇರೋತನಕ ಮುಂದೆ
ಕನ್ನಡ್ ಪದ್ಗೊಳ್ ನುಗ್ಲಿ !

ರತ್ನ
(ಜಿ.ಪಿ. ರಾಜರತ್ನಂ)

೮. ಕನ್ನಡಿಗನ ಕೊರಗು

ಸೊಕ್ಕಿನಲಿ ತಲೆಯತ್ತಿ ಜೊತೆಯವರ ಕೂಟದಲಿ,
ನಾವು ಸಮ ನಿಮಗೆಂದು ನುಡಿವ ಬಲವಿಲ್ಲ !
ಮಿಕ್ಕವರು ಕಡೆಗಣಿಸಿ ನೂಕಿದಾ ಕಡೆ ಬಿದ್ದು,

ಯಾವ ಮುಂಕೋ ಕವಿದು, ಹದುಗಿರುವೆವಲ್ಲ ?
ರೊಕ್ಕ ಕೈಯೊಳಗಿಲ್ಲ, ಹುರುಡು ಮೈಯೊಳಗಿಲ್ಲ,
ಹೆಮ್ಮೆಯೊಂದನು ನೆಚ್ಚಿ ದೆಸೆಗೆಟ್ಟಿವಲ್ಲ !
ಅಕ್ಕತಂಗಿಯರೆಲ್ಲ ಮುಂದು ಮುಂದಾಗಿರಲು
ನಮ್ಮ ತಾಯೊಬ್ಬಳೇ ಸೊರಗಿರುವಳಲ್ಲ !
ಅಮ್ಮನನು ಕೈಬಿಡದೆ ಇನ್ನು ಮೆರೆಸುವೆವೆ ?
ಹಿರಿಯ ಹೆಸರನು ತಿರುಗಿ ಗಳಿಸಿಕೊಳ್ಳುವೆವೆ ?
ಸರಿಯವರ ತಲೆಮೆಟ್ಟಿ ಮುಂದೆ ನಿಲ್ಲುವೆವೆ ?
ನೆಮ್ಮದಿಯ ಬೆಳಕಿನಲಿ ನಾವು ಬಾಳುವೆವೆ ?

ತೀ. ನಂ. ಶ್ರೀಕಂಠಯ್ಯ

೯. ರಕ್ಷಿಸು ಕರ್ಣಾಟಕ ದೇವಿ

ರಕ್ಷಿಸು ಕರ್ಣಾಟಕ ದೇವೀ, ಸಂ
ರಕ್ಷಿಸು ಕರ್ಣಾಟಕ ದೇವೀ ॥ ಪ ॥

ಕದಂಬಾದಿ ಸಂಪೂಜಿತ ಚರಣೆ
ಗಂಗಾರಾಧಿತ ಪದನಖ ಸರಣೆ
ಚಲುಕ್ಯರುತ್ತಮ ಕಾಂಚೀ ಕಿರಣೆ
ರಾಷ್ಟ್ರಕೂಟ ಮಣಿಕಂಠಾಭರಣೆ
ಚಾಲುಕ್ಯಾಂಶುಕ ಶೋಭಾವರಣೆ.

ಯಾದವಮಣಿ ಕಂಕಣಾಂಶು ಸುಂದರಿ
ಬಲ್ಲಾಳರ ಭುಜಭೂಷಣ ಬಂಧುರೆ
ವಿಜಯನಗರ ಮಂಗಲಮ್ಮಣಿ ಕಂಧರೆ
ಮೈಸೂರೊಡೆಯರ ಸುಕೀರ್ತಿಮಂದಿರೆ
ಮಾಂಡಲಿಕಾವನ ಭಾರಧುರಂಧರೆ.

ಮತ ಸುಸ್ಥಾಪಕ ಸ್ಥಾಪಿತಪ್ರಾಣೆ
ಶಿಲ್ಪಕಲಾಮಂಟಪ ಸುಸ್ಥಾನೆ
ಕವಿಜನ ಕೀರ್ತಿತ ಸುಯಶಸ್ತ್ರಾಣೆ
ಸಾಧು ಸತ್ಕಥಾ ಭೇರೀಧ್ವಾನೆ
ಸ್ವೈತಿಹಾಸನೀರಾಜನ ರಾಣಿ.

ಶಾಂತಕವಿ

೧೦. ಕನ್ನಡಿಗರ ತಾಯಿ

ತಾಯೆ ಬಾರ, ಮೊಗವ ತೋರ, ಕನ್ನ ಡಿಗರ ಮಾತೆಯೆ!
ಹರಸು ತಾಯೆ, ಸುತರ ಕಾಯೆ, ನಮ್ಮ ಜನ್ಮದಾತೆಯೆ!
ನಮ್ಮ ತಪ್ಪನೆನಿತೊ ತಾಳ್ವೆ,
ಅಕ್ಕರೆಯಿಂದೆಮ್ಮನಾಳ್ವೆ;
ನೀನೆ ಕಣ್ ನಮ್ಮ ಬಾಳ್ವೆ,
ನಿನ್ನ ಕರೆಯಲಮ್ಮೆವು–
ತನು ಕನ್ನ ಡ, ಮನ ಕನ್ನ ಡ, ನುಡಿ ಕನ್ನ ಡವೆಮ್ಮವು.

ಹಣ್ಣನೀವ ಕಾಯನೀವ ಪರಿಪರಿಯ ಮರಂಗಳೊ,
ಪತ್ರಮಿವ ಪುಷ್ಪಮಿವ ಲತೆಯ ತರತರಂಗಳೊ,
ತೆನೆಯ ಕೆನೆಯ ಗಾಳಿಯೊ,
ಖಗಮೃಗೋರಗಾಳಿಯೊ,
ನದಿ ನಗರನಗಾಳಿಯೊ!
ಇಲ್ಲಿಲ್ಲದುದುಳಿದುದೆ?–
ಜೇನು ಸುರಿವ ಹಾಲು ಹರಿವ ದಿವಂ ಭೂಮಿಗಿಳಿದುದೆ?

ಬುಗರಿಯಾಯೆ ಶಬರಿ ಕಾಯೆ ರಾಮನಿಲ್ಲಿ ಬಂದನೆ?
ಕನ್ನ ಡದಳ ಕೂಡಿಸಿ ಖಳ ದಶಾಸ್ಯನಂ ಕೊಂದನೆ?
ಪಾಂಡವರಜ್ಞಾತಮಿದ್ದ,
ವಲಲಂ ಕೀಚಕನ ಗೆದ್ದ,
ಕುರುಕುಲ ಮುಂಗದನಮೆದ್ದ
ನಾಡು ನೋಡಿದಲ್ಲವೇ?
ನಂದನಂದನನಿಲ್ಲಿಂದ ಸಂದಿಗಯ್ದನಲ್ಲವೇ?

ಶಕವಿಜೇತನಮರ ಶಾತವಾಹನಾಖ್ಯನೀ ಶಕಂ
ನಿನ್ನೊಳಂದು ತೊಡಗಿ ಸಂದುದರ್ಧ ಭರತದೇಶಕಂ!
ಚಳುಕ್ಯ ರಾಷ್ಟ್ರಕೂಟರೆಲ್ಲಿ,
ಗಂಗರಾ ಕದಂಬರೆಲ್ಲಿ,
ಹೊಯ್ಸಳ ಕಳಚುರ್ಯರೆಲ್ಲಿ,
ವಿಜಯನಗರ ಭೂಪರು
ಆಳ್ದರಿಲ್ಲಿಯಲ್ಲದಿಲ್ಲಿ ತಾಯೇ ಮೆಣಲೂಪರು?

ಜೈನರಾದ ಪೂಜ್ಯಸಾದ ಕೊಂಡಕುಂದವರ್ಯರ,
ಮಧ್ವಯತಿಯೆ ಬಸವಪತಿಯೆ ಮುಖ್ಯಮುತಾಚಾರ್ಯರ,
ಶರ್ವ ಪಂಪ ರನ್ನರ,
ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣ್ಣರ,
ಪುರಂದರವರೇಣ್ಯರ
ತಾಯೆ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ!

ಹಳೆಯಬೀಡ ಬೇಲನಾಡ ಮಾಡಮೆನಿತೊ ಸುಂದರಂ!
ಬಿಳಿಯ ಕೊಳದ ಕಾರಕಳದ ನಿಡುಕರೆನಿತೊ ಬಂಧುರಂ!
ಇಲ್ಲಿಲ್ಲದ ಶಿಲ್ಪವಿಲ್ಲ;
ನಿನ್ನ ಕಲ್ಲೆ ನುಡಿವುದಲ್ಲ!
ಹಿಂಗತೆಯಿನಿವಾಲ ಸೊಲ್ಲ
ನೆಮ್ಮ ತೃಷೆಗೆ ದಕ್ಕಿಸು–
ಹೊಸತು ಕಿನ್ನರಿಯಲಿ ನಿನ್ನ ಹಳೆಯ ಹಾಡನುಕ್ಕಿಸು!

ಆರ್ಯರಿಲ್ಲಿ ಬಾರದಲ್ಲಿ ಬಾಸೆ ಎಲ್ಲಿ ಸಕ್ಕದಂ?
ನಿನ್ನ ನುಡಿಯಿನಚ್ಚು ಪಡಿಯನಾಂತರೆನಿತೊ ತಕ್ಕುದಂ!
ಎನಿತೊ ಹಳೆಯ ಕಾಲದಿಂದ
ಬರ್ದಿಲನಿಸಾ ಬಾಸೆಯಿಂದ
ಕಾಲನ ಮೂದಲಿಸಿ ನಿಂದ
ನಿನಗೆ ಮರವೆ ಹೊದೆವುದೆ?
ನಿನ್ನ ನುಡಿಗೆ ನಿನ್ನ ನಡೆಗೆ ಮುದುಪುಮೆಂದುಮೊದೆವುದೆ?

ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು ಪರರ ನುಡಿಗೆ ಮಿಡುಕುವ!
ಕನ್ನಡ ಕಸ್ತೂರಿಯನ್ನ
ಹೊಸತುಸಿರಿಂ ತೀಡದನ್ನ
ಸುರಭಿ ಎಲ್ಲಿ? ನೀನದನ್ನ
ನವಶಕ್ತಿಯನೆಬ್ಬಿಸು–
ಹೊಸ ಸುಗಂದದೊಸಗೆಯಿಂದ ಜಗದಿ ಹಸುರ ಹಬ್ಬಿಸು!

ನಿನ್ನ ಪಡೆಯ ಕತೆಯ ಕಡೆಯ ನುಡಿಯೆ ತಾಳಕೋಟಿಯು?
ಕಡಲಿನೊರತೆಗೊಳವೆ ಕೊರತೆ? ಬತ್ತದು ನಿನ್ನೂಟಿಯು!
ಸೋಲ ಗೆಲ್ಲವಾರಿಗಿಲ್ಲ?
ಸೋತು ನೀನೆ ಗೆದ್ದೆಯಲ್ಲ?
ನಿನ್ನ ನಳವು ತಟ್ಟಲೊಲ್ಲ!–
ತಾಳಿಕೋಟಿ ಸಾಸಿರಂ
ಬಾಹುಬಲದಿ ಮನೋಬಲದಿ ತಾಯೆ ಗೆಲುವೆ ಭಾಸುರಂ!

ಕುಗ್ಗದಂತೆ ಹಿಗ್ಗಿಪಂತೆ ನಿನ್ನ ಹೆಸರ ಟಕ್ಕೆಯಂ,
ನೀಗವಂತೆ ಸಾಗಿಪಂತೆ ನಿನ್ನ ನುಡಿಯ ಢಕ್ಕೆಯಂ,
ನಮ್ಮೆದೆಯಂ ತಾಯೆ ಬಲಿಸು,
ಎಲ್ಲರ ಬಾಯಲ್ಲಿ ನೆಲಸು,
ನಮ್ಮ ಮನಮನೊಂದೆ ಕಲಸು!
ಇದನೊಂದನೆ ಕೋರುವೆ–
ನಿನ್ನ ಮೂರ್ತಿ ಜಗತ್ತೀರ್ತಿ ಎಂದಿಗೆಮಗೆ ತೋರುವೆ?

ಮುಂ. ಗೋವಿಂದ ಪೈ

೧೧. ತುಳುನಾಡ ರಾಣಿ

ಕೊಡಲಿ ರಾಮನ ಸಿಡಿಲಿಗಳುಕಿ ಹಿಂದೋಡಿ
ಕಡಲಾರೆ,– ನೀನಲೆಗಳನ್ನೊಡೆದು ಮೂಡಿ,–
ಪಡೆದ ಶಾಸನದಾವೆ ತುಳುನಾಡ ರಾಣಿ!
ಬೆಡಗಿಂದ ಧರೆಗಾವೆ ಕೊರಳ ಕಟ್ಟಾಣಿ!

ಗಟ್ಟಿಗಳ ಮೆಟ್ಟಲಿನ ಅಟ್ಟಳಿಗೆ ಏರಿ,
ಸಾಟಿ ಇರದೊಡ್ಡೋಲಗದ ಸೊಬಗು ಸಿಂಗಾರಿ,
ಅಟ್ಟಹಾಸದ ಕಡಲು ಕಾಲ್ ತೊಳೆಯುತಿರಲು,
ಒಟ್ಟರಿಸಿದಾ ಪುಣ್ಯರಜ ಎನಿಸೆ ಮಳಲು–

ಮಳೆ ಮುಗಿಲ ವೇಣಿಯಲಿ, ಮಳಿಬಿಲ್ಲ ಹಾರಂ,
ತಿಳಿಯ ಬೆಳದಿಂಗಳಿನ ಕವಚ ಸಿಂಗಾರಂ,
ಹೊಲದ ಹಸುರುಡಿಗೆ, ನೇತ್ರಾವತಿಯ ಮಾಲೆ–
ಮುಲೆಗಾಳಿ ಸಾರುತಿಹುದಿಂತು ತವಲೀಲೆ.

ದುಡುಕಿದಾ ಸೂರೆಗರ ಹಾವಳಿಗೆ ನೊಂದೆ!
ಕಡಲಣುಗೆ! ಬಡವಾದೆ ಕಾವರಿಲ್ಲೆಂದೆ!
ಪಡುಗಡಲ ದಾಟಿ ಸೋದರಿಯೊದಗೆ ಮುನ್ನಾ
ಕೆಡುಗಾಲ ಅಡಗಿ ಬೀಸಿತು ಶಾಂತಿ ಪವನಾ.

ತಲೆದೂಗೆ ತೆಂಗು, ನೇಗಿಲು ನಗಲು, ಹೊಳೆಯು
ಸುಳಿದೋಡೆ, ತಲೆ ಎತ್ತಿ ಕಂಗೊಳಿಸೆ ಬೆಳೆಯು,
ಮಳಿಗೆ ತಕ್ಕಡಿ ಕುಣಿಯೆ, ಶಂಖ ದೇಗುಲದಿ
ಮೊಳಗೆ, ಮನೆ ಮಕ್ಕಳಿಂದುಲಿಯೆ ಗದ್ದಲದಿ –
ಮೆರೆಯಲಿಂತಾಂಗ್ಲೇಯರೊಡೆತನದಿ ನಾಡು!
ಪರಮೇಶನೊಲುಮೆಯಿಂ; ಶಾಂತಿಗಿದು ಬೀಡು!
ಬರಲೆಮಗೆ ಜನ್ಮ ನಿನ್ನುದರದಲಿ, ತಾಯೆ!
ದೊರೆಯಲೆಮಗನುದಿನವು ನಿನ್ನಡಿಯ ಸೇವೆ!

ಎಂ. ಎನ್. ಕಾಮತ್

೧೨. ಕನ್ನಡನಾಡ ರಾಣಿ

ಏಳು ಶೂರರ ಖಣೀ ಏಳು ಶೂರರ ರಾಣಿ
ಏಳು ತೀರದ ವೀರರಸದ ವಾಣಿ
ಏಳು ಮಿಾರಿದ ಜಾನಿ ಏಳು ಈ ಸ್ಥಿತಿಗಾಣಿ
ಏಳು ವರವರದ ಪಾಣಿ.

ಶೂರಪುರುಷರ ಕೊನೆಯು ವೀರಕವಿಗಳ ಗೊನೆಯು
ಭೀರುತನವೆಂಬ ಶಲ್ಯಕ್ಕೆ ಮೊನೆಯು
ಧೀರ ಸತಿಯರ ತೆನೆಯು ವೀರರಸಗಳ ಸೊನೆಯು
ಈ ರೀತಿ ನಿನ್ನ ಮನೆಯು.

ಭರದೆ ಬೆಳೆಯುವ ಬೆಳೆಯು ತ್ವರದೆ ಹರಿಯುವ ಹೊಳೆಯು
ಇರದೆ ಪ್ರತಿಕಾಲಕ್ಕೆ ಬರುವ ಮಳೆಯು
ವರಲಕ್ಷಣದ ಕಳೆಯು ಸುರರ ಸೀಮೆಯ ಬೆಳೆಯು
ಇರುವಂಥ ನಿನ್ನ ಇಳೆಯು.

ಸತ್ತಿರುವುದೆದೆ ಸೇರು ಸುತ್ತಿರುವ ವಿಷ ಹೀರು
ಬತ್ತಿರುವುದಮೃತ ಝರಿ ಮತ್ತೆ ತೋರು
ಸತ್ತುಳ್ಳ ನೂರಾರು ಬಿತ್ತುಗಳ ನೀನೂರು
ಕಿತ್ತು ಭಯಬಿಟ್ಟ ಬೇರು.

ಅಂದಿನಂತಹ ಧನವು ಅಂದಿನಂತಹ ತನುವು
ಅಂದಿನಂತವರ ಹಿರಿದಾದ ಮನವು
ಅಂದೆ ಅಂದಿನತನವು ಚಂದದಾಟಕೆ ಅನುವು
ಎಂದು ತಂದೀತು ದಿನವು!

ನೀನು ನೆಲಸಿದ ಕಾಡು ಮಾನಿಸುವರೌ ನಾಡು
ಧ್ಯಾನಿಸುವರೈ ನಿನ್ನ ಹಾಡಿ ಹಾಡು
ಈ ನಾಡಿನೊಳು ಮಾಡು ಪ್ರಾಣಪುತ್ರರ ಬೀಡು
ಏನು ನಂದನದ ಪಾಡು !

ಅಂಬಿಕಾತನಯದತ್ತ
(ಪ. ರಾ. ಬೇಂದ್ರೆ)

೧೩. ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು

(ರಾಗ: ಬಾಗೇಶ್ರೀ; ತಾಳ: ಝಂಪೆ)

ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು
ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು ॥ ಪ ॥

ರಾಜನ್ಯರಿಪು ಪರಶುಧರನ ಜನನಿಯ ನಾಡು
ಆ ಜಲಧಿಯನೆ ಜಿಗಿವ ಹನುಮನುದಿಸಿದ ನಾಡು
ಓಜೆಯಿಂ ವಿಹರಿದರಸುಗಳ ಸಾಸದ ನಾಡು
ತೇಜವನು ನಮಗೀವ ವೀರವೃಂದದ ಬೀಡು

ಲೆಕ್ಕಿಗ ಮಿತಾಕ್ಷರರು ಬೆಳೆದು ಮೆರೆದಿಹ ನಾಡು
ಜಕ್ಕಣನ ಶಿಲ್ಪಿಕಲೆಯಚ್ಚರಿಯ ಕರುನಾಡು
ಚೊಕ್ಕ ಮತಗಳ ಸಾರಿದವರಿಗಿದು ನೆಲೆವೀಡು
ಬೊಕ್ಕಸದ ಕಣಜ ಜಯಸಿರಿಯು ನಲಿಯುವ ನಾಡು

ಪಾವನೆಯರಾ ಕೃಷ್ಣೆ ಭೀಮೆಯರ ತಾಯ್ನಾಡು
ಕಾವೇರಿ ಗೋದೆಯರು ಮೈದೊಳೆವ ನಲುನಾಡು
ಅವಗಂ ಬಗೆಯ ನಗಿಸುವ ಕಬ್ಬಿಗರ ಹಾಡು
ಕಾವ ಗದುಗಿನ ವೀರನಾರಾಯಣನ ಬೀಡು

ಹುಯಿಲಗೋಳ ನಾರಾಯಣರಾಯರು

೧೪. ಅರುಣೋದಯ

ಕನ್ನಡ ನಾಡಿನ ಮುಂಬಾನೊಳು ಚೆಂ-
ಬಣ್ಣವ ಬೆಳಕು ಇಡೇತರದು ?
ಹೊನ್ನಗದಿರ ಬರಲಿಹನೆಂದೊರೆಯಲು
ಮುನ್ನವೆ ಬಂದರುಣನದೆ ಇದು ?
ನನ್ನಿಯು ! ನಿಜ ! ಅರುಣನದೆ ಇದು !

ಛಲೆ ಛಲೆ! ನಮ್ಮಯ ಬಳಿಯಿಹ ಬಾನೊಳೆ
ತೊಳಗುವ ನೇಸರು ಮೂಡುವನು,
ಹೊಳೆಯುವ ಕೈಗಳನೆಳೆದೆಲ್ಲೆಡೆಯಲಿ
ಬೆಳಕು ಬೆಳಕನೇ ಮಾಡುವನು;
ಹೊಳಪನು ಎಲ್ಲಕೆ ನೀಡುವನು.

ಬೆಳಕನು ಮಾಡಲು ಕಳೆದುಹೋಗದೆಯೆ
ಉಳಿಯುವುದೇ ಕೊಳೆಗತ್ತಲೆಯು?
ಮಲಗಿದ ಕನ್ನಡದೆಳೆಯರು ಏಳುತೆ
ಸುಳಿದಾಡುವ! ಎತ್ತೆತ್ತಲೆಯು;
ನಲಿದಾಡುವ! ಎತ್ತೆತ್ತಲೆಯು.

ಮಿರುಗುವ ಕಿರಣವ ಹರಡುತ ನೇಸರು
ನಡುಬಾನಿಗೆ ತಾನೇರುವನು,
ಬಿರಿಮುಗುಳೆಲ್ಲವನರಳಿಸಿ ಹುರುಳನು
ಹವೆಯೊಳಗೆಲ್ಲಿಯು ತೂರುವನು,
ಅವನಿಗೆ ಕಂಪನು ಬೀರುವನು.

ಕನ್ನಡ ನಾಡಿನ ಗುಡಿಗಳಸಕೆ ಹೊಸ-
ಬಣ್ಣವನೀತನು ಹಾಕುವನು,
ಹೊನ್ನಿನ ಕಿರಣದ ಹಂದರ ಬಿಗಿಯುತೆ
ಕನ್ನಡಿಗರನಲ್ಲಿರಿಸುವನು,
ಎಲ್ಲರ ಎದೆಗಳ ಬೆರಸುವನು.

ಭಯವೇತರದಾವಾಗ ನಮಗೆ? ನಿ-
ರ್ಭಯರು! ನೆರೆದು ಕುಣಿ-ಕುಣಿದಾಡಿ,
'ಜಯ ಜಯ ಜಯ ಕರ್ನಾಟಕ' ಎನ್ನುತೆ
ಹಾಡುವ ನಾವೆಲ್ಲರು ಕೂಡಿ;
ಕೂಗುವ ನಾವೆಲ್ಲರು ಕೂಡಿ.

ಕನಸಿನೊಳಗೆ ಕಣ್ಮುಚ್ಚಿಯೆ ನೋಡಿದ
ಇನಿನೋಟದ ಪಟಗಳ ಬರೆದು,
ನನಸಿನಲಿಯು ಕಾಣುವ ತೆರಮಾಡುತೆ
ಜನಕಚ್ಚರಿ ತೋರುವ! ನೆರೆದು
ಬೆರಗನುಗೊಳಿಸುವ ನಾವ್ ಬೆರೆದು.

ಕೇಳಿರಿ ಕೇಳಿರಿ ಕೋಳಿಯ ಕೂಗನು
ಕೇಳಿಸುವುದೆ ಬೆಳಗಿನ ಕಾಳಿ?
'ಏಳೈ ಕನ್ನಡ ಭಾಗ್ಯವಿಧಾತನೆ'
ಎನುತೆ ಹಾಡುತಿಹ ವೈತಾಳಿ;
ಸುಳಿಯುತಿಹುದು ನಸುಕಿನ ಗಾಳಿ;
ಅಲಸಿಕೆಯುಳಿದೆಲ್ಲರು ಏಳಿ!

ಆನಂದಕಂದ
(ಕೃಷ್ಣಶರ್ಮ ಬಿಟಗೇರಿ)

೧೫. ನಾಡಿನ ಹಾಡು

ತಾರೆಗಳು ಮೇಳವಿಸಿ ಬಂದು ಬಿಟ್ಟಹ ಬೀಡು ನಮ್ಮ ಕನ್ನಡದ ನಾಡು
ತಾರೆಗಳ ಒಡಪುಟ್ಟು, ತಾರೆಗಳ ಒಡನಾಡಿ, ನಮ್ಮ ಕನ್ನಡದ ಹಾಡು.
ಭೂಪತಿಯು ಕವಿಯಾಗಿ ಕವಿ ಚಮೂಪತಿಯಾಗಿ ಮೆರೆದಿರುವ ನಮ್ಮ ನಾಡು,
ಪತಿಯಿಲ್ಲದವಳಂತೆ ಗತಿಯಿಲ್ಲದಾಗಿಹುದು, ಹೀನವಾಗಿಹುದು ನೋಡು!
ಧವಲಗಿರಿ ಗಂಗೆಯನು ಆಮಂತ್ರಿಸಲು ನಡೆದ ನಮ್ಮ ಕನ್ನಡದ ತಾಯಿ
ಕಳೆದುಕೊಂಡಿಹಳಿಂದು ಕೃಷ್ಣೆಗಿಹ ಸೌಹಾರ್ದವನ್ನು ಸಹ, ಇಲ್ಲ ಬಾಯಿ!
ಸಾಮ್ರಾಜ್ಯಗಳನಾಳಿ ಮೆಯ್ಯುಂಡ ಕನ್ನಡರು ಹೆಸರಾದ ಸಾಹಸಿಗರು–
ಕೊಳೆಯುತಿಹರಲ್ಲೀನೋ! ಅಲ್ಲಲ್ಲಿ ಈಗಾಗಿ ಹೊರಮನೆಯ ಬಾಣಸಿಗರು!

ಸುಲಿದ ಹಣ್ಣಂತೆ ಮಧುಮಧುರವಾಗಿಪ ನುಡಿಯು ಸುಲಿದ ಹೆಣ್ಣಿಹುದು ನೋಡು
ಸಲಿಗೆಯನು ಬೆಳೆಸುತ್ತ ಸುಲಿಗೆಯನು ಮಾಡಿದರು ಕನ್ನಡಕೆ ಬಂತು ಕೇಡು!
ಗ್ರೀಷ್ಮಕಿಹ ಮುಂಬೆಳಗು ಸಹ ತೋರುತಿಹುದೀಗ ಮುಂಗಾರ ಸಂಜೆಯಂತೆ.
ಭೀಷ್ಮರಂತಹ ಸುತರ ತಾಯಿ ಚಿಂತೆಯಲಿಹಳು ವಿಧವೆಯಿಹ ಬಂಜೆಯಂತೆ.
ಚಿಂತೆಯಾ ಬೆಂತರವು ಬೇಡವ್ವ ನಲ್ವಾಯಿ! ಈ ನಿನ್ನ ಅಧರದಲ್ಲಿ,
ಮುತ್ತೊಂದು ಕಾಣುವುದು ದೇವನಿತ್ತಿಹುದಿಂದು ಮತ್ತೆ ನಿನ್ನುದರದಲ್ಲಿ.
ಬೆಳಗುವುದು ಹೊಸಹುಟ್ಟು, ಬರಲಿಹನು ಸುಕುಮಾರ, ಬರಲಿಹನು
ಪರಮಪುರುಷ!

ಪುಲಕೇಶಿ ಮಾಧವರ ಬರವಿನಂತಾದೀತು ಮತ್ತಿನ್ನು ನಿನ್ನ ಹರುಷ!
ಅವನೊಂದು ಹೆಜ್ಜೆಯದು ಬಿಜ್ಜೆ, ಪದ ಸಂಪದವು, ಇನ್ನೊಂದು ಮುಕ್ತಿಪದವು!
ಒಂದಡಿಯು ಬಿಡುಗಡೆಯು, ಇನ್ನೊಂದು ಹತ್ತುಗಡೆ– ಇಂತಿಹುದು
ಅವನ ಒದವು!
"ಕಣ್ಗೆ ಕಾಮನ ರಕ್ಷಿ, ಬೆನ್ಗೆ ಭೀಮನ ರಕ್ಷಿ, ಮುಂಗೈ ಮುರಾರಿ ರಕ್ಷಿ"
ಎಂದು ಸಂತಸವುಕ್ಕಿ ಒರೆಯುತಿದೆ ಹಾಲಕ್ಕಿ, ಹೇಳುವೆನು ನಿನ್ನ ಸಾಕ್ಷಿ!

ನಿನ್ನ ಬೇಸರ ಬೇನೆ ಬಲು ಹಿರಿದು ನಲ್ದಾಯಿ! ಪಡೆವ ಫಲವದಕು ಹಿರಿದು.
ಬಾಳೋಣ ಏಳೆನ್ನು ! ಅರಸಾಗಿ ಆಳೋಣ! ಮುನೆಮುರುಕರನ್ನು ಮುರಿದು !
ನಿನ್ನ ನಗೆಯೇ ಬೆಳ್ಳಿ, ನಿನ್ನ ಮೊಗ ಚಂದ್ರಮನು, ನಿನ್ನ ಮಗ ಸೂರ್ಯನಿರಲಿ!
ನಿನ್ನವರನುದ್ಧರಿಸಿ ಮನುವಂಶವನು ಹರಿಸಿ ಬೆಳಗುತಿಹ ಆರ್ಯನಿರಲಿ!

ವಿನಾಯಕ

(ಪಿ. ಕೆ. ಗೋಕಾಕ್)

೧೬. ಕಾರ್ಗಾಲದ ವೈಭವ

ಪಡುವಣತೀರದ
ಕನ್ನಡ ನಾಡಿನ
ಕಾರ್ಗಾಲದ ವೈಭವವೇನು?
ಚೆಲ್ಲಿದರನಿತೂ
ತೀರದ ನೀರಿನ
ಜಡದೇಹದ ಕರ್ಮುಗಿಲೇನು?

ಕೆರೆಗಳನುಕ್ಕಿಸಿ
ತೊರೆಗಳ ಸೊಕ್ಕಿಸಿ
ಗುಡ್ಡವ ಬೆಟ್ಟವ ಕೊರೆಕೊರೆದು
ಕಡಲಿನ ತೆರೆಗಳ
ರಿಂಗಣ ಗುಣಿಯಿಸಿ
ಮೊರೆ ಮೊರೆವುದದೊ ಸರಿಸುತಿದು.

ಕುದುರೆಮೊಗದ ಕಡಿ-
ವಾಣದ ತೆರದಲಿ
ಮಿಂಚುಗಳವು ಥಳಥಳಿಸುವುವು.
ಗೊರಸಿನ ಘಟ್ಟನೆ
ಯಂತಿರೆ ಥಟ್ಟನೆ
ಗುಡುಗುಗಳವು ಗುಡುಗಾಡಿಪುವು.

ಆವೇಶದ ವೇ
ಷವ ಬಿರುಸುಟ್ಟುರೆ
ಊರೂರಲಿ ಹಾರೋಡುವುದು
ಮರಗಳ ಕೀಳುತ
ಬಂಡೆಯ ಹೋಳುತ
ಜಗಜಟ್ಟಿಯ ತೆರನಾಡುವುದು.

ಹಗಲಿರುಳೆನ್ನದೆ
ಹೊಡೆಯುವ ಜಡಿಮಳೆ
ಬಡಿಕೋಲ್ಮಿಂಚಿನ ಲಾಗುಗಳು
ಮನೆಗಳ ಮನಗಳ
ಒಳಗೂ ಹೊರಗೂ
ಜಿನುಗುತಿರುವ ಹನಿಸೋನೆಗಳು.

ಮುಗಿಲಿನ ಹುಬ್ಬಿನ
ಗಂಟಿಕ್ಕುತ ಬಿರು
ದನಿಯಲಿ ಬೆದರಿಸುತಿಹನಲ್ಲ
ನಲ್ಲನೆನುತೆ ಆ
ಗಸವೆಣ್ಣೂಗುತೆ
ಸುರಿಸದ ಕಣ್ಣೀರ್ಹೊನಲೆಲ್ಲ.

ಕ. ಶಂಕರಭಟ್ಟ

✓೧೭. ಹೈದರಾಬಾದು

ಸರಸರನೆ ಸರಿಸರಿದು ನೆರೆಯೆದ್ದು ತೆರೆಬಿದ್ದು ಸುಳಿ ಸುಳಿಯುತಿದೆ ಮಾಸಿ
ಹೊನಲು
ಇಕ್ಕೆಲದೆ ಪವಡಿಸಿದೆ ಕಣ್ಣಿಲಿಗೆ ಸಿಲ್ಕುವೆಯೆ ಬಿತ್ತರದಿ ಹೈದರಾಬಾದು.
ಇಂತೆಂದು ತನ್ನೆರೆಯನೊಂದೆದೆಯ ವೈಶಾಲ್ಯವೆಂಬುದನು ಉಗ್ಗಡಿಪ ತೆರದಿ
ಬಾನ್ವುದಿಯ ಮುದ್ದಿಡುವ ಸೌಧಾಳಿ ಸಾರುತಿದೆ ದೊರೆಯೈಸಿರಿಯ ಪರಿ
ಪರಿಯಲಿ
ರಾಜ್ಯಾಧಿದೇವತೆಯ ಕರುವಾಡದಂದದಲಿ ಬಿಮ್ಮನಿದೆ ಚಾರುವಿಮಾನಾರು
ನಾಡ ಸಿರಿವೆಣ್ಣಿಲ್ಲಿ ಹಗಲಿರುಳು ಎಳನಗೆಯರಳು ಸೂಸಿ ನಲಿ ನಲಿಯುತಿಹಳು
ಆಗಸದಿ ನೇಸರನು ಬಳಸಿರುವ ಗರಗಳೆನೆ ಹೊಳಲ ಸುತ್ತಲಿವೆ ತುಂಬುಕೆರೆ
ಬೀದಿಯಿತ್ತಂಡದಲಿ ಸಾಲ್ಗೊಂಡ ವೃಕ್ಷಗಳು ತಣ್ಣೆಳಲುಗಳನೆರಚುತಲಿವೆ
ತಾರಗೆಗಳಂದದಲಿ ಬೆಳಕುಗಳು ಇರುಳಿನೊಳು ಬಾಂದಳವ ನೆರೆವೆಗ್ಗಳಿಸಿವೆ
ಸಿಂಗರದ ಸದನಂಗಳೋರಣದಿ ಚೆಂದಳಿರ ಚಮನುಗಳ ಮಾಲೆಯಲಿ ಭರದಿ
ಪರಿದಾಡುತಿಪ ವಾಹನಗಳೋಟದಲಿ ನೋಟದಲಿ ರಂಜಿಸಿದೆ ರಾಜಧಾನಿ
ಹೊಳಲೊಡತಿಯೊಡಲೊಳಗಿರುವುದೇಂ?
ಆಡಳಿತ ಕೊರತೆಗೆಡೆಯಾಗದಂದದಿ ನಡೆಪ ಮಂತ್ರಿಮಂಡಲವು
ಪ್ರಭುವಿನಾಣತಿಗೆ ತಲೆವಾಗುತಲಿ ಪ್ರಜೆಗಳೊಲುಮೆಯನಾಂತಿರುವುದು
ಮನ್ನೆಯರ ಹೆಕ್ಕಳಿಕೆ ವಂಶಪೌನ್ನತ್ಯದಗ್ಗಳಿಕೆ ಬೀರುತಿದೆ

ರಾಜನಿಷ್ಠೆಯಲಿ ಭಕ್ತಿಯಲಿ ವಿನಯದಲಿ ಸರಿದೊರೆಯಿಲ್ಲವರಿಗೆ
ಸಾಮಂತರೋಳಿಯಲಿ ಕವಿಗಮಕಿ ವಾಗ್ಮಿಗಳ ಗಡಣದಲಿ ನೆರೆದು
ಸೊಡರುಗಳ ಸಡಗರದಿ ಗುಡಿಗಳಿಟ್ಟಣದಿ ಮರೆಯುತಿದೆಯೋಲಗವು
ಒಮ್ಮನದಿ ಕಲೆತಿಹರು ವಿಧ ವಿಧದ ಭಾಷೆಗಳನಾಡುತಿಹ ಜನರು
ಕನ್ನಡ ತೆನುಗು ಮರಾಠಿ ನುಡಿಗಳು ಬೆಳೆದಿಲ್ಲಿ ಬಲಗೊಂಡಿರುವುವು
ಬೆಂಗಾಡ ಮಂಗಳವ ಮಸಗಿದುಸ್ಥಾನಿಯಾ ವಿದ್ಯಾನಿಲಯವು
ವಾಣಿಗಾಡುಂಬೊಲವು ಭಾರತದಿ ತಾಯ್ನುಡಿಗಿದುವೆ ಮಾದಲ ತವರು

ಚಿತ್ರದ ಬೆಸನದು
ಹೈದರಾಬಾದು
ಹೊನ್ನಿನ ಹೊಳಪದು
ಹೈದರಾಬಾದು
ಕಂಗಳ ಬೆಳಕದು
ಹೈದರಾಬಾದು
ಮಂಗಳ ರೂಪದು
ಹೈದರಾಬಾದು
ಉಸ್ಮಾನಲಿಯದು
ಹೈದರಾಬಾದು

ಎಂತೆನಿತು ಎಮ್ಮ ಪ್ರಭುವಿನ ಭಾಗ್ಯವು!

ಡಿ. ಕೆ. ಭೀಮಸೇನರಾವ್

೧೮. ಕೊಡಗು

ಕೊಡಗು ಬೆಡಗಿನ ಬೀಡು! ಸೌಂದರ್ಯದಮೃತಮಂ
ಕುಡಿಯಿಮೆಲಿ ಕಣ್ಗಳಿರ! ಇದೊ ಮಂಜು ಬಿತ್ತರಿಸಿ
ಕಡಲವೋಲ್ ತೋರ್ದಪುದು ಮೇಲೆಳ್ದ ಗಿರಿಸಾನುಗಳ್ ದ್ವೀಪನಿವಹವಾಗೆ
ಅಡಿಯಿಂದೆ ಮುಡಿವರಂ ಬೆಟ್ಟುಗಳ್ ನೀಳ್ದೆಸೆವ
ಗಿಡಗಳಿಂ ಪಸುರೇರಿ ಸೌಂದರ್ಯದಧಿದೇವಿ
ಯೆಡೆಯಾಡುವೊಳ್ಪುವೆತ್ತೆಡೆಗಳಾಗಿತ್ತಲಿದೊ ಸೊಗಯಿಪುವು ಸೊಂಪುವೆತ್ತು
ಬಿಸಿಲೆಲೆಗಳೊಳಗಿರದೆ ಸೋಸಿ ಬರ್ಪುದು ಮತ್ತೆ
ಪಸುರಮೇಲ್ ನೀರಮೇಲಲೆವೆಲರ್ ಸುಳಿದಪುದು
ಬಿಸುಪಳಿಯ ಬಿರ್ದಪುದೆ? ಕೊಡಗು ತಣ್ಣೆಳಲ ತವರೂರಲೇ ತಣ್ಪೆನಿಂಬು

ಪೊಸತೆರದ ಬಗೆವಗೆಯ ವಿಹಗಂಗಳೆತ್ತಲುಂ
ಮಿಸುಪಮೆಯ್ ಬಣ್ಣದಿಂ ಮನವೊಲಿಪ ಮಾಟದಿಂ
ದೆಸೆದು ನುಣ್ದನಿಗುಡುತೆ ನಲಿದಪುವು ಮನಮಿಲ್ಲಿ ನಲ್ಪಗೆಗಳಿಡೆಯಾದುದು

ಪರಿವ ಕಾಳ್ಪ್ಪರದ ಮೆಲ್ಲುಲಿಯಿಂದೆ ಬಗೆಗೊಳಿಪ
ದರಿಯಿತ್ತಲುತ್ತುಂಗಶಿಖರಂಗಳಿಂದೆಸೆವ
ಗಿರಿಯತ್ತಲೀಂ ಪೆಂಪೊ! ತಂಬೆಲರ ಸೊಗಯಿಸುವ ಸೋಂಕಿನಿಂ
ಸೊಗಮಿದೆನಿತೋ

ಬಿರಿವೂಗಳೆನಿಗಂಪಿಗೆನಿತೊಂದು ತುಂಬಿಗಳೊ
ಸುರಯುವತಿಯರ್ ನಲ್ಲರೊಡನಿಲ್ಲಿ ಸಾರ್ತಂದು
ಸರಸವಾಡಲ್ಕುಚಿತಮಾದ ನೆಲಮಿದು ಕೊಡಗು ಕರುನಾಡ ಮುದ್ದುಗೂಸು

ಚೆಲುವಿನೀ ಕಡಲೊಳಗೆ ಸಾಲ್ವಿಡಿದು ಸೊಂಪೆಸೆವ
ಮಲೆಗಳೆವು ಸವಿಕಂಪ ತರುರಾಜಿಗಳೆನದೇ
ನಲೆವಲೆವ ತೆರೆಗಳಂತೆಸೆದಪುವೊ! ನವವೃಷ್ಟಿಯಂ ಸೃಷ್ಟಿಗೇಂ ಕಾಂತಿಯೋ
ನಲವಾಗಸಂ ದಿಕ್ಕುಗಳ್ ರಾಮಣೀಯಕದ
ನಿಲಯಂಗಳಿವನೆನಿತು ನೋಡಿದೊಡಮಕ್ಕಿಗಳ್
ತೊಲಗಲೊಲ್ಲವು ಮನಂ ತಣಿಯದೋಲಾಡಿಯೂ ಸೌಂದರ್ಯಜಳಧಿಯಲ್ಲಿ

ಬಂದೆ ನಾನಿಲ್ಲಿಗೆನ್ನಕ್ಕರದ ತಾಯ್ನೆಲದ
ಚೆಂದಮಂ ನೋಡುತುಂ ಶ್ರೀನಿವಾಸನ ನಲ್ಮೆ
ಯಿಂದೆ ಸುಖದಿಂದೆ ಸಂಚರಿಸುತುಂ ಬಹುಕಾಲದಿಚ್ಛೆ ಕೈಗೂಡಿತಿಂದು
ಎಂದು ಕಣ್ತುಂಬೆ ಕರುನಾಡ ಚೆಲುವಂ ಕಾಣ್ಬೆ
ನೆಂದು ಮನದೊಳಗನಿಶವಾಗೆ ಚಿಂತಿಸುತಿರ್ದೆ
ನಂದು ತಿಳಿದಿರ್ದರಾರಿಂತು ಸೊಬಗಿನ ಸುಗ್ಗಿಯಿದಿರೊಳಾಂ ನಿಲ್ವೆನೆಂದು

ಎನ್ನ ನಾಡಂದಮಿಂತೆಂದು ಭಾವಿಸಿದೆನಿ
ಲ್ಲಿನ್ನೆಗಂ! ಭಾವನೆಗೆ ಚೆಂದಮಿದು ನಿಲುಕುವುದೆ?
ನಿನ್ನ ಸೌಂದರ್ಯಮಿದು ನಿನ್ನ ಪೆರ್ಮೆಯ ಕುರುಪು! ಕರುನಾಡೆ,
ಪುಣ್ಯಭೂಮಿ!

ಇನ್ನರಿವುದರಿದಲ್ತು ನಿರ್ಮಳಾಂತಃಕರಣ
ರುನ್ನತಗುಣೋದಯರ್ ಮುಂಗಳನಿಕೇತನರ್
ನಿನ್ನೊಡಲೊಳೆಂತುದಯಿಸಿದರೆಂದು! ಕರುನಾಡು ದೇವರಳ್ಕಿರಿನ ನಾಡು

ದರಿಗಳಿರ, ಗಿರಿಗಳಿರ, ಝರಿಗಳಿರ, ಮೃಗಪಕ್ಷಿ
ತರುಗಳಿರ, ಪೂಗಳಿರ, ತಂಬೆಲರೆ, ಬೆಳ್ಕಂಜೆ,
ನುರಗಂಪೆ, ಇಂಚರವೆ, ಬೀಳ್ಕೊಳ್ವೆನೈ! ನಮೋ! ನಿಮ್ಮ ಸೌಹಾರ್ದಮೆನಿತೊ

ಇರಿಸಿದಿರ್ ಸೌಂದರ್ಯಸಾರಸರ್ವಸ್ವಮುಂ
ತೆರೆದೆನ್ನ ಮುಂದೆ ನೀವ್! ಪೊರಗಣ್ಗೆ ನೀಮಿನ್ನು
ಮರೆಯಾದೊಡಂ ಹೃದಯಭಿತ್ತಿಯೊಳ್ ಚಿತ್ರಿತರ್! ನಿಮ್ಮನಾಂ
ಮರೆವುದೆಂತು?

ಸಾಲಿ ರಾಮಚಂದ್ರರಾಯ

೧೯. ಮಡಿಕೇರೀಲಿ ಮಂಜು

ಬೂಮಿಮಾನ್ ತಬ್ಬಿದ್ ಮೋಡ್ ಇದ್ದಂಗೆ
ಬೆಳ್ಳಿ ಬಳಿದಿದ್ ರೋಡ್ ಇದ್ದಂಗೆ
ಸಾಫಾಗ್ ಅಳ್ಳ ತಿಟ್ಟಲ್ದಂಗೆ
ಮಡಿಕೇರೀಲಿ ಮಂಜು!
ಮಡಗಿದ್ ಅಲ್ಲೇ ಮಡಗಿದ್ವಂಗೆ
ಲಂಗರ್ ಬಿದ್ದಿದ್ದ್ದ ಅಡಗಿದ್ವಂಗೆ
ಸೀತಕ್ ಸಕ್ತಿ ಉಡಗೋದಂಗೆ
ಅಳ್ಕಾಡಾಲ್ದು ಮಂಜು!

ತಾಯಿ ಮೊಗೀನ್ ಎತ್ಕೊಂಡಂಗೆ
ಒಂದಕ್ಕೊಂದು ಅತ್ಕೊಂಡಂಗೆ
ಮಡಿಕೇರೀನ ಎದೆಗೊತ್ಕೊಂಡಿ
ಜೂಗೀಡ್ಸ್ತಿತ್ತು ಮಂಜು!
ಮಲಗಾಕ್ ಸೊಳ್ಳಪರದೆ ಕಟ್ಟ
ಒದಿಯಾಕ್ ಒಗದಿದ್ ದುಪಟ ಕೊಟ್ಟ
ಪಕ್ಕಾಗ್ ಗಂದದ್ ದೂಪ ಆಕದಂಗ್
ಮಡಿಕೇರೀಮೇಲ್ ಮಂಜು!

ಮಂಜಿನ ಮಸಕಿನ್ ಕಾವಲ್ನಲ್ಲಿ
ಒಣಗಿದ್ ಉದ್ದಾನೆ ಉಲ್ನಲ್ಲಿ
ಒಳಗೇ ಏನೋ ಸರದೋದಂಗೆ
ಅಲಗಾಡ್ತಿತ್ತು ಮಂಜು!
ನಡಿಯೋ ದೊಡ್ಡೊಡ್ ದೇವಲ್ನಂಗೆ
ಪಟ್ಟದ ಸುತ್ತಿನ್ ಕಾವಲ್ನಂಗೆ
ಅಲ್ಲಲ್ಲೀನೆ ಅಂಗಂಗೇನೆ
ಗಸ್ತಾಕ್ತಿತ್ತು ಮಂಜು!

ಸೂರ್ಯನ್ ಕರೆಯೋಕ್ ಬಂದ್ ನಿಂತೋರು
ಕೊಡಗೀನ್ ಎಲ್ಲಾ ಪೂವನ್ನೋರು
ತಿಳ್ನೆ ಬೆಳ್ನಿ ಬಟ್ಟೀನಾಕಿ
ಬಂದಂಗಿತ್ತು ಮುಂಜು.
ಚಿವ್ವಾನಿದ್ರ್ ಎಳಬಿಸಿಲಿನ್ ಕೆಂಪು
ಮುಂಜಿನ್ ಬಣ್ಣ ಕಣ್ಗೆ ತಂಪು!
ಕೊಡಗಿನ್ ಲಸ್ಮೀರ್ ಪೂವನ್ನೋರ್ಗೆ
ಆಲೀನ್ ಸೌಂದ್ರೀ ಮುಂಜು!

ಅಗಲೇ ಬರಲಿ ರಾತ್ರೀ ಬರಲಿ
ಬಿಸಲು ನೆರಳು ಏನೇ ಇರಲಿ
ಕಣ್ಮರೆಯಾಗಾಕ್ ತಾವ್ ಕೊಡಾಲ್ದು
ಮುಡಿಕೇರೀಗೆ ಮುಂಜು!
ತ್ರಿಲಸೀರಿನ್ ಮೇಗಿದ್ದಂಗೆ
ಪೂವಮ್ಮ—ನನ್ ತಂಗೀದ್ದಂಗೆ
ಬಿಟ್ಟೂ ಬಿಡದಂಗ್ ಇಡಕೋಂತಿತ್ತು
ಮುಡಿಕೇರೀಗೆ ಮುಂಜು!

ರತ್ನ
(ಜಿ. ಪಿ. ರಾಜರತ್ನಂ)

೨೦. ಹುತ್ತರಿ ಹಾಡು

ಎಲ್ಲಿ ಭೂರಮೆ ದೇವಸನ್ನಿಧಿ ಬಯಸಿ ಬಿಮ್ಮನೆ ಬಂದಳೋ?
ಎಲ್ಲಿ ಮೋಹನ ಗಿರಿಯ ಬೆರಗಿನ ರೂಪಿನಿಂದಲಿ ನಿಂದಳೋ?
ಎಲ್ಲಿ ಮುಗಿಲಲಿ ಮಿಂಚಿನೋಲ್ ಕಾವೇರಿ ಹೊಳೆ ಹೊಳೆ ಹೊಳೆವಳೋ?
ಎಲ್ಲಿ ನೆಲವನು ತಣಿಸಿ ಜನಮನ ಹೊಲವ ಕಳೆ ಕಳೆ ಕಳೆವಳೋ?
ಅಲ್ಲೆ ಆ ಕಡೆ ನೋಡಲಾ!
ಅಲ್ಲೆ ಕೊಡಗರ ನಾಡಲಾ!
ಅಲ್ಲೆ ಕೊಡವರ ಬೀಡಲಾ!

ಸನಿದು ಮೆದ್ದರೊ ಯಾರು ಪೂರ್ವದಿ ಹುಲಿಯ ಹಾಲಿನ ಮೇವನು?
ಕವಣೆ ತಿರಿಕಲ್ಲಾಟ ಹಗ್ಗಕೆ ಸೆಳೆದರೋ ಹೆಬ್ಬಾವನು?
ಸವರಿ ಆನೆಯ ಸೊಂಡಿಲಿನ ರಣಕೊಂಬನಾರ್ ಭೋರ್ಗರೆದರೋ?

ಸವೆದು ಸವೆಯದ ಸಾಹಸತ್ವದ ಕ್ಷಾತ್ರ ಬೇಟಿಯ ಮೆರೆದರೋ?
ಅವರು ಸೋಲ್ ಸಾವರಿಯರು!
ಅವರು ಕಡುಗಲಿ ಗರಿಯರು!
ಅವರೆ ಕೊಡಗಿನ ಹಿರಿಯರು!

ತಮ್ಮ ನಾಡಿನ ಕೊರಳು ದಾಸ್ಯದ ನೊಗದ ಭಾರಕೆ ಬಗ್ಗದೋಲ್,
ಹೆಮ್ಮೆ ಹಗೆಗಳ ಹೊಡೆದು ಹಿರಿಯರು ಹಸಿದು ಹಾರುವ ಬಗ್ಗದೋಲ್,
ಬೊಮ್ಮಗಿರಿಯಿಂ ಪುಷ್ಪಗಿರಿ ಪರ್ಯಂತ ಬೆಳೆದೀ ದೇಶವು
ಧರ್ಮ ದಾನದ ಕಟ್ಟುಕಟ್ಟಳೆ ರೀತಿ ನೀತಿಯ ಕೋಶವು!
ನಮ್ಮ ಕೊಡಗಿದು ಜಮ್ಮದು;
ಜಮ್ಮ ಕೊಡಗಿದು ನಮ್ಮದು;
ನಮ್ಮೊಡಲ್ ಬಿಡಲಮ್ಮದು!

ಇದು ಅಗಸ್ತ್ಯನ ತಪದ ಮಣೆ, ಕಾವೇರಿತಾಯ ತವರ್ಮನೆ,
ಕದನ ಸಿರಿಗುಯ್ಯಾಲೆ ತೂಗಿದನಿಲ್ಲಿ ಚಂದರವರ್ಮನೆ!
ಇದಕೊ! ಚೆಂಗಾಳ್ವರಸರಾಡಂಬರವು ಕುಣಿದ ಶ್ರೀರಂಗವು!
ಇದೊ! ಇದೋ! ಇಲ್ಲುರುಳ್ದ ಹಾಲೇರಿಯರ ಬಲಗಿರಿಶೃಂಗವು!
ವಿದಿಯ ಮಾಟದ ಕೊಡಗಿದು!
ಮೊದಲೆ ನಮ್ಮದು, ಕಡೆಗಿದು
ಕದಲದೆಮ್ಮನು; ಬೆಡಗಿದು.

ಒಮ್ಮತವು ಒಗ್ಗಟ್ಟು ಒಂದೇ ಮನವು ಎಲ್ಲಿದೆ ಹೇಳಿರಿ?
ಸುಮ್ಮನಿತ್ತರೊ ದಟ್ಟ ಕುಪ್ಪಸ? ಹಾಡುಹುತ್ತರಿಗೇಳಿರಿ!
ಚಿಮ್ಮಿ ಪಾತುರೆಕೋಲ ಹೊಯ್ಲಿಗೆ ಕುಣಿವ ಪದ ಹೊರ ಹೊಮ್ಮಲಿ!
ಅಮ್ಮ ಹರಸಿದ ಸೀಮೆ ನಮಗಿದು ಇರಲಿ ನಮ್ಮದೆ ನಮ್ಮಲಿ!
ನೆಮ್ಮದಿಯನಿದು ತಾಳಲಿ!
ಅಮ್ಮಯಾ ಬಲ ತೋಳಲಿ!
ನಮ್ಮ ಕೊಡಗಿದು ಬಾಳಲಿ!

ಕವಿಶಿಷ್ಯ
(ಪಂಜೆ ಮಂಗೇಶರಾವ್)

೨೧. ತೆಂಕಣ ಗಾಳಿಯಾಟ

ಬರಲಿದೆ! ಅಹಹಾ! ದೂರದಿ ಬರಲಿದೆ–
ಬುಸುಗುಟ್ಟುವ ಪಾತಾಳದ ಹಾವೊ?
ಹಸಿವಿನ ಭೂತವು ಕೂಯ್ಯುವ ಕೂವೊ?

ಹೊಸತಿದು ಕಾಲನ ಕೋಣನ – ಓವ್ಹೋ!
ಉಸಿರಿನ ಸುಯ್ಯೋ? – ಸೂಸೂಕರಿಸುತ,
ಬರುವುದು! ಬರಬರ ಭರದಲಿ ಬರುವುದು –
ಬೊಬ್ಬೆಯ ಹಬ್ಬಿಸಿ, ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ,
ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ,
ಅಬ್ಬರವಲಿ ಭೊರ್ ಭೋರೆನೆ ಗುಮ್ಮಿಸಿ,
ಬರುತದೆ! ಮೈತೋರದೆ ಬರುತದೆ! ಅದೆ –
ನಡು ಮುರಿಯುತ ನಗನಾವೆಗೆ, ಕೂವೆಗೆ
ಉಡಿಸಿದ ಹಾಯಿಯ ಹರಿಯುತ ಬಿರಿಯುತ,
ಹಡಗನು ಕೀಲಿಸಿ, ತುಮುರನು ತೀಲಿಸಿ,
ದಡದಲಿ ಝಾಡಿಸಿ, ದೋಣಿಯನಾಡಿಸಿ,
ಇದೆ! ಇದೆ! ಬರುತಿದೆ! ಇದೆ! ಇದೆ! ಬರುತಿದೆ –
ಹಕ್ಕಿಯ ಕಣ್ಣಿಗೆ ಧೂಳಿನ ಕಾಡಿಗೆ
ಇಕ್ಕುತ, ಹೊಲದೆತ್ತಿಗೆ ದನಕಾಡಿಗೆ
ಫಕ್ಕನೆ ಹಟ್ಟಿಗೆ ಅಟ್ಟಿಸಿ, ಕಾಡಿಗೆ
ಸಿಕ್ಕಿದ ಕಿಚ್ಚನು ಊದಲು ಹಾರುತ,
ಬರುತಿದೆ! ಇದೆ! ಇದೆ! ಇದೆ! ಇದೆ! ಬರುತಿದೆ –
ಸಡಿಲಿಸಿ ಮಡದಿಯರುಡಿಯನು ಮುಡಿಯನು,
ಬಡ ಮುದುಕರ ಕೊಡೆಗರಿ ಹರಿದಾಡಿಸಿ,
ಹುಡುಗರ ತಲೆ ತಲೆ ಟೊಪ್ಪಿಯ ಆಟವ
ದಡಬಡನಾಡಿಸಿ, ಮನೆ ಮನೆ ತೋಟವ
ಅಡಿಮೇಲಾಗಿಸಿ, ತೆಂಗನು ಲಾಗಿಸಿ,
ಅಡಕೆಯ ಬಾಗಿಸಿ, ಪನೆ ಇಬ್ಭಾಗಿಸಿ,
ಬುಡದೂಟಾಡಿಸಿ, ತಲೆ ತಾಟಾಡಿಸಿ,
ಗುಡಿಸಲ ಮಾಡನು ಹುಲುಹುಲುಮಾಡಿಸಿ,
ಬಂತೈ! ಬಂತೈ! ಇದೆ! ಇದೆ! ಬಂತೈ! –
ಗಿಡ ಗಿಡದಿಂ – ಚೆಲುಗೊಂಚಲು ಮಿಂಚಲು –
ಮಿಡಿಯನು ಹಣ್ಣನು, ಉದುರಿಸಿ ಕೆದರಿಸಿ
ಎಡದಲಿ ಬಲದಲಿ ಕೆಲದಲಿ ನೆಲದಲಿ,
ಪಡುವಣ ಮೋಡವ ಬೆಟ್ಟಕೆ ಗಟ್ಟಕೆ

ಹೊಡೆದಟ್ಟುತ, ಕೋಲ್ ಮಿಂಚನು ಮಿರುಗಿಸಿ,
ಗುಡುಗನು ಗುಡುಗಿಸಿ, ನೆಲವನು ನಡುಗಿಸಿ,
ಸಿಡಿಲನು ತಾಳೆಗೆ ಬಾಳೆಗೆ ಎರಗಿಸಿ,
ಜಡಿಮಳೆ ಸುರಿವೋಲ್, ಬಿರುಮಳೆ ಬರುವೋಲ್,
ಕುಡಿ ನೀರನು ಒಣಗಿದ ನೆಲ ಕೆರೆವೋಲ್
ಬಂತೈ ಬೀಸುತ! ಬೀಸುತ ಬಂತೈ!
ತೆಂಕಣ ಗಾಳಿಯು ಕೊಂಕಣ ಸೀಮೆಗೆ
ಬಂತೈ! ಬಂತೈ! ಬಂತೈ! ಬಂತೈ!

ಕವಿಶಿಷ್ಯ
(ಪಂಜೆ ಮಂಗೇಶರಾವ್)

೨೨. ಹಾವಿನ ಹಾಡು

ನಾಗರಹಾವೆ! ಹಾವೊಳು ಹೂವೆ!
ಬಾಗಿಲ ಬಿಲದಲಿ ನಿನ್ನಯ ಠಾವೆ?
ಕೈಗಳ ಮುಗಿವೆ, ಹಾಲನ್ನೀವೆ
ಬಾ ಬಾ ಬಾ ಬಾ ಬಾ ಬಾ ಬಾ ಬಾ

ಹಳದಿಯ ಹೆಡೆಯನು ಬಿಚ್ಚೋ ಬೇಗಾ
ಹೊಳಹಿನ ಹೊಂದಲೆ ತೂಗೋ, ನಾಗಾ!
ಕೊಳಲನ್ನೂದುವೆ ಲಾಲಿಸು ರಾಗಾ
ನೀ ನೀ ನೀ ನೀ ನೀ ನೀ ನೀ ನೀ

ಎಲೆ ನಾಗಣ್ಣ, ಹೇಳೆಲೊ ನಿನ್ನಾ
ತಲೆಯಲಿ ರನ್ನವಿಹ ನಿಜವನ್ನಾ
ಬಲು ಬಡವಗೆ ಕೊಪ್ಪರಿಗೆಯ ಚಿನ್ನಾ
ತಾ ತಾ ತಾ ತಾ ತಾ ತಾ ತಾ ತಾ

ಬರಿಮೈ ತಣ್ಣಗೆ, ಮನದಲಿ ಬಿಸಿ ಹಗೆ,
ಎರಡೆಳೆ ನಾಲಗೆ ಇದ್ದರು ಸುಮ್ಮಗೆ
ಎರಗುವೆ ನಿನಗೆ, ಈಗಲೆ ಹೊರಗೆ
ಪೋ ಪೋ ಪೋ ಪೋ ಪೋ ಪೋ ಪೋ ಪೋ

ಕವಿಶಿಷ್ಯ
(ಪಂಜೆ ಮಂಗೇಶರಾವ್)

೨೩. ಕೊಂಬು

ಅರಳು ಮಲ್ಲಿಗೆ, ಮಲ್ಲಿಗೆವಾಳು,
ಮಲ್ಲಿಗೇನಹಳ್ಳಿ;
ಸಿರಸಿ, ಸಂಪಿಗೆ, ಕೂಡುಮಲ್ಲಿಗೆ,
ಹುಲ್ಲೆಹಳ್ಳಿ, ಹರವು.

ಮೇಲು ಹುಲುವತಿ, ಕೀಳು ಹುಲುವತಿ
ಮಾದಲ, ಮುತ್ತೋಣಿ;
ತಾಳಕುಂಟೆ, ತಾವರೆಕೆರೆ, ಹಿಪ್ಪಲ,
ಕೂದವಳ್ಳಿ, ಕೊಪ್ಪ.

ಸಿರಿಯೂರು, ಸಿರಿಯಂಗಳ, ಬೆಳವಲ,
ಸೊಗದವಾಣಿ, ತೆರವಿ;
ಮರಳವಾಡಿ, ಮಧುಗಿರಿ, ಬನವಾಸಿ,
ಅಗಳಿ, ಅಮೃತೂರು.

ಬೆಳಧರ, ಬೆಳ್ಳಿಯಬಟ್ಟಲು, ಬೆಳವಿ,
ನೆಲಮಾವು, ಹಗರಿ:
ತಳುಕು, ಬೆಳುಗೊಳ, ಕಿರಿಜಾಜಿಯೂರು,
ಬಿಳಿಗೆರೆ, ಹೆಬ್ಬಾಲೆ;

ಪೂನಾಡು, ಸಿರಿವಾಸಿ, ಸಕ್ಕರೆ,
ನಿಶನ, ತಿಂಗಳೂರು;
ಮಾಣಿಕಧರ, ಮಂಜೇಶ್ವರ, ಕೋಗಿಲೆ,
ಎಸಳೂರು, ಕಳಸ.

ಏನು ಹೆಸರು ಇವು, ನಮ್ಮ ತಾತದಿರು
ನಾಡೊಳಟ್ಟ ಹೆಸರು:
ಜೇನಸರಿಯವೊಲು ಇನಿದು, ಬಲ್ಲವರ
ಹಾಡಿನವೊಲು ಮೆಲಿತು.

ಕೇಳುವ ಕಿವಿ ನಲಿಯುತಲಿದೆ, ನುಡಿಯುವ
ನಾಲಗೆ ನಲಿಯುತಿದೆ:
ಬಾಳೆಂತಿರೆ ಹೆಸರಿಂತಾಯ್ತೆಂಬೆನೆ
ಸೋಲುತಲಿದೆ ನೆನಸು.

ನಾಡೊಳಂದೊಗೆದ ಸೊಗವರವಿಂದದ
ಮಾಧುರ ಮಕರಂದ

ಕೋಡಿಯಿಂದುದುರಿ ಹನಿ ಹರಳಾಯಿತು
ಮೋದವೀಯಲಿಂದು.

ಅಣ್ಣ ತಮ್ಮದಿರೆ, ಅಕ್ಕತಂಗಿಯರೆ,
ಹೇಳುವಿರೀ ಹೆಸರ;
ಚೆನ್ನವಾಗಿಹುದು ಈಗಳು ಹೆಸರು;
ಬಾಳು ಅಂತೆ ಇಹುದೇ?

ಚೆಲುವು ಹೆಸರುಗಳ ನುಡಿವ ನಾಲಗೆಯ
ಬಾಳುವೆ ಬರಿದಾಯ್ತೋ.
ಕಳೆದುಕೊಂಡೆವೇ ಹಿರಿಮೆಯ ಚಂದ್ರನ,
ಮೂಳವಾಯ್ತು ಬದುಕು.

ಬನ್ನಿ ಅಣ್ಣಂದಿರೆ ಬನ್ನಿ ತಮ್ಮದಿರೆ
ಬನ್ನಿ ಸೋದರಿಯರೆ;
ಬನ್ನಿರಿ ಎಲ್ಲರು ಆಣೆ ಇಟ್ಟುಕೊಳಿ
ಚೆನ್ನ ಮಾಡಿ ಬಾಳ.

ಹೆಸರಿನ ಚೆಲುವನು ನಾಡಿನ ಬದುಕಲಿ
ಮರಳಿ ಮೊಳೆಯಿಸಿರಿ;
ಒಸಗೆಯ ತನ್ನಿರಿ ತಾಯ್ನಾಡಿರವಿಗೆ,
ತರಿಸಿ ನಗೆಯ ಮೊಗಕೆ.

ದುಡಿಯುವೆವೆನ್ನಿರಿ ದುಡಿಯಿರಿ ಬನ್ನಿರಿ
ನಾಡಿಗೆ ನುಡಿಗಾಗಿ;
ತೊಡಿರಿ ಹಟವನು ಕೊಡಿ ಕೈಯಾಣೆಯ;
ಆಡುವ ನುಡಿ ನಡೆಸಿ.

ಕತ್ತಲು ಮುಚ್ಚಿಹ ಬಾಳಿರುಳಾಳಕೆ
ಆಸೆಯ ಚಂದ್ರನನು
ಮತ್ತೆ ತನ್ನಿರಿ, ಬೆಳಕಲಿ ನಡೆಯಿರಿ;
ಹೇಸಿ ಸೋಂಬತನವ.

ಮುತ್ತು ಮಾಣಿಕವ ಜೋಳದ ತೆರದಲಿ
ಹರಿಯಿಸಿ ನಾಡಿನಲಿ;
ಉತ್ತಮ ಚರಿತೆಯ ಚಿತ್ರಪತಾಕೆಯ
ಮೆರೆಯಿಸಿ ಬಾನಿನಲಿ.

ಶ್ರೀನಿವಾಸ
(ಮಾಸ್ತಿ ವೆಂಕಟೇಶ ಐಯಂಗಾರ್)

೨೪. ಕೋಗಿಲೆ

ಕೋಗಿಲೆ! ಕೋಗಿಲೆ!
ಎಂತ ಹೆಸರು ಊರಿಗೆ!
ಹೇಗೆ ಇಹುದೊ, ಎನಿತು ಸೊಗಸೊ,
ಇಂತ ಹೆಸರ ಊರದು!

ಕೊಟಿಗೆಹರ ತೆರುವಿಗೆ
ಏಳು ಕೂಗು ದೂರದೆ,
ಎಟುಕಿಸಿಕೊಳಬಹವೊಲಿರುವ
ಮಾಲೆಯಾದ ಮಲೆಯೆಡೆ;

ಮೂರು ನೀರನುಳಿಯುತ
ಮಲೆಯ ತಲೆಯ ಮುಟ್ಟುತ
ಧೀರವಾಗಿ ಪಡುವಣಿಂದ
ಸುಳಿಯುವೆಲರೊಳಾಡುತ;

ತಳಿರು ಹೂವು ಸೊಗಯಿಸೆ
ಪರಿಮಳಿಸುವ ವನದಲಿ;
ಮಲೆಯ ನೀರು ಸೇರಿ ನಡೆವ
ಸರಳಿನೊಂದು ಬದಿಯಲಿ;

ಅಲ್ಲಿ ಇಹುದು ಕೋಗಿಲೆ
ಎಂತ ಸೊಗಸ ಊರದು!
ಮೆಲ್ಲನುಸುರು ಹೆಸರನು;
ಅಂತ ಸೊಗಸು ಹೆಸರದು.

ತಳಿರ ಮರೆಯೊಳಿರುತ ಕರೆದು
ಕಾಣದಿಹುದೆ ಕೋಗಿಲೆ;
ಸಲುವುದಿದೇ ಬಣ್ಣನೆ
ಜಾಣು ನಮ್ಮ ಊರಿಗೆ.

ಉಳಿದ ಊರು ಮನೆಯ ಗುಂಪು,
ಕಡೆಗೆ ಎರಡು ಮರಗಳು;
ಮಲೆಯೆ ವನವೆ ಊರು ಇಲ್ಲಿ;
ನಡುವೆ ಎಲ್ಲೊ ಮನೆಗಳು.

ಉಳಿದ ಊರು ಬರಿಯ ಜನದ
ಬಾಳು ಬೀಳು. ಕೋಗಿಲೆ
ಎಲರ ಮಲರ ಕಂಪು ಸೊಂಪು
ಮೇಳವಿಸಿದ ತೋಂಟವು.

ಪಾರಿವಗಳ ಕೂಜನದ
ಗಿಳಿಯ ನಲವ ಕೂಗಿನ,
ನೂರು ತೆರನ ಹಕ್ಕಿಯ
ಉಲಿವ ಮೇಳ ಕೋಗಿಲೆ.

ಹೇರಿಳೆ ಮಲ್ಲಿಗೆ
ಜೇನುಹೂವ ಬಳ್ಳಿಯ
ಬೇರಿನಿಂದ ಕಾವ ಹಲಸ
ತಾಣ ನಮ್ಮ ಕೋಗಿಲೆ.

ನನ್ನ ಜನದ ಮನದ ನಯ
ಸಂತಸವನು ಸಾರುವ
ಚಿನ್ನದಂತ ಹೆಸರ ಮೆರೆವ
ಶಾಂತಿಯೋಣೆ ಕೋಗಿಲೆ.

ಕೋಗಿಲೆ! ಕೋಗಿಲೆ!
ಎಂತ ಹೆಸರು ಊರಿಗೆ!
ಹೋಗಿ ನೋಡು, ಊರನು,
ಶಾಂತಿಯೊಂದು ನೆಲೆಯನು.

ಶ್ರೀನಿವಾಸ
(ಪೂಷ್ಪ ವೆಂಕಟೇಶ ಐಯಂಗಾರ್)

೨೫. ಶಿವನಸಮುದ್ರ

ಗಿರಿಯ ಕೆಲದಿ ಬನದ ನಡುವೆ ಝರಿಯ ತೆರದಿ ಸುಳಿದು ಬರುತೆ
ತಲದ ಶಿಲೆಯನಿರಿದು ಕೊರೆದು ಕೆಲದ ನೆಲವನರೆದು ಮುರಿದು
ವಿಮಲ ಜಲದ ವಿಪುಲಧಾರೆಯಮೃತಲಹರಿಯಂತೆ ತೋರೆ
ದಣಿವ ಕಳೆಯುವೆಲರ ಬೀರಿ ಮೃದುಲರವದಿ ಮುಂದೆ ಸಾರಿ
ಅತ್ತಲತ್ತ ಸುಳಿದು ಸುತ್ತಿ ಇತ್ತಲಿತ್ತ ಮೆಲ್ಲನೊತ್ತಿ
ಅಲ್ಲಿ ಬಳುಕುತಿಲ್ಲಿ ಬಾಗಿ ಅಲ್ಲಿ ಬಳಸುತಿಲ್ಲಿ ಸಾಗಿ

ನೊರೆಯ ಸೇಸೆಗಳನು ಸೂಸಿ ತೆರೆಯ ಚವರಗಳನೆ ಬೀಸಿ
ಬಾಲೆಯಂತೆ ನಲಿದು ಕುಣಿದು ಕಾಳಿಯಂತೆ ಕನಲಿ ಮೊರೆದು
ಉರಗಿಯಂತೆಯುರುಗಿ ತಿರುಗಿ ಛಲದ ಭರದಿ ಸರಿದು ಮುಸಗಿ
ಬೆಟ್ಟದಿಂದಲುರುಳಿ ಹೊರಳಿ ದಿಟ್ಟತನದಿ ತೊಳಗಿ ಮೊಳಗಿ
ಘೋರ ವೇಗದಿಂದ ನೆಗೆದು ಭೋರೆನುತ್ತೆ ಮಂಜನೆಸೆದು
ಪನಿಯ ಮುಗಿಲ ಕವಿಸಿ ಸರಿದು ಮನುಜಸೇವೆಯಿಂದಲೊಲಿದು
ಬಲವ ಬೆಳಕ ನೀಡುತುಂ ನಿಲದೆ ನಾಟ್ಯವಾಡುತುಂ
ನುಗ್ಗಿ ಬೀಳುತೇಳುತುಂ ನೆಗೆದು ಪಾರುತೋಡುತುಂ
ಭುವನರಚನೆಯೆನಿತು ಕುತುಕಮೆನುತ ಜನಕೆ ಸಾರುತುಂ
ಭುವನಜನನಿಯೆನಿತು ಚತುರಳೆನುತ ಕಣ್ಗೆ ತೋರುತುಂ
ಪುರುಷಬಲವ ಬೆಳಗಿರೆನುತ ಜಡರ ಪಳಿದು ಮೊಳಗುತುಂ
ಪರಿವಳೀ ಕನೇರ ತನಯೆ ಧೀರಜನನಿಯೆನಿಪುತುಂ

ಕನ್ನಡ ನಾಡಿನ ಕುತುಕಂ
ಕನ್ನಡಿಗರ ಸಾಹಸಕ್ಕೆ ಕನ್ನಡಿ ಮೇಣೇ
ಕನ್ನಡಿಗರ ಭಾಗ್ಯದ ನಿಧಿ
ಯುನ್ನತಿಯಂ ಪಡೆದು ಬಾಳ್ಗೆ ಶಿವನಸಮುದ್ರಂ

ಡಿ. ವಿ. ಗುಂಡಪ್ಪ

೨೬. ಲಲಿತಾದ್ರಿ

ತಿರೆಯ ಹೋರಾಟದಲಿ
ಬಗೆ ಕದಡಿ ಕಂಗೆಡಲು,
ನೇಹಿಗನೆ, ಬಾ, ಇಲ್ಲಿ
ಶಾಂತಿಯಿಹುದು!

ತಂಬೆಲರ ತೀಟವಿದೆ
ಬಳಲಿಕೆಯ ಪರಿಹರಿಸೆ;
ಮೋಹಿಸಲು ಕಂಗಳನು
ಪರಮ ಸೌಂದರ್ಯವಿದೆ;
ಜೀವವನು ಸಂತವಿಸೆ
ದೇವಸಾನ್ನಿಧ್ಯವಿದೆ!
ಸೋದರನೆ, ಬಾ, ಇಲ್ಲಿ;
ಧನ್ಯನಾಗುವೆ ಇಲ್ಲಿ.

ಪುಣ್ಯನಾಗುವೆ ಇಲ್ಲಿ;
ಪೂರ್ಣನಾಗುವೆ ಇಲ್ಲಿ;
ಬೆಟ್ಟದಲ್ಲಿ.

ಬೆಂಗದಿರ ಮುಳುಗುತಿರೆ
ಬೈಗುಗೆಂಪಳಿಯುತಿರೆ,
ಮುಚ್ಚಂಜೆ ಮುಸುಗುತಿರೆ
ಕತ್ತಲೆಯು ಕವಿದುಬರೆ
ಪಯಣಿಗನೆ, ಬಾ, ಇಲ್ಲಿ
ನಿಂತು ನೋಡು!

ಮೂಡಲನು, ಪಡುವಲನು,
ತೆಂಕಲನು, ಬಡಗಲನು,
ಗಗನವನು, ಭೂಮಿಯನು,
ಮನದಣಿಯೆ, ಕಣ್ ತಣಿಯೆ,
ಎದೆಯರಳಿ ಮೈಮರೆಯೆ,
ತೂಣಗೊಂಡವನಂತೆ
ನಿಂತು ನೋಡು!

ಕಂಬನಿಗಳಿಳಿಯುತಿರೆ,
ಮೈನವಿರು ನಿಮಿರುತಿರೆ,
ಎದೆಯಲರು ಅರಳುತಿರೆ,
ಮೇಣಂತರಂಗದಲಿ
ಹೊಸ ಬೆಳಕು ಮೂಡಿಬರೆ,
ಬಣ್ಣನೆಗೆ ಬಾರದಿಹ
ಚೆಲುವನನವಲೋಕಿಸಲು
ಮಾತು ಮೈದೆಗೆಯುತಿರೆ,
ಬಾಳೆಲ್ಲ ಹಿಗ್ಗಿಬರೆ,
ದೇಹಪಂಜರದಲ್ಲಿ
ಜೀವ ಹೋರಾಡುತಿರೆ,
ಬಾ ಇಲ್ಲಿ, ನೇಹಿಗನೆ,
ಮೌನದಲಿ ಮಮತೆಯಲಿ
ನಿಂತು ನೋಡು!

ಹುಣ್ಣಿಮೆಯ ದಿನದಲ್ಲಿ
ಪೂರ್ವ ದಿಗ್ದೇಶದಲಿ,
ದೂರ, ಬಹು ದೂರದಲಿ
ಮಬ್ಬಿನ ದಿಗಂತದಲಿ
ದುಂಡಾಗಿ, ಕೆಂಪಾಗಿ,
ಸುಂದರ ಸುಧಾಕರನು
ಮೂಡಿ ಮೇಲೇಳುತಿರೆ,
ಸುತ್ತಲಿಹ ಬಯಲುಗಳ
ಹಸುರಾದ ಹೊಲಗಳನು
ಅಲ್ಲಲ್ಲಿ ಮೆರೆಯುತಿಹ
ಬಿತ್ತರದ ಜಲಗಳನು
ಕೌಮುದಿಯು ಮುತ್ತುತಿರೆ,
ಚಂದ್ರಿಕೆಯು ಬೆಳಗುತಿರೆ,
ಬೆಳ್ದಿಂಗಳೆಸೆಯುತಿರೆ,
ಮೌನ ಮಿತಿಮೀರುತಿರೆ,
ಧ್ಯಾನ ಬಗೆವುಗುತಲಿರೆ,
ನಿಂತಿಲ್ಲಿ ನೇಹಿಗನೆ
ಚೆಲುವ ನೋಡು!

ತಾರೆಗಳ ದಿಬ್ಬಣವು
ಗಗನದಿಂದೈತಂದು
ಬೆಟ್ಟದುದಿಯಲಿ ತಳುವಿ
ಸೋಪಾನಗಳನಿಳಿದು
ತಪ್ಪಲಲಿ ಮೇಳವಿಸಿ
ಕವಿದು ಕಿಕ್ಕಿರಿದಂತೆ,
ಬುವಿ ಬೆಸಲೆಯಾದಂತೆ
ಚುಕ್ಕಿಗಳ ತಿಂತಿಣಿಯ
ತೆಕ್ಕನೆಯೆ ಪೆತ್ತಂತೆ,
ಸಗ್ಗ ನೆಲಕಿಳಿದಂತೆ,
ಬಾನಿಳೆಗೆ ಬಿದ್ದಂತೆ
ನೂರಾರು ದೀಪಗಳು
ಮಿಣುಕುತಿಹ ಸೊಡರುಗಳು,
ಸಾಲಾಗಿ, ಡೊಂಕಾಗಿ,

ಗುಡಿಗಟ್ಟ ಕೊಂಕಾಗಿ,
ಗೊಂಚಲಲಿ ಗುಂಪಾಗಿ,
ತೆಕ್ಕನೆಯೆ ಹುಟ್ಟಿಬರೆ,
ಪತ್ತನದಿ ಮಿಂಚಿಬರೆ,
ಬೆರಗಾಗಿ, ಮರುಳಾಗಿ
ಬಾ ನೋಡು ನಿಂತಿಲ್ಲಿ
ಮೂಕನಾಗಿ!

ತಾರೆಗಳ ತವರೂರು
ಸಿಂಗರದ ಮೈಸೂರು!
ಕನ್ನಡದ ಕುಶಲತೆಗೆ
ಕನ್ನಡದ ರಸಿಕತೆಗೆ
ಕನ್ನಡದ ನಿಪುಣತೆಗೆ,
ಕನ್ನಡಿಯು ಮೈಸೂರು!
ಕನ್ನಡಿಗರೆದೆಯರಿಯೆ,
ಕನ್ನಡಿಗರೊಲವರಿಯೆ,
ಕನ್ನಡಿಗರಿಂಪರಿಯೆ,
ಸೋದರನೆ, ನೇಹಿಗನೆ,
ಲಲಿತ ಲಲಿತಾದ್ರಿಯಲಿ
ನಿಂತು ನೋಡು!

ಕಬ್ಬಗಳ ಕಟ್ಟುವೊಡೆ
ಕಬ್ಬಿಗನೆ, ಬಾ ಇಲ್ಲಿ;
ಗಾನವನು ಹಾಡುವೊಡೆ
ಗಾಯಕನೆ, ಬಾ ಇಲ್ಲಿ;
ವೀಣೆಯನು ಮಿಡಿಯುವೊಡೆ
ಬಾ ಇಲ್ಲಿ ವೈಣಿಕನೆ;
ಧ್ಯಾನವನು ಮಾಡುವೊಡೆ
ಬಾ ಇಲ್ಲಿ ತಾಪಸನೆ;
ಬಣ್ಣದಲಿ ಭಾವಗಳ
ಬಣ್ಣಿಪೊಡೆ ಬಾ ಇಲ್ಲಿ
ವರ್ಣಶಿಲ್ಪಿ!

ದೇಗುಲವು ಭಕ್ತರಿಗೆ,
ಉಪವನವು ರಸಿಕರಿಗೆ,
ಲೌಕಿಕರಿಗಿದು ಸಗ್ಗ
ವೈದಿಕರಿಗಿದು ಮುಕ್ತಿ
ಲಲಿತಗಿರಿಯು!

ಕೆ. ವಿ. ಪುಟ್ಟಪ್ಪ

೨೭. ಲಾಲ್‌ಬಾಗ್

ಕೆಂಪುವೂ ಸಾಲ್ಮರನ ದಾರಿಯಲಿ ನಡೆನಡೆದು
ಕೆಂಪು ತೋಟಕೆ ಬನ್ನಿ ವಿಶ್ರಾಂತಿಗೆ;
ಒಮ್ಮೆಗೇ ಕಾಣುವುವು ಬಿಳಿ ಹಸುರು ಕೆಂಪುಗಳು
ಕಣ್ಣ ರಂಜಿಸಿ ಕೊಳುವ ಎಲ್ಲ ರಂಗುಗಳು.

ಎಲ್ಲೆಲ್ಲು ತಳಿರು ಹೂ ಎಲ್ಲೆಲ್ಲು ಹಸುರುಗಳು
ಹಸುರು ಹೊಂಗೆಂಪುಗಳ ಮೇಲಾಟವು
ಮರದ ಇಂಬಿಗೆ ಬಾಗಿ ಬಳುಕುತಿರುವೆಳಲತೆಯು
ತಳಿರ ತೂಗುಯ್ಯಾಲೆ ಹೂ ತೊಂಗಲು.

ನಾ ಮುಂದೆ ತಾ ಮುಂದೆ ಎಂಬ ಆತುರದಿಂದ
ಹೋದ ತಿಂಗಳೆ ತೋಟ ಚಿಗುರಿಟ್ಟಿತು;—
ಮಾವು ಹೊಂಗೆಯು ಬೇವು ಮಾಧವೀಲತೆ ಬೇಲ
ಮೂರದೇಶದ ಸುಳಿಯ ನೂರು ಜಾತಿಗಳು.

ಒಂದೊಂದೆ ಸೊಗವೆತ್ತಿ ತಂಪೆತ್ತಿ ಚಿಗುರಿದುವು
ಬರಲು ಕೊಂಬೆಗಳೆಲ್ಲ ಹಸುರುಟ್ಟವು
ತಳಿರ ಮೈಯನು ತೆರೆದು ನಿನ್ನೆ ಕಾಣಿಸುತಿದ್ದ
ಈ ಮರನು ಮೈತುಂಬ ಅರಳಿರುವುದು—

ಅಡಿಯಿಂದ ತುದಿವರೆಗು ಎಲೆಯೆ ಕಾಣಿಸದಂತೆ
ಕೆಕ್ಕಿರಿವ ಹೂವಿನಲಿ ನಗುತಲಿಹುದು;
ಒಂದು ರಾತ್ರಿಯ ಸುಖದ ಸದನದಲಿ ಲಲ್ಲೆಯಲಿ
ಬಂದ ಪುಳಕಗಳಿದನು ಬಿರಿಯಿಸಿಹವು.

ನೆಲದ ಆಳದಲೆಲ್ಲೊ ಒಡಲಿನಾಳದಲೆಲ್ಲೊ
ಕಾಣದೆಡೆಯಲಿ ಹುದುಗಿ ಕಾಪಾಡಿದ
ತಂಪನ್ನು ಕಂಪನ್ನು ಜೀವವನು ರಸವನ್ನು
ಕೊಂಬೆ ಕೊಂಬೆಗು ಇಡಿದು ಅರಳಿಸಿಹುದು.

ಇದರ ಮುಡಿಲೊಳಗಿಂದ ಅದರ ತುದಿಯೆಲೆಯಿಂದ
ತೂಗಿ ಜೋಲಾಡುತಿಹ ಹೂ ಗೊಂಚಲಿಂದ
ಕೈನೀರ ಹುಯ್ಯುತ್ತೆ ಬೆಳಸಿರುವ ಲತೆಯಿಂದ
ಪರದೇಶಗಳ ಹೂವು ಕಾವಣಗಳಿಂದ–

ಉಲಿಯುತಿವೆ ನಲಿಯುತಿವೆ ಚೀರುತಿವೆ ಕೂಗುತಿವೆ
ಕಣ್ಮುಚ್ಚಿ ಕೊರಲೆತ್ತಿ ಹಿಗ್ಗಿ ಹಾಡುತಿವೆ
ನೂರಾರು ದನಿಗಳಲಿ ಏರಿನಲಿ ತಗ್ಗಿನಲಿ
ಷಡ್ಜದಲಿ ಮಂದರದಿ ತಾರಮೂರರಲಿ.

ಗಿಳಿಯು ಸಂಪಿಗೆಯಿಂದ ಕೋಗಿಲೆಯು ಮಾವಿಂದ
ತುಂಬಿಗಳು ಕತ್ತಲೆಯ ಸುರಹೊನ್ನೆಯಿಂದ
ಹಸುಳೆ ಚೆಂಗುಡಿಗೈಯ ಮೃದುಲತೆಯ ವಿಾರಿಸುವ
ನರೆಮೈಯ ಕೆಂಗಣ್ಣ ಹಕ್ಕಿ ಕೊಳದಿಂದ.

ಹೊಂಬಕ್ಕಿ ಕೆಂಬಕ್ಕಿ ಪಚ್ಚೆವಣ್ಣದ ಹಕ್ಕಿ
ಲೆಕ್ಕವಿಲ್ಲದ ರಂಗು ಚುಕ್ಕೆವಕ್ಕಿ
ಕಿರಿಗೊರಲ ಹೆಗ್ಗೊರಲ ಸವಿಗೊರಲ ಕಟುಗೊರಲ
ಬಿರಿಗೊರಲ ಕಿರಿಚಿನಲಿ ಕೀರ್ವ ಹಕ್ಕಿ.

ಮಧುಮಾಸವೆಲ್ಲಿದ್ದರಲ್ಲೋಡಿ ಕೆಲೆಯುತ್ತೆ
ಇಲ್ಲಿ ಚೈತ್ರವು ಬರಲು ಬರುವ ಹಕ್ಕಿ
ಸುಗ್ಗಿ ಸೊಬಗನ್ನುಳಿದು ಇರಲಾರೆನೆನ್ನುತ್ತೆ
ದೇಶ ದೇಶಗಳಲಿವ ವಲಸೆವಕ್ಕಿ.

ಎಲ್ಲವೂ ಕರೆಯುತಿವೆ ವನಕೆ ನೆಳಲಾಸರೆಗೆ
ನೆಲದಲ್ಲಿ ಸುರಿದಿರುವ ಹೂವು ಹಾಸುಗೆಗೆ
ಮೇಲಿಂದ ಬೇಯಿಸುವ ಬೇಸಗೆಯ ನೇಸರಿನ
ಹಿಂಸೆಗಳ ನೀಗಿಕೊಳೆರೆನ್ನುತ್ತಿವೆ.

ಕೇಳಿ, ಕೇಳಿರಿ ಅವನು, ಹುಯಿಲು ಮಾರುಲಿಗಳನು
ಒಡಲ ಸಂತಸ ಸೂಸಿ ಸಾರ್ವ ಕೆಲೆಗಳನು
ದಿನದುಣಿಸ ತರುವುದಕೆ ಹೋಪುದನು ಮರೆತಿಲ್ಲಿ
ಹುರುಡಿನಲಿ ಹಬ್ಬವನು ನಡಸುತ್ತಿವೆ.

ಎಳೆಯ ಮಾವಿನ ಚಿಗುರನಗಿದಿರುವ ಕೋಗಿಲೆಯು
ಮದದೊಂದೆ ಉಸಿರಲ್ಲಿ ಒರಲುತ್ತಿದೆ;
ಗೋಣಿಯಿಂದಾಲಕ್ಕೆ ಆಲದಿಂ ಬೂರುಗಕೆ
ಹಾರಾಡಿ ಗಿಳಿಮರಿಯು ಮುದ್ದಿಡುತಿವೆ.

ಹಕ್ಕಿ ಹೂತಳಿರುಗಳ ಹರಡು ಸೌಂದರ್ಯಗಳ
ಸುಗ್ಗಿ ಸಂಭ್ರಮದೊಳಾಳಿ ಬನ್ನಿ
ಮಧುಮಾಸದೀ ಸವಿಯ ಬೆಡಗು ಹೋಹುದು ಬೇಗ
ನಡೆವಾಗ ಇದನುಣಲು ಓಡಿಬನ್ನಿ.

ವಿ. ಸೀ.
(ವಿ. ಸೀತಾರಾಮಯ್ಯ)

೨೮. ಮಡಿಕೇರೀಲಿ ರತ್ನ

ಮಡಿಕೇರೀಲಿ ರತ್ನ
ಕಂಡಾ ಒಸಾ ಮತ್ನ.

'ಮಡಿಕೇರೀಲಿ ಮಡಿಕೆ ಯೆಂಡ
ಈರ್ದಿದ್ರ್ ಅಲ್ಲೀಗ್ ಓದ್ದೂ ದಂಡ'
ಅಂದಿ ರತ್ನ ಪಡಕಾನೇಗೆ
ಒಂಟಿ, ಬೆಟ್ಟದ ನೆತ್ತಿಮೇಗೆ
ಓಯ್ತಿದ್ದಂಗೆ ನಿಂತ!
ಕಲ್ಲಾದಂಗೆ ಕುಂತ!

ಸುತ್ತ ಸಾಯೋ ಬಿಸಿಲಿನ್ ಚಾಪೆ!
ಅಲ್ಲಲ್ಲಿ ಒಸಿ ನೆರಳಿನ್ ತೇಪೆ!
ಅಲೆಯಲೆಯಾಗಿ ಬಿಸಿಲಿನ್ ಜೊತೆಗೆ
ಸುತ್ತಿನ್ ಗುಡ್ಡಗೊಳ್ ಕುಣದರ್ ಮೆತ್ಗೆ
ಮನಸೀಗ್ ಅರ್ಸ ತರ್ತ–
ರತ್ನ ಯೆಂಡ ಮರ್ತ!

'ಮುದುಕರ್ ಸಾವೇ ನೋಡಾಕ್ ಚಂದ!
ಅಂದ್ರೆ ಸೂರ್ಯ ಸಾಯಾಲ್ಲೀಂದ;'
'ಸಾಯೋ ಮುದಕ ಸಂಜೆ ಸೂರ್ಯ
ನೆಗತ ನಿಲ್ಲೋಕ್ ಇವ್ಗೇನ್ ಕಾರ್ಯ?'
ಅಂತ ಇಂದಕ್ ತಿರ್ಗಿ
ನೋಡ್ದೆ – ಬತ್ತು ಗಿರ್ಕಿ!

ದೇವರದೊಂದು ಚೆಂದದ್ ಸೋತ್ರ
ಕೊಡಗಿನ್ ಮೇಗಿನ್ ಒಂದ್ ನಕ್ಸತ್ರ
ಕೊಡಗಿನ್ ಒಂದ್ ಊಗಾಳೀಲ್ ತೇಲ್ತ
ಬಂದಂಗಿದ್ದು ಅತ್ರ ಕಾಲ್ತಾವ್

ಒಂದು ಕೊಡಗೀನುಡಗಿ!
ಐದಾರೊರಸದ್ ಉಡಗಿ!

ಕೊಡಗಿನ್ ತೋಟದ್ ಕಾಪೀ ಅಣ್ಣು
ತುಟಿಗೊಳ್! ಇಳ್ಳಿನ್ ಬೆಳಕೆ ಕಣ್ಣು!
ಕೆನ್ನೆ ಅನಕ ಕೊಡಗಿನ್ ಕಿತ್ಲೆ!
ಔಳೇಳಿದ್ದು ನಾ ಕೇಳೂತ್ಲೆ:
'ನಿಂಗೆ ಯೆಸರೇನಮ್ಮ?'
'ನನ್ನೆಸರು ಪೂವಮ್ಮ!'

'ಪೂವಮ್ಮ!' ಹಾ! ಎಂತಾ ಯೆಸರು!
ಕಣ್ಣಿಗ್ ಚಿತ್ರ ಕಟ್ಸೋ ಯೆಸರು!
ರೂಪು ರಾಗಕ್ ತಕ್ಕಂತ್ ಯೆಸರು!
ಎಂಗ್ ನೋಡಿದ್ರು ಒಪ್ಪೋ ಯೆಸರು!
'ಪೂವಮ್ಮಾ! ಪೂವಮ್ಮಾ!'
'ಪೂವಮ್ಮಾ! ಪೂವಮ್ಮಾ!'

'ಔಳ್ ನೋಡೂತ್ಲೆ ನಂಗ್ ಮುತ್ತಾಯ್ತು!
ಔಳ್ ಮಾತ್ಕೇಳಿ ಒಂದ್ ಅತ್ತಾಯ್ತು!
ಔಳ್ ಮಾತ್ ಇನ್ನಾ ಕೇಳ್ಬೇಕೂಂತ
'ನಾನ್ಯಾರ್ ಗೊತ್ತೆ?' ಅಂದ್ರೆ 'ಹ್ಞೂ'ತ
'ನೀ ಯೆಂಡಕುಡಕ' ಅಂದ್ಲು
ನೆಗ್ತ ಅತ್ರ ಬಂದ್ಲು.

'ನೀ ನಾ ಕುಡಿಯೋದ್ನ ಎಲ್ ನೋಡ್ದೇಮ್ಮ?'
ಅಂದ್ರೆ, 'ಯಾವೋನ್ಸ್ಕೃತೆ ಜಮ್ಮ
ಔನ್ಸ್ಗೆ ಯೇಳ್ತಿವ್ ಕೊಡವಾಂತಂದಿ!
ಕುಡದಂಗ್ ಆಡೋನ್ ಕುಡಕಾ'ಂತ್ ಅಂದಿ
ತೊಡೇನ್ ಅತ್ತಿದ್ದು ಮೆಲ್ಲೆ!
ಕುಡದೋನ್ ಅಂದ್ರೆ ಸಲ್ಲೆ!

ಕತ್ತಿನ್ ಸುತ್ತ ಕೈ ಆಕ್ಕೊಂಡಿ
'ಅಣ್ಣ ರತ್ನ' ಅಂತ್ ನೆಕ್ಕೊಂಡಿ
'ಯೆಂಡದ ಪದಗೊಳ್ ಏಳ್ ನೋಡಾನೆ!
ನಾನೂ ನಿನ್ನಂಗ್ ಕಲ್ತ್ ಆಡಾನೆ!'
ಅಂದ್ಲು ಮೊಕಾನ್ ನೋಡಿ
ಕಣ್ಣ ದೊಡ್ಡುಮಾಡಿ!

ಇಲ್ದಿದ್ ತಂಗಿ ಆಗ್ ವುಟ್ಟದ್ದು
ಪೂವಮ್ಮಾನೆ ನಂಗೆ ಮೊದಲು!
ತಂಗಿ ವುಟ್ಟಿದ್ ದಿವಸಾಂತೇಳಿ
ಆಡ್ದೆ ಯೆಂಗೀಸ್ ಇಡದಂಗ್ ತಾಲಿ–
ಸೂರ್ಯ ಮುಳಗಿದ್ ಕಾಣ್ದೆ!
ಯೆಂಡ ಬೇಕಂತ್ ಅನ್ದೆ!

ರತ್ನ
(ಜಿ. ಪಿ. ರಾಜರತ್ನಂ)

೨೯. ಕುಮಾರವ್ಯಾಸ

ಕುಮಾರವ್ಯಾಸನು ಹಾಡಿದನೆಂದರೆ,
ಕಲಿಯುಗ ದ್ವಾಪರವಾಗುವುದು!
ಭಾರತ ಕಣ್ಣಲಿ ಕುಣಿವುದು; ಮೆಯ್ಯಲಿ
ಮಿಂಚಿನ ಹೊಳೆ ತುಳುಕಾಡುವುದು!

ಆ ಕುರುಭೂಮಿಯು ತೋರುವುದು;
ಆ ರಣರಂಗದಲಿ,
ಆ ಸಂಗ್ರಾಮದಲಿ,
ಪಟುಭಟರಾರ್ಭಟ ಕೇಳುವುದು!
ಮೈ ನವಿರೇಳುವುದು!
ಹೊಳೆಯುವ ಕೈದುಗಳಾಟದಲಿ,
ಕಲಿಗಳ ಕದನದ ಕೂಟದಲಿ,
ತಾಗುವ ಗದೆಗಳ ಸಂಘಟ್ಟಣೆಯಲಿ,
ರಥಚಕ್ರಧ್ವನಿ ಚೀತ್ಕಾರದಲಿ,
ಸಾಯ್ವರ ಶಾಪದಲಿ,
ಬೀಳ್ವರ ತಾಪದಲಿ
ನಸುಸೋತಿರುವರ ಕೋಪದಲಿ,
ನೆರೆ ಗೆದ್ದಿಹರಾಟೋಪದಲಿ,
ಕೆನೆಯುವ ಹಯಗಳ ಹೇಷಾರವದಲಿ,
ಕಿವಿ ಬಿರಿಯುವುದು!
ಎದೆ ಮುರಿಯುವುದು!
ಬಸಿಯುವ ಮಜ್ಜೆಯ ಪಂಕದೊಳೂಡಿ

ಚಿಮ್ಮುವ ರಕ್ತವ ಬುಗ್ಗೆಯ ನೋಡಿ
ಕಣ್ಣೊಡೆಯುವುದು!
ಮೈ ನಡುಗುವುದು!

ಕೇಳಿರಿ! ಪಾರ್ಥನ ಸಾರಥಿಯು
ರಣಗೀತೆಯನು,
ರಣ ನೀತಿಯನು,
ಬೋಧಿಸುವನು ನಿರ್ಭೀತಿಯನು!
ಕುರುರಂಗದ ಶರಶಯ್ಯೆಯಲಿ
ಭೀಷ್ಮನು ಮಲಗಿಹನು!
ಹೆಣಗಳ ಬಣಬೆಯ ಮಂಚದಲಿ
ದ್ರೋಣನು ಬಿದ್ದಿಹನು!
ನೆತ್ತರವೀಂಟುತಲಿರುವನು ಭೀಮನು
ಅಯ್ಯೋ, ನೋಡಲ್ಲಿ!
ರಥದಿಂದುರುಳುತಲಿರುವನು ಕರ್ಣನು,
ಹಾ! ಹಾ! ನೋಡಿಲ್ಲಿ!
ರಣಚಂಡಿಯು ಆ ಬೆಂಕಿಯ ಮಗಳು
ಹೆಣ್ಣಿನ ರೂಪದ ಬರಸಿಡಿಲವಳು!
ಮುಗುಳ್ನಗೆ ಬೀರುತ ನೋಡಲ್ಲಿ
ನಿಂತಿರುವಳು ರಣರಂಗದಲಿ
ದ್ರೌಪದಿ ಮುಡಿಗೆದರಿ!

ವೈಶಂಪಾಯನ ಸರಸಿಯ ತೀರದಿ
ತೋರುವರಾರಲ್ಲಿ!
ಕೌರವದೇವನು ಸಿಡಿಲಾಗಿರುವನು
ಭೀಮನ ಸರಿಸದಲಿ!
ವೈರಿಯ ಎದೆಯನು
ಒಡೆಯುವ ಗದೆಯನು
ಮೇಲೆತ್ತಿರುವನು ನೋಡಲ್ಲಿ!
ಭೀಮನು ಬಿದ್ದನೆ!
ಕೌರವ ಗೆದ್ದನೆ!
ಮುಂದಾಗುವುದನು ಕಾಣಲ್ಲಿ!
ಇದಾವ ನ್ಯಾಯ!
ಏನನ್ಯಾಯ!

ಕೃಷ್ಣನ ಕುಹಕವ ನೋಡಲ್ಲಿ!
ಏನನು ನೋಡುವೆ? ತಡೆಯುವೆ ಏಕೆ?
ಕೌರವರಾಯನು ಮಡಿಯಲಿ ಬೇಕೆ?
ಯುವಕನೆ ತುಡುಕು ಕಠಾರಿಯನು!
ಹೊಡೆ ರಣಭೇರಿಯನು!
ನಡೆ, ನಡೆ, ಊದು ತುತೂರಿಯನು!
ಕರೆ, ರಣಮಾರಿಯನು!

ಕುಮಾರವ್ಯಾಸನು ಹಾಡಿದನೆಂದರೆ,
ಕಲಿಯುಗ ದ್ವಾಪರವಾಗುವುದು!
ಭಾರತ ಕಣ್ಣಲಿ ಕುಣಿವುದು; ಮೈಯ್ಯಲಿ
ಮಿಂಚಿನ ಹೊಳೆ ತುಳುಕಾಡುವುದು!
ಕಲಿ ಕೆಚ್ಚಾಗುವನು!
ಕವಿ ಹುಚ್ಚಾಗುವನು!

ಕೆ. ವಿ. ಪುಟ್ಟಪ್ಪ

೩೦. ಕನ್ನಡನಾಡಿನ ಸ್ಥಿತಿಯನ್ನು ನೆನೆದು

ಹರಿದು ತುಂಡಾಗಿಹುದು ಇಂದು ಕನ್ನಡನಾಡು;
ಅಣ್ಣತಮ್ಮಂದಿರು ತಾವಣ್ಣತಮ್ಮಂದಿರೆಂದು
ತಿಳಿಯಲಾರರು ನಡೆಯಲಾರರು; ಬಾ ಬಂಧು
ಎಂದು ಕರೆಯಲು, ಸ್ವಾಮಿ ನನ್ನೂರು ಧಾರ್ವಾಡ
ನನ್ನೂರು ಮೈಸೂರು, ನನ್ನೂರು ಎರಕಾಡು
ಮರ್ಯಾದೆಯಿಂದ ಕರೆಯಿರಿ ನನ್ನ ಎನ್ನುವರು,
ಕನ್ನಡದ ನಾಡ ಜನವೆಲ್ಲವೂ ನನ್ನವರು,
ಬಡಗ ತೆಂಕಣ ಮೂಡ ಕೊಡಗ ತಾಳವ ತೋಡ
ಇನ್ನೆಲ್ಲ ಕನ್ನಡಿಗರೆನ್ನವರು ಎನ್ನುಸಿರು,
ನಾವೆಲ್ಲ ಒಂದು ಮನೆಯವರಣ್ಣತಮ್ಮಂದಿರು,
ನಮ್ಮೊಳ್ಳರನು ಪಡೆದುದೊಂದೆ ನಾಡಿನ ಬಸಿರು,
ಎಂದು ನಾವರಿದೆವೇ ನಮಗೆ ಇನ್ನಾರೆದುರು!
ಹಾ ನನ್ನ ಸೋದರರೆ ಬನ್ನಿ ಒಂದಾಗಿ;
ಜಯವಧುವ ನಿಮ್ಮ ತೋಳಿನೊಳಿಟ್ಟು ತೂಗಿ.

ಶ್ರೀನಿವಾಸ
(ಪೂರ್ತಿ ವೆಂಕಟೇಶ ಐಯಂಗಾರ್)

೩೧. ಎಂಥ ನಾಡಿದು

ಎಂಥ ನಾಡಿದು ಎಂಥ ಕಾಡಾಯಿತೋ!
ಹುಲುಸಾದ ಬೆಳೆ ಹೋಗಿ ಹುಲ್ಲುಕೊಳೆ ತುಂಬಿಹುದೊ!

ಹಗೆಯ ಹೆಸರನು ಕೇಳಿ ಹುಲಿಯಂತೆ ಹಸುಗೂಸು
ನೆಗೆದು ತೊಟ್ಟಿಲ ತುಳಿದು ಮೆಟ್ಟುತಿಹ ನಾಡಿನಲಿ
ಹಗೆಯ ಊಳಿಗಗ್ತೊಂಡು ನಾಯಿ ಬಾಳುಗಳೀಗ
ಬಗೆ ಬಗೆಯ ಬಾಯ್ತೆರೆದು ಹೇಡಿ ನುಡಿ ಬೊಗುಳುತಿಹವೊ!

ನೂರು ರಾಜ್ಯವ ಕಟ್ಟಿ ಬಾನ ಛತ್ರವ ಹಿಡಿದು
'ಸಾರಿ ಬನ್ನಿರಿ ಸರುವ ಜನಮನವೆ ಮತಗಳೇ'
ಸಾರಿ ಈ ಪರಿ ಬಾಳ್ದ ಸೀಮೆಯಲಿ ಇದುವೀಗ
ಹರಿದು ಹಂಚುವ ಕಲಹ ಕುಲದೈವವಾಗಿಹುದೊ!

ಇಲ್ಲಿಯೇ ಈಸುವುದು ಇದ್ದು ಜೈಸುವುದೆಂಬ
ಎಲ್ಲರೊಡೆಯನ ನಂಬಿ ನಡೆವುದು ಎಂಬ ಆ
ಸೊಲ್ಲೀಗ ಗಾಳಿಯುಯ್ಯಲೆಯಲ್ಲಿ ತೂಗುತಿರೆ
ಒಲ್ಲೆ ಬಾಳನು ಎಂಬ ಗೋಳುಗಳು ಕೇಳುತಿಹವೊ!

ನೆಲದ ಒಳಉರಿಯೆದ್ದು ತೂರಿರುವ ಮೊರಟಾದ
ಸಿಲೆಯ ಸಾವಿರದಿ ಗುಡಿ ಬಸದಿ ರಥ ಗೊಮ್ಮಟರ
ಚೆಲುವು ನನೆಕೊನೆಯಾಗಿ ನಿಲ್ಲಿಸಿದ ನಾಡಿನಲಿ
ಚೆಲುವು, ಕಲೆ, ಹಾಡು, ನುಡಿ ಹೂವುಗಳ ತುಳಿಯುತಿಹರೊ!

ಕಾಲಭೂತದ ಕಠಿಣ ಕತ್ತಲೆಯ ಸೆರೆಯಲ್ಲಿ
ಸಿಲುಕಿರುವ ಪುಲಿಕೇಶಿ ನೃಪತುಂಗ ಬಲ್ಲಾಳ ಹರಿಹರರೆ
ಇಲ್ಲಿಯೇ ಉಸಿರಾಡಿ ಈ ನಾಡು ಕಟ್ಟಿದಾ
ಎಲ್ಲರೇ ಮರಳುವುದು ನಿಮ್ಮ ಸಿರಿ ಸೂರೆಗೈಯೆ.

- ರಂಗನಾಥ ಶ್ರೀನಿವಾಸ ಮುಗಳಿ

೩೨. ಹಂಪೆಗೆ

ನಿದ್ದೆಬಾರದು ಇನ್ನು ಈ ಜನ್ಮಕೆ
ಬಿದ್ದ ಹಂಪೆಯ ಕಂಡು ಕಂಗೆಟ್ಟೆನು

ಕನ್ನಡದ ತಾಯ್‌ಬೇರು ನೀರಡಿಸಿದೆ
ಹೊನ್ನು ಹೊಳೆ ಅದರ ಬಳಿ ತಾಳೊಣಗಿದೆ
ಚೆನ್ನು ಚೆಲುವಿನ ಹಂಪೆ ಹೆಳವಾಗಿದೆ
ಎನ್ನ ತಾಯ್ ಮನೆಧೇನು ಬರಡಾಗಿದೆ



ಹಂಪೆಯ ವಿರೂಪಾಕ್ಷ ದೇವಸ್ಥಾನದ ನೋಟ

ತುಂಗಭದ್ರೆಯ ಕೂಸಿನುಸಿರಡಗಿದೆ
ಮಂಗಳದ ಆ ಹೆಸರು ಹದಗೆಟ್ಟಿದೆ
ಸಂಗಡಲೆ ಬನ್ನಿರೈ! ಕನ್ನಡಿಗರೆ!
ಹಿಂಗದಿರೆ! ಪ್ರೇಮದೊರೆ ಕನ್ನಡಿಗರೆ

ಶತಮಾನ ನಾಲ್ಕಾಯ್ತು ವಿಜಯನಗರಿ
ಅತಿನಿದ್ದ ಗತಿಹೊಂದಿ ಅಮರ ನಗರಿ
ಮತಿಯಿತ್ತು ಧೃತಿಯಿತ್ತು ಕನ್ನಡಿಗರೆ
ಗತಿಸಿರುವ ಕೀರ್ತಿಪದ ಗಳಿಸಿಕ್ಕೊಳಿರಿ

ಗಾಯವನೆ ಮಾಡಿದನು ಮುಸಲಬಂಧು
ಕಾಯದಲೆ ಕೊಲ್ಲಿಸಿದ ಕನ್ನಡಿಗೆನೆಂದು
ತಾಯೆ ಈ ನುಡಿ ಸಲ್ಲ! ಬಲ್ಲ ವಿಧಿಯು!
ಈ ಯುಗಕೆ ಅವರನ್ನು ಮನ್ನಿಸವ್ವ

ಭಿನ್ನ ಮೂರ್ತಿಗಳನ್ನು ನಿನ್ನಂಕದಲ್ಲಿ
ಇನ್ನೆಷ್ಟು ದಿನವಿಟ್ಟು ಗೋಳಾಡುವಿ?
ಮುನ್ನಿನಾ ನೆನಹಿನಲಿ ಹೊನ್ನು ಹೊಳೆಯ
ಕನ್ನಡಿಗ ಹರಿಸುವನು ಕಣ್ಣೊರಸಿಕೊ.

ಹೊಯಿಸಳ

(ಎ. ಲಕ್ಷ್ಮಣರಾವ್)

೩೩. ಹಂಪೀ-ವಿಜಯನಗರ ದರ್ಶನ

ತಾಳವಿಲ್ಲದಲೆ ಬೇತಾಳನಂದದಿ ಕುಣಿವ
ಕಾಳ ನರ್ತಕನ ಕಾಲ್ಕೆಳಗೆ ತೊತ್ತುಳಿಗೊಂಡು
ಹಾಳಾಗಿ ಹುಡಿಗೂಡಿ ಹೋದ ಕನ್ನಡನಾಡಿ-
ಗಿದಿರಾಗಿ ಬಂದು ನಿಂದು.
ಹಾಳುಗಳ ಹೊರವೊಳಗೆ ಹಾಳುಗಳ ಸಾಲುಗಳು
ಬೀಳುಗಳ ಬದಿ ಬದಿಗೆ ಬೀಳುಗಳ ಬಾಳುಗಳು
ಕಾಳರಕ್ಕಸನ ಕಡೆಕೂಳು – ಬಾಳಕವಾದ
ನಾಡ ನಡುಮನೆಯ ಕಂಡೆ.

ಕನಸೆನಲೊ, ಕಾಡುಪಾಲಾದ ಭೂಪಾಲಕನ
ಮನಸೆನಲೊ, ಮೋಡದೊಳು ಮೂಡಿ ಮುಸುಳುವ ಚಿತ್ರ
ವೆನಲೊ, ಕಂಪಡಗಿ ಪೆಂಪುಡುಗಿ ಬಣ್ಣವು ಕೆಟ್ಟ
ನಿರ್ಮಾಲ್ಯ ಮಾಲೆಯೆನಲೊ?

ನೆನಸಿ ಕೃತಕರ್ಮ ಪಶ್ಚಾತ್ತಾಪದಿಂ ಬೆಂದು
ಜನಿಸಿ ಸುಜ್ಞಾನ, 'ಉದ್ಧಾರಮಾಡಿರಿ' ಎಂದು
ಮನಸಿನಿಂದೆರಗಿರುವನೆನಲೊ, ಪಾತಕಿ ಬಂದು
ಪಾವನನ ಚರಣಗಳಿಗೆ.

ಬಿದ್ದ ರಾಜ್ಯವಿದಲ್ಲ ಉದ್ಬುದ್ಧವಾಗಿದ್ದು
ಎದ್ದ ರಾಜ್ಯದ ಮೊಳಕೆಯಿದು, ಇದರ ಬಳಿಯಲ್ಲಿ
ಇದ್ದು ಸಂಜೀವನವ ಜಪಿಸುವಂತಹ ಯೋಗಿ
ಕೊಂಪೆ ಹಂಪೆಯು ಇದಲ್ಲ
ಬುದ್ಧಿಯೆಣಿಸಿತು, ಅಂತರಂಗದಧಿನಾಯಕನು
ಸುದ್ದಿಯನು ಸೂರುವೊಲು ಬುದ್ಧಿಯನು ವಿಾರುವೊಲು
ಎದ್ದು ಹೇಳಿದನೊ ತಾ ಕನಕನೊಡೆಯನು ಪೇಳ್ದ
ಶುದ್ಧ ಮುಂಡಿಗೆಯಿದೆಂದು

ಕರ್ಮಯೋಗಿಯ ಬಳಿಗೆ ಯೋಗೀಶ್ವರನು ನಿಂದು
ಕರ್ಮದ ಅಕರ್ಮದೊಳ ಮರ್ಮಮಂ ತಿಳಿಸಿ ಸದ್-
ಧರ್ಮಮಂ ಸತತ ನಡೆಸಿದರೆ ಧ್ರುವವಿಜಯವೆಂ-
ದಂದು ತೋರಿಸಿದ ತೆರದಿ.
ಧರ್ಮ ಕರ್ಮದ ಪುರಾತನ ಪುರಗಳಿವು ಪೂರ್ವ
ಧರ್ಮ ಬಲದಿಂದೇರಿ ಕರ್ಮ ಬಲದಿಂದಿಳಿದು
ಮರ್ಮದೊಳು ನೆಡುವಂತೆ ಸಪ್ರಯೋಗಿಕವಾಗಿ
ಕಲಿಸುವುವು ತತ್ವವೆಂದು.

ದ. ರಾ. ಬೇಂದ್ರೆ

೩೪. ಕನ್ನಡ ದಾಸಯ್ಯ

ಬೇಡಲು ಕನ್ನಡ ದಾಸಯ್ಯ ಬಂದಿಹ
ನೀಡಿರಮ್ಮಾ! ತಡಮಾಡದಲೇ ॥ ಪ ॥
ಹಾಡೊಂದನಾತನು ಹೊಸದಾಗಿ ಮಾಡಿಹ
ಕೊಡಿರಿ ಕೇಳಿರಿ ಹಾಡುವನು ॥ ಅನು ॥

ಕನ್ನಡ ಮಾತಿನ ತಂದೆತಾಯಿಗಳಿಂದ
ಚೆನ್ನ ಚೆನ್ನೆಯರೆಲ್ಲ ಹುಟ್ಟಿದಿರಿ.
ಕನ್ನಡ ಮಾತಿನ ಜೋಗುಳವನು ಕೇಳಿ
ಕನ್ನಡ ತೊಟ್ಟಿಲೊಳಾಡಿದಿರಿ.

ಕನ್ನಡ ದೇಶದೆ ದೊಡ್ಡವರಾದಿರಿ
ಕನ್ನಡ ವಿದ್ಯೆಯ ಗಳಿಸಿದಿರಿ
ಕನ್ನಡದಿಂದಲೆ ಸಿರಿವಂತರಾದಿರಿ
ಕನ್ನಡ ದೇಶದೆ ಹೆಸರಾದಿರಿ.

ಅನ್ಯ ಭಾಷೆಗಳಂತೆ ಕನ್ನಡ ಭಾಷೆಗೆ
ಉನ್ನತಿಕೆಯ ತರಬೇಕೆಂದು
ಹೊನ್ನು ಕೂಡಿಸಲಿಕ್ಕೆ ಬಂದಿಹನಾತನು
ಮನ್ನಿಸಿ ಹಣವನು ಕೊಡಿರಮ್ಮ.

ಹೊಟ್ಟೆಗಿಲ್ಲದೆ ಬಂದ ದಾಸಯ್ಯನಿವನಲ್ಲ
ಕೊಟ್ಟುದ ಬಿಟ್ಟು ಹೋಗುವನಲ್ಲವು
ದಿಟ್ಟಿಸಿ ದಿಟ್ಟಿಸಿ ಕೊಡಬಂದ ಕೈಗಳ
ನೊಟ್ಟುಗೂಡಿಸಿ ಪದ ಕಟ್ಟುವನು.

ಚಿನ್ನದ ಕಡಗದ ಕೈಕಾಸನಿತ್ತಿತು
ರನ್ನದುಂಗುರದ ಕೈ ಇಲ್ಲೆಂದಿತು
ಹೊನ್ನ ವಂಕಿಯ ಕೈ ಸುಮ್ಮನೆ ಕುಳಿತಿತು
ಇನ್ನೊಂದು ಬಳೆಗೈ ಹಣಕೊಟ್ಟಿತು.

ಕೊಟ್ಟರೆ ಹಿಗ್ಗುವ ಕೊಡದಿರೆ ಕುಗ್ಗುವ
ಕೆಟ್ಟಮನದ ಗುರುತಿವಗಿಲ್ಲವು
ಕೊಟ್ಟ ಕಾಸುಗಳೆಲ್ಲ ಹೆಡಿಗೆ ತುಂಬುವ ಹೊನ್ನು
ಇಟ್ಟಂಥ ನಿಧಿ ಕೊಡದಿಹ ದ್ರವ್ಯವು.

ಕಾಸಿಗಲ್ಲವು ನಿಮ್ಮ ಸೋಸಿಗೆ ಬೆಲೆಯಿದೆ
ಕಾಸಲ್ಲವೇ ಕೋಟಿಯ ಮೂಲವು
ಈ ಶಾಸ್ತ್ರವ ಶಾಂತವಿಟ್ಠಲನೋಳ್ ಕಲಿತನು
ಸಾಸಿರವಿದರಂತೆ ತಂದಿಹನು.

ಶಾಂತಕವಿ

೩೫. ತರುಣರ ದಸರೆ

ಹಜ್ಜೆಯ ಹಾಕುತ ಬನ್ನಿರಿ ಮುಂದೆ
ನೋಡಲು ದಸರೆಯ ಹಬ್ಬವನು
ಉತ್ಸಾಹದ ಕಿರುಗೆಜ್ಜೆಯ ಕಟ್ಟಿ
ಹಾಡಿರಿ ನಾಡಿನ ಕಬ್ಬವನು.

ಹಬ್ಬಗಳೆಲ್ಲಾ ದಸರೆಯ ಹಬ್ಬ ;

ಕಬ್ಬಗಳೆಲ್ಲಾ ರನ್ನನ ಕಬ್ಬ;
ತಿಂಡಿಗಳೆಲ್ಲಾ ಬುಂದಿಯ ಲಾಡು
ಧರೆಯೊಳಿಗೆಲ್ಲಾ ಕನ್ನಡನಾಡು
ನಾಡಿನ ಹಾಡನು ಹಾಡುತ ಬನ್ನಿ!
ದಸರೆಯ ಹಬ್ಬವ ನೋಡಲು ತನ್ನಿ!

ಮೋಡಗಳೆಲ್ಲವು ಸರಿದುವು ಹಿಂದೆ
ಆಗಸವೆಲ್ಲಾ ಬಿಳುಪಾಯ್ತು.
ಚಳಿಗಾಲೆಂಬೋ ಸಗ್ಗದ ಅಗಸ
ಗಗನವ ತೊಳೆದನು! ನೆನಪಾಯ್ತು!
ಬೆಳಕೇ ಇಲ್ಲದ ಮಳೆಗಾಲ
ಹಿಂದಕೆ ಸರಿಯಿತು ಆ ಕಾಲ
ಮೂಡಿದೆ ಬೆಳಕಿನ ಚಳಿಗಾಲ
ಜ್ಞಾನವ ಬೀರುವ ನವಕಾಲ
'ಮುಗಿಲಿನ ಮಳೆ ಮುಗಿಯಿತು' ಅನ್ನಿ
ನಗುಮಳೆಯನು ಸುರಿಯುತ ಬನ್ನಿ!

'ಸೀಮೋಲ್ಲಂಘನ'ಮಾಡಿರಿ ಇಂದು
ಭೀತಿಯ ಸೀಮೆಯ ದಾಟುತಲಿ,
ಧೈರ್ಯಧ್ವಜವನು ಮೆರಸುತ ಮುಂದು
ನಡೆಯಿರಿ ನೀತಿಯ ನಾಡಿನಲಿ,
ಧರ್ಮದ ಗಡಿಯನು ದಾಟಲು ಬೇಡಿ
ಕರ್ಮದ ಕೋಲನು ಬಿಡದಲೆ ಓದಿ,
ಮರ್ಮವ ತಿಳಿದೆಲ್ಲರು ಹಾರಾಡಿ
ಚರ್ಮದ ದೇಹದ ಸಾರ್ಥಕ ಮಾಡಿ,
'ಬನ್ನಿಯ ಗಿಡ ಬಂದಿತು' ಅನ್ನಿ
ಚಿಣ್ಣರೆ, ನೀವೆಲ್ಲರು ತನ್ನಿ.

'ಹಿಂದಿನ ಕಾಲವು ಹಿಂದಕೆ' ಅನ್ನಿ,
ಮುಂದಿನ ಕಾಲವು ನಮ್ಮುಂದೆ,
ನಾಡಿನ ಯುವಕರೆ, ಮುಂದಕೆ ಬನ್ನಿ
ಮುದುಕರು ನಿಲ್ಲಲಿ ಹಿಂದ್‌ಹಿಂದೆ,
ಹೊಸ ಹೊಸ ಮತಗಳ ಬಗೆಬಗೆ ಹುರುಪಿನ
ಚೆನ್ನ ಚಟಾಕಿಯ ಹಾರಿಸುವ
ಕೆಂಪಿನ ವರ್ಣದ ಕೆಚ್ಚಿದೆ ಬಣ್ಣದ
ಕಿಡಿಗಳನವರಿಗೆ ತೋರಿಸುವ.

ಮುದುಕರು ನಿಲ್ಲಲಿ ತುಸು ಹಿಂದೆ
ಹುಡುಗರ ಸಾಹಸ ಏನೆಂಬೆ!
ಮುದುಕರು ಪಾಪ! ಕಂಗಳು ಮುಂದ
ಮುಂದಿನ ನೋಟವ ನೋಡಲು ಅಂಧ,
ಹೊಸ ಹೊಸ ರೀತಿಯ ದೂರುವರು
ಹಳೆಯ ಪುರಾಣವ ಹೇಳುವರು.
ಅಂಧ ಭಕ್ತಿಗೆ ಉರಿಯನು ಒಡ್ಡಿ
ನಿಲ್ಲಿರಿ ಎಲ್ಲರು ಗೋಲಾಗಿ,
ಚಂದದಿಂದ ಚಪ್ಪಾಳೆಯ ತಟ್ಟುತ
ಮುಂದಕೆ ನಡೆಯಿರಿ ಸಾಲಾಗಿ
ದೊಡ್ಡ ಮನಸಿನ ಕುದುರೆಯ ಹತ್ತಿ,
ಕೈಯಲಿ ಹಿಡಿಯಿರಿ ಧೈರ್ಯದ ಕತ್ತಿ;
ಹಿಂದು ಧರ್ಮದಾ ಫೇಕಾ ಸುತ್ತಿ
'ಆತ್ಮಸಂಯಮನ' – ಲಗಾಮು ಜಗ್ಗಿ,
ದುಗುಡವ ಬಗ್ಗಿಸಿ, ಹಿರಿ ಹಿರಿ ಹಿಗ್ಗಿ,
ಎಲ್ಲ ಜಾತಿಗಳ ಗುಂಪನು ನುಗ್ಗಿ,
ಭೇದವನೊಡೆಯಿರಿ ತಲೆಯನು ಬಗ್ಗಿ;
ಆಗ ನಲಿಯುವುದು ಸಂತಸ ಸುಗ್ಗಿ
ಭಾರತಭೂಮಿಯ ಅಬಲತೆ ಕುಗ್ಗಿ.
ಅಂದು ಮೂಡುವನು ದಸರೆಯ ಅರುಣ
ಅಜ್ಞಾನದ ಕತ್ತಲೆಗದು ಮರಣ.
ಮಾನವ ಧರ್ಮದ ದಸರೆಯ ಮಾಡಿ
ಕನ್ನಡನಾಡಿನ ಹಾಡನು ಹಾಡಿ.

ದಿನಕರ ದೇಸಾಯಿ

೩೬. ಶ್ರೀ ಕೃಷ್ಣರಾಜ ರಜತಮಹೋತ್ಸವ ಪ್ರಗಾಥ

೧

ಕಾಯಿ, ತಾಯಿ, ಕೃಪೆಯ ತೋರಿ
ನಮ್ಮ ಕೃಷ್ಣನ;
ಬೆಳ್ಳಿಬೆಟ್ಟದೊಡತಿ ಗೌರಿ,
ಬೆಳ್ಳಿಯೊಸಗೆಗೊಸಗೆ ಬೀರಿ
ಕಾಯಿ ಕೃಷ್ಣನ.

ಏಳು, ವಾಣಿ, ವೀಣೆದಾಳು,
ಅಮೃತವಾಣಿಯಿಂದ ಹೇಳು
ಪುಣ್ಯದರಸು, ಧರ್ಮದಾಳು,
ದೊರೆಯ ಕೃಷ್ಣನ.
ಹೊನ್ನು ನಡೆಯ, ಹೊನ್ನು ನುಡಿಯ,
ಕನ್ನಡಿಗರ ವಯಿರಮುಡಿಯ,
ಒಡೆಯ ಕೃಷ್ಣನ.

೨

ಏನು ಲಲಿತಾದ್ರಿಯಲಿ ಬೆಳಕುಗಳುಷೆಗೆ ಕಾಂತಿಯನೀವುವು!
ಮೇಲಕೇರುವ ಬೆಳಕದಾವುದು? ಇಳಿವ ಬೆಳಕುಗಳಾವುವು?
ಆವ ದೇವಿಯರಿವರು ಮೂವರು?– ಕನ್ನಡದ ಸಿರಿಯೊಬ್ಬಳು.
ಅಕ್ಕತಂಗಿಯರಂತೆ ತಬ್ಬುತ, ಕಡಲ ರಾಣಿಯದೊಬ್ಬಳು,
ಶ್ರೀ ಭರತಮಾತೆಯದೊಬ್ಬಳು:
ತನ್ನ ಮಕ್ಕಳ ಬೀರಗನಸುಗಳುಬ್ಬುತಿರೆ ನಸುನಗುವಳು;
ಭರತಮಾತೆ! ಪ್ರೇಮಮಾತೆ!
ಮಹಿಮೆಯಲಿ ಕಳೆ ಮಿಗುವಳು.
ಗೌರಿಯೋಲಗದಿಂದ ಬಂದಳು, ಪೂರ್ಣಕುಂಭವ ತಂದಳು;
ದೂರ ವಿನಯದಿ ನಿಂದ ಕನ್ನಡ ಹೆಣ್ಣು ಬಳಿಯಲಿ ನಿಂದಳು;
ಕಳಶವಿತ್ತಿಂತೆಂದಳು–
"ಬಾಳು, ಕನ್ನಡದರಸಿ, ಗೌರಿಯ ಕೃಪೆಯ ಸುಧೆಯನು ಚೆಲ್ಲಿಸು.
ಕೃಷ್ಣರಾಜನ ಕೀರ್ತಿ ಹಬ್ಬಿದ ಚೆಲುವು ನಾಡನು ಗೆಲ್ಲಿಸು.
ಕೃಷ್ಣರಾಜನ ಸಿರಿಯ ಮುಡಿಯಲಿ ಸಕಲ ಭಾಗ್ಯವ ಸಲ್ಲಿಸು.
ತನ್ನ ಬಾಳನು ನಾಡ ಮೇಲ್ಮೆಗೆ ಮುಡಿಪು ಕಟ್ಟಿದ ಧೀರನು.
ತನ್ನ ಗುರಿಯನು ಬಿಡದೆ ಕೊಳುವನು, ಆತ್ಮಗುಣದಲಿ ವೀರನು.
ಹೋಗು, ಸೊಬಗಿಯೆ, ಬಾಳು"– ಎಂದಳು.
ಬಳಿಯ ಕೆಳದಿಯ ಕೈಯ ಕೊಂಡಳು;
ಮುಗಿಲ ಮರೆಯಲಿ ಸಂದಳು.

೩

ಮಂಗಳ ಮಸಗಿತು ಮೈಸೂರರಮನೆ; ಸಿಂಗರವಾಯಿತು ಮೈಸೂರು.
ಕೃಷ್ಣನ ವೈಭವವೆಲ್ಲವ ತೋರುವ, ಸಾರುವ ಮಿಗಿಲುವ ಮೈಸೂರು,
ನಾಲ್ಮಡಿ ಕೃಷ್ಣನ ಮೈಸೂರು.

ಬೆಟ್ಟವೊ, ಕೆರೆಯೋ, ಬೀದಿಯೊ, ಬನವೋ, ಮನೆಯೋ, ಮಹಲೋ, ಎಲ್ಲೆಲ್ಲು,
ದಟ್ಟಗೆ ಕೂಡುವ, ಭಕ್ತಿಯನಾಡುವ, ಹರ್ಷವ ತೋಡುವ ಸವಿಸೊಲ್ಲು,
ನಾಲ್ಕಡಿ ಕೃಷ್ಣನ ಸವಿಸೊಲ್ಲು.
ಎಳೆಯರು ನಾಡಿನ ಬೆಳೆಸಿರಿಮೊಳೆಗಳು, ಆಡಿ, ಪಾಡಿ, ಕುಣಿಕುಣಿದಾಡಿ,
ಓದುವ ಹೆಣ್ಗಳು ಗಂಡುಗಳುಲಿವರು, ಸಸಿಯನು ನೆಡುವರು, ಕೊಂಡಾಡಿ,
ನಾಲ್ಕಡಿ ಕೃಷ್ಣನ ಕೊಂಡಾಡಿ.
ಅರಿವನು ಹರಡುವ, ಸಿರಿಯನು ಬೆಳಸುವ, ಪರಿಪರಿ ಕೃಷಿಯನು ರೂಡಿಸುವ,
ತನ್ನೊಂದೊಲುಮೆಗೆ ಮರುಗಿಸಿ ಹಲಬಗೆ ನಾಡಿಗರೊಂದೆನೆ ಕೂಡಿಸುವ,
ಆಡುವ, ಹಾಡುವ, ಬರೆಯುವ, ಕೊರೆಯುವ, ಕಟ್ಟುವ ಕಳೆಗಳ ಹೂಡಿಸುವ,
ಹೊಸ ಹೊಸ ತೆರದಲಿ ಮನವನು ಮುಟ್ಟುವ ಕವಿಗಳಿಗುತ್ಸವ ಮಾಡಿಸುವ,
ಪ್ರೇಮದ ಸ್ವಾಮಿಗೆ, ಕೃಷ್ಣಗೆ, ಹಿರಿಯರು ಬಿನ್ನಹಗೈವರು ತಲೆಬಾಗಿ,
ನೆಚ್ಚಿನ ಮೆಚ್ಚಿನ ಬಿನ್ನಹ ಕರಗಿಸೆ, ಹೃದಯವನೆರೆವನು ಮುಡಿಪಾಗಿ,
ನಾಲ್ಕಡಿ ಕೃಷ್ಣನ ಮುಡಿಪಾಗಿ.
ಕನ್ನಡ ದೇವಿಯ ಬಯಕೆಯ ಕಳಶದ ಸುಧೆ ಸುರಿದೆತ್ತಲು ಚೆನ್ನಾಯ್ತು;
ಪ್ರೇಮದ ಸ್ವಾಮಿಯ ಕೃಷ್ಣನ ಭಕ್ತಿಯ ರಸ ಹರಿದೆತ್ತಲು ಹೊನ್ನಾಯ್ತು.
ಮಂಗಳಮಯವಾಯಿತು ನಾಡು;
ಸಿಂಗರದಾ ಕನ್ನಡನಾಡು.
ಪಡುಗಡಲಿನ ತೆರೆ ಮುದ್ದಾಡುವ ಕರೆ, ಹೊಳೆ ಹಾಲಿಳಿಯುವ ಫಟ್ಟದೆರೆ,
ಪಂಪನ ರನ್ನನ ಪುಟವಿಡಿಸಿದ ಕಡೆ, ಹಂಪೆಯ ತಾಂಡವವಾಡಿದೆಡೆ,
ಹೊಯ್ಸಳರೆತ್ತಲು ಕಡೆಯಿಸಿ ನಿಲಿಸಿದ ಗುಡಿಗಳ ಸೊಬಗಿನ ಕಣ್ಣಸೆಳೆ,
ಜಲಜಲನುಕ್ಕುವ ಕಾಲುವೆ ಬಯಲಲಿ ಪಚ್ಚೆಯ ಪಯಿರಿನ ತುಂಬು ಬೆಳೆ–
ಮಂಗಳಮಯ ತಾನೆತ್ತಲು ನಾಡು,
ಸಿಂಗರದಾ ಸಿರಿಗನ್ನಡನಾಡು.
ಅತ್ತಲು, ತಾನೆತ್ತೆತ್ತಲು, ಒಮ್ಮನ, ಒಕ್ಕೊರಲಾಗುತ ಜನ ಕೂಡಿ,
ನಿರ್ಮಲ ಚಿತ್ತನ, ಪುಣ್ಯ ಚರಿತ್ರನ, ಕೃಷ್ಣನ ಹರಸುತ ಜನ ಹಾಡಿ,
ಜಯ ಜಯ ಎಂಬರು, ಬೆಳೆ ಬಾಳೆಂಬರು,
ನಿನ್ನದು ಕನ್ನಡದೆದೆಯೊಲವೆಂಬರು–
ಮಂಗಳ ಮಸಗಿತು ಮೈಸೂರರಮನೆ; ಧನ್ಯತೆ ಪಡೆಯಿತು ಮೈಸೂರು,
ಕನ್ನಡನಾಡಿನ ಮನ್ನಣೆ ಪಡೆಯಿತು ನಾಲ್ಕಡಿ ಕೃಷ್ಣನ ಮೈಸೂರು.

೪

ಎಂತೆನ್ನ ಬಗೆ ಹಾರುವುದು ನೆಗೆದು ಸಂದು
ಮೈಸೂರ ಮೊತ್ತಮೊದಲೊಸಗೆ ಬೆಳೆದಂದು!

ಸೆರೆಯಿಟ್ಟು ಕಾಡಿದಾ ಖೂಳನನು ಕೊಂದು,
ಅರಸರರಸಿಯರೆಲ್ಲ ಹರಸುತಿರೆ, ಬಂದು,
ಕೈ ಹಿಡಿದ ರಾಣಿಯನು ನಗುತ ಕರೆತಂದು,
ಮುದ್ದಾದ ಮೈಸೂರ ತಾವರೆಯ ತಂದು,
ದೇವಿ ಚಾಮುಂಡಾಂಬೆಯೆದಿರಿನಲಿ ನಿಂದು,
ಕೈಮುಗಿದು ಬೇಡಿದನು ಯದುರಾಯನಂದು:
"ಕಾಯಿ, ತಾಯಿ, ಕೃಪೆಯ ತೋರಿ,
ನಿನ್ನ ಮಗನನು;
ನಲುಗಿ, ನಿನ್ನ ನೆರಳ ಸೇರಿ
ನಲಿವ ಹೆಣ್ಣನು.
ಧರ್ಮದೊಲವ ನಮಗೆ ನೀಡು,
ಸತ್ಯ ನಿಲಿಸುವಂತೆ ಮಾಡು,
ಹಿರಿಯ ಮೈತ್ರಿಗಳನು ಕೂಡು,
ಕರುಣದಿಂದ ಬಿಡದೆ ನೋಡು,
ಕಾಯಿ, ತಾಯಿ, ನಮ್ಮ ನಾಡು,
ನಮ್ಮ ಮನೆಯನು,
ನಡಸಿ, ಬೆಳಸಿ, ಹಿರಿದುಮಾಡು
ನಮ್ಮ ಮನೆಯನು."

೫

ಇಂತೆಂದು ಬೇಡಿದನು ಮೈಸೂರ ಮನೆತನದ ಮೊದಲಿಗನು ಬಾಗಿ,
ಮನಮುಳುಗಿ ಭಕ್ತಿಯಲಿ. ಚಿತ್ರದಾಳುಗಳಂತೆ ನಿಶ್ಶಬ್ದವಾಗಿ,
ಮೂಡುವಚ್ಚರಿ ಹದವ ಹಾರುತ್ತ, ಸಭೆಯೆಲ್ಲ, ಎವೆ ಹೊಯ್ಯದಲ್ಲಿ
ನಿಂದಿಹುದು. ಅಹ! ಅಲುಗಿತಭಯಹಸ್ತದ ಹೂವು; ಸಿಡಿದು ಮುಡಿಯಲ್ಲಿ
ನೆಲಸಿದುದು, ಯದುರಾಯ ಮುಕುಟದಲಿ, ದೇವಿಕೆರೆ ಸಂಪಗೆಯದೊಂದು.
ಕೂಗಿದಳು ನೆರವಿಯಲಿ ಮುತ್ತೈದೆ, ಬೆದರಿದಳು ಮೈಮೇಲೆ ಬಂದು,
ಕೆದರಿದಳು ಬಿರಿದಲೆಯ ನರೆನವಿರ, ಬಿರುಬಿರನೆ ಕಣ್ತೆರುಹಿ, ನಕ್ಕು,
ಕದಡುಬಗೆ ತಿಳಿಯಾಗಿ, ದೂರದೆಸೆ ಬಳಿಯಾಗಿ, ಮುಂದಹುದ ಹೊಕ್ಕು,
ನುಡಿದಳವಳಂದು—
ಹಣ್ಮುದುಕಿ ನೋಟವನು ನುಡಿದಳವಳಿಂದು—
ಗಿರಿಯ ನೆತ್ತಿಯ ಮೇಲೆ ಗಂಭೀರಘೋಷದಲಿ ಗುಂಪಿನಲಿ ಬಂದು
ಮಳೆ ಕುಡಿವ ಹಕ್ಕಿವೊಲು ಕುಡಿಯುತಿರೆ ಕನ್ನಡದ ಕಲಿಗಳಾ ಸಿರಿಯ,
ಪಾವನದ ಮುತ್ತೈದೆ ಸವಿಗರೆದು ನುಡಿದಳಾ ಮೈಸೂರ ಸಿರಿಯ,
ಕನ್ನಡದ ನಾಡ ಸಿರಿಯ.

೬

"ಮೆಚ್ಚಿದೆನು, ಮೆಚ್ಚಿದೆನು, ವಿನಯನಿಧಿ; ನನ್ನೊಲುಮೆಗುವರಿ, ಈ ಅರಸಿ,
ಚಿಕ್ಕದೇವಾಂಬೆಯನು ದುಃಖವಾವರಿಸುತಿರೆ, ಅದ ನಿನ್ನ ಕರಸಿ,
ಪರಿಹರಿಸಿ, ರಾಜ್ಯವನು ನಿನ್ನ ತೋಳಿನಲಿರಿಸಿ ಕಾಯುವೆನು, ಬಾಳು.
ಕೃಷ್ಣದೇವನ ಕುಲದ ನೆಲದರಿಕೆಯಾಳಿಕೆಯ ಹೆಮ್ಮೆಯಿಂದಾಳು.
ನಿನ್ನ ಮಕ್ಕಳ ಸಾಲು ಕುಡಿಯೊಡೆದು ಹಬ್ಬುವುದು, ಬೆಳಗುವುದು ಬೀಡು;
ಕಡೆಗಾಣದಂತೆಂತು ನಿಮಿರುವುದು ಯಾದವರ ಸಂತಾನ, ನೋಡು;
ಕರ್ಣಾಟಚಕ್ರವರ್ತಿಗಳು, ಹೊಳೆಹೊಳೆಯುತಿಹರೆಂತು ಹೆಸರಾಂತು!
ರಾಜೊಡೆಯ, ನರಸಿಂಹ, ಚಿಕದೇವ, ಮುಮ್ಮಡಿಯ ಕೃಷ್ಣೇಂದ್ರನಿಂತು,
ಹೊಸಯುಗದ ಚಾಮೇಂದ್ರ– ಹಿರಿಯರೆಲ್ಲರ ಪುಣ್ಯ ಫಲಿಸಿ ಬಂದಂತೆ,
ನಿರ್ಮಲದ ಗಗನದಲಿ ನೆಲಸಿ ಶಾಂತಿಯೊಳಿರುವ ಚಂದ್ರನೆಂಬಂತೆ,
ನಾಲ್ಮಡಿಯ ಶ್ರೀ ಕೃಷ್ಣ– ಶ್ರೀ ಕೃಷ್ಣ– ಸಾಕೆನಿತು ಮಾತಿನಿತು ಸಾಕು.
ಪರಮತೇಜಸ್ವಿಗಳು, ರಣಧೀರರಪ್ರತಿಮವೀರರಾಗಿದ್ದು,
ಚಕ್ರವನು ತಡೆಯಿಲ್ಲದೋಡಿಸುತ, ಆಡುತ್ತ ದುರ್ಗಗಳ ಗೆದ್ದು,
ಯುದ್ಧಕಾನಂದಿಸರು; ಕತ್ತಿಹೊಳಪನು ಚಿನ್ನದೊರೆಯೊಳಗೆ ಮರಸಿ,
ತೊಡವೆನಿಸಿ ಮಡಗಿಹರು, ಶಾಂತಿಯಲಿ ಮನಸೋತು ಸಾತ್ವಿಕವನರಸಿ.
ಸೌಮ್ಯಮೂರ್ತಿಗಳವರು, ಸಾಧುಗಳು, ಪ್ರೇಮಿಗಳು, ಭಕ್ತಿಬೋಧಕರು,
ಕಾವ್ಯರಸಿಕರು, ಗಾನಕೌಶಲರು, ಕಲ್ಯಾಣಕಾರ್ಯಸಾಧಕರು.
ಗುರುಗಳನು ಹಲವರನು ಸೇವಿಸುತ, ಧರ್ಮಸಾರವನು ಕಡೆಯುವರು,
ಸ್ವಾಮಿಭಕ್ತಿಯೊಳೆರಡನೆಣಿಸದೆಯೆ, ತಮ್ಮೊಡೆಯತನವ ನಡೆಯುವರು.
ಬ್ರಹ್ಮದಲಿ, ಕ್ಷಾತ್ರದಲಿ, ನೀತಿಯಲಿ, ನೆರೆ ಪಳಗಿ ಮೈಮೆವೆತ್ತಿಹರು.
ಒಮ್ಮೆ ನಾಡನು ತಿರುಗಿ ಹಳ್ಳಿಗರ ನೆಮ್ಮದಿಯ ನೇರ್ಪಡಿಸುತಿಹರು.
ಒಮ್ಮೆ ಹೊಳಲನು ಮೆರೆದು ಮಿತ್ರರಾಜರ ಬರಿಸಿ ಸುಖಗೊಳಿಸುತಿಹರು.
ಹೊಳೆಗಳನು ತಡೆಗಟ್ಟಿ ಬೆಂದ ಕಾಡನು ಬೆಳಸಿ ಹಸುರೆರಚುತಿಹರು.
ಬೆಟ್ಟದಲಿ ವಿಹರಿಸುತ ಜಾತ್ರೆಗಳ ಸಂಭ್ರಮಕೆ ಸಡಗರಿಸುತಿಹರು.
ಜ್ಞಾನಿಗಳ ಗೋಷ್ಠಿಯಲಿ ಕೇಳುವರು, ಬರಸುವರು, ತಾವೆ ಬರೆಯುವರು.
ಪ್ರಜೆಗಳೊಲುಮೆಯ ಸೆಳೆದು, ರಾಜರಲಿ ಗಣ್ಯತೆಯ ಪಡೆದು ಮೆರೆಯುವ್ತರು.

ಮೈಸೂರರಸರ ಮೊದಲಿಗ, ನೋಡು,
ಇಂತಹ ದೊರೆಗಳ ಸೇರಿದ ನಾಡು,
ಸಿಂಗರದಾ ಸಿರಿಗನ್ನಡನಾಡು,
ಮಂಗಳಮಯದಾ ನನ್ನೀ ನಾಡು,
ಕಂದದು, ಕುಂದದು, ಕೊರಗದು, ನೋಡು,
ಮೈಸೂರರಸರ ಅರಮನೆ, ನೋಡು

ಉರಿ ಕೊಳೆ ಸಗ್ಗದೆ ಶಿಲೆಯಲಿ ಬೀಡು
ಉರಿಯನೆ ಹೊದೆಯುತ ನಗುವುದು ನೋಡು,
ಹೊಳೆವುದು, ಬೆಳೆವುದು, ಸೆಳೆವುದು, ನೋಡು,
ಸುಖದಲಿ ನೆರೆದಾ ಜನವನು ನೋಡು.
ನಾಲ್ಮಡಿ ಕೃಷ್ಣನ ಹರಸುವರು;
ಆತನ ಸುಖದಲಿ ಬೆರಸುವರು;
ಇಂತಹ ಜನವನು, ನಾಡನು, ದೊರೆಯನು
ನಾನೆಂದೆಂದೂ ಹರಸುವೆನು,
ನಾನೆಂದೆಂದೂ ಕಾಯುವೆನು,
ಕಾಯುವೆನು.''

೭

ಕಾಯಿ, ತಾಯಿ, ಗೌರಿದೇವಿ, ಕೃಷ್ಣರಾಜನ!
ಬೆಳ್ಳಿಬೆಟ್ಟದೊಡತಿ, ಗೌರಿ,
ಬೆಳ್ಳಿಯೊಸಗೆಗೊಸಗೆ ಬೀರಿ
ಕಾಯಿ ಕೃಷ್ಣನ.
ಕನ್ನಡಿಗರ ವಯಿರಮುಡಿಯ ರಾಯ ಕೃಷ್ಣನ!

ಶ್ರೀ

✓

೩೭. ಕನಸಿನೊಳಗೊಂದು ಕಣಸು

'ಯಾರು ನಿಂದವರಲ್ಲಿ ತಾಯೆ!' ಎಂದೆ!
'ಯಾರು ಕೇಳುವರೆನಗೆ ಯಾಕೆ ತಂದೆ?'

'ಬೇಸರದ ದನಿಯೇಕೆ ಹೆಸರ ಹೇಳಲ್ಲ.'
'ಹೆಸರಾಗಿಯೂ ಕೂಡ, ಹೇಳಹೆಸರಿಲ್ಲ.'

'ನೀನಾರ ಮನೆಯವಳೊ ಮುತ್ತೈದೆ ಹೇಳು.'
'ನಾನಾರ ಮನೆಯವಳೊ ಬಯಲನ್ನೆ ಕೇಳು.'

'ಆಪ್ತರಿಲ್ಲವೆ ನಿನಗೆ ಇಷ್ಟರಿಲ್ಲೇ?'
'ಗುಪ್ತರಾದರೊ ಏನೊ ಇಷ್ಟರಲ್ಲೇ!'

'ಇರುವರೇ ಇದ್ದರೇ ಮಕ್ಕಳೆಂಬವರು?'
'ಇರುವರೆಂದರು ಕೂಡ ಯಾರು ನಂಬುವರು?'

'ಮನೆಯಿಲ್ಲವೇ ಇರಲು ಪರದೇಶಿಯೇನು?'
'ಮನೆಯೆ ಮುನಿದೆದ್ದಿರಲು ಯಾ ದೇಶವೇನು?'

'ನಿನ್ನ ಮಾತಿನಲಿಹುದು ಒಡಪಿನಂದ.'
'ನನ್ನ ಹತ್ತಿರದೊಂದೆ ಉಳಿದಿಹುದು ಕಂದ.'

'ರಾಜಮುಖಿ ನಿನ್ನಲ್ಲಿ ರಾಜಕಳೆಯಿಹುದು.'
'ಸಾಜವಾದರು ಪಕ್ಷವಿದು ವದ್ಯವಹುದು.'

'ಯಾವುದಾದರ ನಾಡದೇವಿಯೇ ನೀನು?'
'ಭಾವುಕರ ಕಂಗಳಿಗೆ ದೇವಿಯೇ ನಾನು.'

'ಈಗ ಬಂದಿಹುದೇಕೆ ಏನು ಬೆಸನ?'
'ಯೋಗವಿಲ್ಲದೆ ತಿಳಿಯದೆನ್ನ ವೆಸನ!'

'ಹಾದಿ ಯಾವುದು ಹೇಳು ಯಾವ ಯೋಗ?'
'ಆದಿ ಅಂತವು ಇಲ್ಲದಂಥ ತ್ಯಾಗ!'

'ಬೇಡ ಬಂದಿಹೆ ಏನು ಏನಾದರೊಂದು?'
'ಬೇಡಿದರೆ ಬೇಡಿದುದ ಕೊಡುವೆಯಾ ಇಂದು?'

'ಅಹುದು ಕೊಡುವೆನು ಎಂದು ನಾನೆನ್ನ ಬಹುದೇ?'
'ಬಹುದುಗಿಹುದಿನ ಶಂಕೆ ವೀರನಹುದೇ?'

'ಹಿಂಜರಿವ ಅಂಜಿಕೆಯು ಹಿಡಿದಿಹುದು ಕೈಯ.'
'ಮುಂಜರಿವ ಹುರುಪಿನೊಡ ಮುಂದೆ ಬಾರಯ್ಯ.'

'ಇಲ್ಲೆನ್ನ ಲಾರೆ ನಾನಹುದೆನ್ನ ಲಮ್ಮೆ.'
'ಬಲ್ಲವರು ದೈವವನು ಪರಿಕಿಸುವರೊಮ್ಮೆ.'

'ಚಂಡಿ ಚಾಮುಂಡಿ ಪೇಳ್ ಬೇಕಾದುದೇನು?'
'ಗಂಡುಸಾದರೆ ನಿನ್ನ ಬಲಿಕೊಡುವೆಯೇನು?'

* * *

ಮನವು ನಡುಗಿತು ತನುವು ನವಿರಿಗೊಳಗಾಯ್ತು;
ನೆನವು ನುಗ್ಗಿತು – ಹೊರಗೆ ಕಂಡೆ – ಬೆಳಗಾಯ್ತು.

ಅಂಬಿಕಾತನಯದತ್ತ

(ದ. ರಾ. ಬೇಂದ್ರೆ)

೩೮. ಭಾರತ ತಪಸ್ವಿನಿ

ವೇದಋಷಿ ಭೂಮಿಯಲಿ ನಾಕನರಕಗಳಿಂದು
ಸಾವು ಬದುಕಿನ ಕಟ್ಟಕಡೆಯ ಹೋರಾಟದಲಿ
ಸಂಧಿಸಿವೆ. ಮಾನವನೆದೆಯ ಕಾಳಕೂಟದಲಿ
ಅಮೃತವನೆ ಹಾರೈಸಿ ಬಲಿರಕ್ತದಲಿ ಮಿಂದು

ಕಾದಿಹೆವು ಕಣ್ಣೀರು ತುಂಬಿ. ನಾಗರಿಕತೆಯ
ನಾಗಿನಿಯು ಪ್ರಗತಿನಾಮಕ ಫಣಿಯಮೇಲೆತ್ತಿ
ಚುಂಬಿಸಿಯೆ ಕೊಲ್ಲಲೆಳಸುತಿದೆ.– ಹಿಂದಿನ ಬುತ್ತಿ
ಸಮೆಯುತಿದೆ. ಇಂದಿಹ ಮಹಾತಪಸ್ಸಿನ ಚಿತೆಯ
ರಕ್ತಿಮ ವಿಭೂತಿಯೊಳೆ ಮುಂದಿನ ನವೋದಯದ
ಧವಳಿಮ ಪಿನಾಕಧರನೈತಹನು: ಮತ್ತೊಮ್ಮೆ
ಭಾರತಾಂಬೆಯು ಜಗದ ಬೆಳಕಾಗುವಳು; ಹೆಮ್ಮೆ
ಗೌರವಗಳಿಂದ ಜನಗಣದ ಕಟುನಿರ್ದಯದ
ಲೋಭ ಬುದ್ಧಿಯ ಹೀನ ಕುಟಿಲತೆಯನುರೆ ನೀಗಿ
ಮೆರೆವಳು ತಪಸ್ವಿನಿಯೆ ಚಕ್ರವರ್ತಿನಿಯಾಗಿ!

ಕೆ. ವಿ. ಪುಟ್ಟಪ್ಪ

೩೯. ಬೇಲೂರಿನ ಶಿಲಾಬಾಲಿಕೆಯರು

ಶ್ರವಣಕೆ ಸಿಲುಕದ ಲಲಿತಾ
ರವ ಸುಖವಂ ರಸನೆಗೊದವದಮೃತ ದ್ರವಮಂ
ಎವೆಯಿಕ್ಕದ ನಯನಗಳಿಂ
ಸವಿವುದು ನೀವೆಂಬ ಮಾಯಗಾತಿಯರಿವರಾರ್

ಶೃಂಗಾರ ವಲ್ಲರಿಯೆ ಲತೆಯೊಡನೆ ಬಳುಕಿ ನೀಂ
ನೃತ್ಯಲಾಸ್ಯದಿನಾರನೊಲಿಸುತಿರುವೆ
ಮಾಧುರ್ಯ ಮಂಜೂಷೆ ಮಧುರತರ ಮೌನದಿಂ
ದಾರ ಚರಿತೆಗಳ ಶುಕಿಗುಸಿರುತಿರುವೆ
ಮುಗ್ಧಮೋಹನವದನೆ ಮುಕುರದೊಳ್ ನೋಡಿ ನೀ
ನಾರ ನೆನೆದಿಂದು ನಸುನಗುತಲಿರುವೆ
ಪ್ರಣಯಪ್ರರೋಹೆ ನೀಂ ಪ್ರಿಯತರಾಕೃತಿಯಿಂದೆ
ರುಷೆಯನಿಂತಾರೊಳಭಿನಯಿಸುತಿರುವೆ

ಶಿಲ್ಪಿವರ ಕುವರಿಯರೆ ಸೌಂದರ್ಯ ಮುದ್ರಿಕೆಯರೆ
ದೇವ ದೇವನ ಸೇವೆಗೈತರ್ಪ ಸಾಧುಕುಲಮಂ
ಭಾವ ವಿನ್ಯಾಸ ವೈಕೃತಿಗಳಿಂ ಬೆರಗುವಡಿಸಿ
ಚಂಚಲತೆಗೆಡೆಯೆನಿಸಿ ನೀವಿಂತು ನಿಲುವುದೇಕೆ

ಇನ್ನೆವರಮೊಲಿದು ಬಾರದ ನಿಮ್ಮ ಮನದಿನಿಯ
ನಿನ್ನು ಬಹನೆಂದು ನೀಂ ತಿಳಿವುದೆಂತು
ಅಗಣಿತ ಪ್ರೇಕ್ಷಕರೊಳಿಲ್ಲದಾ ಪ್ರೇಮಿ ಯಾ
ವಿಷಮ ಸಮಯದಿ ನಿಮಗೆ ದೊರೆವುದೆಂತು

ನಿಮ್ಮ ವದನದ್ಯುತಿಗೆ ಮರುಳಾಗಿ ಸೋಲದನ
ರಸಜೀವಿಯೆನ್ನುತಾದರಿಪುದೆಂತು
ನಿಮ್ಮ ನೂಪುರರವಕೆ ಬೆರಗಾಗಿ ನಿಲ್ಲದನ
ಭಾವಜ್ಞನೆಂದು ನೀಂ ಬಗೆವುದೆಂತು?

ರೂಪಮಿಲ್ಲದನೇನೊ ನಿಮ್ಮನಿಯನಲ್ಲದಿರೆ ತಾಂ
ರೂಪವಿಭವದಿನಿತ್ತಲೈತಂದು ಮೆರೆಯೆ ನಿಮ್ಮ
ಲಾಸ ಲಾವಣ್ಯಗಳ್ ಧರೆಯಿಂದೆ ಪಾರ್ವುವೆನುತೆ
ಮರೆಯಿಂದೆ ಕಂಡು ನಿಮ್ಮೊಲಪಿಂದೆ ನಲಿವನೇನೋ

ಶ್ರುತಗಾನಮಭಿರಾಮಮಾದೊಡಶ್ರುತಗಾನ
ಮಭಿರಾಮತರಮೆನುತೆ ರಸಿಕರೊಸೆವರ್
ರಾಮಣೀಯಕ ಕುಲಮೆ ನಿಮ್ಮೆದೆಯ ನುಡಿ ಕವಿಯ
ನಾನದೊಡಮೆಮ್ಮೆದೆಯ ಸೇರಲರಿಗುಂ
ಅದರಿಂದಮಲ್ತೆ ನಿಮ್ಮಭಿಮತಂಗಳನರಿತು
ಜಾಣರೆನಿಬರೊ ನಿಮ್ಮ ಪೊಗಳೆ ನಲಿವರ್
ವರ್ಷಶತಕಗಳಿಂದೆ ಕುಂದದಿಹ ಲಾವಣ್ಯ
ದಂತರಂಗವನಿಂತು ಬಗೆವೆನೀಗಳ್
ಬಿದಿಯ ಕರಚಾತುರಿಯೊಳನಿತಿನಿತು ಸುಳಿದು ಸರಿವ
ಮನುಜ ಮಾನಸದೊಳತಿ ಚಿತ್ರದಿಂ ಚರಿಸಿ ಮೆರೆವ
ಭುವನ ಜೀವನ ಸಸ್ಯಕಮೃತಬಿಂದುಗಳನೆರೆವ
ಪರತತ್ತ್ವ ಮಾಧುರಿಯನಿನಿಸು ನೀಂ ತೋರ್ಪಿರಲ್ತೆ

ಆನಂದನಿಧಿಯಾ ಪರಾತ್ಪರನೆನಲ್ ಜಗದೊ
ಳಾನಂದವೀವರಂ ಕಳೆಯಲಹುದೇಂ
ಪ್ರೇಮಮಯ ಮೂರ್ತಿಯಾಪರದೇವನೆನುತಿರಲ್
ಪ್ರೇಮಾಂಕುರಂಗಳಂ ಮುರಿಯಲಹುದೇಂ
ಸೌಂದರ್ಯ ಸರ್ವಸ್ವ ನಿಧಿಯಾತನೆನುತಿರಲ್
ಸುಂದರಾಕಾರರೊಳ್ ಮುಳಿಯಲಹುದೇಂ
ಜೀವನಾಧಾರನವನೆನುತೆ ಪೊಗಳುತ್ತಿರಲ್
ಜೀವನೋಜ್ವಲೆಯರಂ ಪಳಿಯಲಹುದೇಂ
ಜಗದುದಯ ಕಾರಣನ ಮೈಮೆಗಳನರಿತು ನೆನೆದು
ಜಗದ ಯಾತ್ರೆಯ ನಡೆವ ಜನಕೆ ನಿಮ್ಮಂದದಿಂದಂ
ಸೊಗಮಿನಿಸು ತೋರಿ ಸಂಸೃತಿಪಥಂ ಸುಗಮವೆನಿಸಲ್
ಅದುವೆ ದೇವಂಗೆ ನೀಮೆಸಗುವಾ ಸೇವೆಯಲ್ತೆ

ವಿಶ್ವತಂತ್ರ ರಹಸ್ಯ ಬೋಧನೋತ್ಸಾಹಮಿದು
ವಿಶ್ವಶಿಲ್ಪಿಯ ಸಭೆಯೊಳುಚಿತಮೆನಿಕುಂ
ವಿಗತ ಸೌಮನಸರುಂ ವಿಪರೀತ ಚರಿತರುಂ
ವಿಮುಖತೆಯನಾನಲದರಿಂದೆ ನಿಮಗೇಂ
ಮೊಳಗುಗೆಲೆ ಸರಳೆಯರೆ ನಿಮ್ಮ ಮೃದು ಪದವನನು
ಕರಿಪ ವಾದಿತ್ರಗಳ್ ಸೂಕ್ಷ್ಮದಿಂದೆ
ನೆಳಲನಿತ್ತೀ ಲತಾವಳಿ ನಿಮ್ಮನಾದರಿಸು
ಗೆಂದಿಗುಂ ತಂಬೆಲರ ಸುರಭಿಯಿಂದೆ
ನಗುತ ನಲಿಯುತ ಮೆರೆದು ಹಾವಭಾವಗಳನೆಸೆದು
ಮಂಜು ಜಲ್ಪವ ತೋರಿ ಮುಗ್ಧ ವೀಕ್ಷಣವ ಬೀರಿ
ಕಠಿನರಾಗದೆ ಕಾಲದೌಷ್ಟ್ಯದಿಂ ಕುಂದುವಡದೆ
ಶುಷ್ಕಹೃದಯರ್ಗೆ ನೀಂ ಸೌಹೃದವ ನೀಡುತಿಹುದೌ

ಅವ್ಯಕ್ತ ನಿನದದಿಂದಕಲಂಕಿತಾಂಗದಿಂ
ದನ್ಯೂನ ತರುಣತೆಯಿನಮಿತಯಶದಿಂ
ಚಿರಕಾಲಮೆಸೆವುದೌ ಚಿತ್ತವೇಧನಿಯರಿರ
ಕುದಿವ ಲೋಕಕೆ ಮುದದ ತಣಿವ ಬೀರಿ
ಸೌಂದರ್ಯಮೇ ವಿಶ್ವತತ್ತ್ವಮಾ ಪರತತ್ತ್ವ
ಭಾಸಮೇ ಸೌಂದರ್ಯಮೆನುತ ಸಾರಿ
ನಿಮಗೆ ಜನ್ಮವನಿತ್ತ ಚಿತ್ರ ಚತುರರ ಚಿತ್ತ
ದೇಕಾಗ್ರ ಭಕ್ತಿದೀಪಿಕೆಯ ಬೆಳಗಿ
ಪೊಳೆಯಿರೌ ಸರಸ ಜೀವನಮಂತ್ರ ಗುರುಗಳೆನಿಸಿ
ಪಳಿಯಿರೌ ಮಧುರಭಾವವ ಪಳಿವ ವಿಕೃತಮತಿಯಂ
ಕಳೆಯಿರೌ ರಸಕಲಾ ವಿಮುಖತೆಯ ಜನದ ಮನದಿಂ
ಬೆಳೆಯಿರೌ ಪ್ರೇಮ ಧರ್ಮೋದ್ಧರಣ ವಿಧಿಯೊಳೆಂದುಂ

ಡಿ. ವಿ. ಗುಂಡಪ್ಪ

೪೦. ವನಸುಮ

ವನಸುಮದೊಲೆನ್ನ ಜೀ
ವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ – ಹೇ ದೇವ ॥ ಪ ॥
ಜನಕೆ ಸಂತಸವೀವ
ಘನನು ನಾನೆಂದೆಂಬ
ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ ॥ ಅನು ॥

ಕಾನನದಿ ಮಲ್ಲಿಗೆಯು
ಮೌನದಿಂ ಬಿರಿದು ನಿಜ
ಸೌರಭವ ಸೂಸಿ ನಲವಿಂ
ತಾನೆಲೆಯ ಪಿಂತಿರ್ದು
ದೀನತೆಯ ತೋರಿ ಅಭಿ-
ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ
ಉಪಕಾರಿ ನಾನು ಎ
ನ್ನುಪಕೃತಿಯು ಜಗಕೆಂಬ
ವಿಪರೀತ ಮತಿಯನುಳಿದು
ವಿಪುಲಾಶ್ರಯವನೀವ
ಸುಫಲ ಸುಮಭರಿತ ಪಾ
ದಪದಂತೆ ನೈಜಮಾದೊಳ್ಪಿನಿಂ ಬಾಳ್ವವೊಲು

ಡಿ. ವಿ. ಗುಂಡಪ್ಪ

೪೧. ತೆಂಗಾಳಿ

ಬಾರ ಮುಂಬೇಸಗೆಯ ಮೆಲುನಡೆಯ ಮಾರುತ
ಬಾರಯ್ಯ ಮಧುಮಾಸದೈತರವ ಸಾರುತ
ಬಾರ ಲೋಕಕೆ ಹರಿಸದೈಸಿರಿಯ ಬೀರುತ
ಬಾರ ಸೊಗಸಿನ ತೆರನ ಜನಕೆಲ್ಲ ತೋರುತ.

ಮೊದಲ ವತ್ಸರದ ಹಣ್ಣೆಲೆ ಬಣ್ಣ ಮಾಸಿ
ಉದುರ್ವ ದಿನ ಬಹುದನರೆಭಯದಿ ಹಾರೈಸಿ
ಇದಿರ್ನೋಳ್ಪುದರ ಮೇಲೆ ಮೆಲುಮೆಲನೆ ಬೀಸಿ
ಸದಯ ಬೆಸುಗೆಯ ಬಿಡಿಸಿ ಅದನು ಕಡೆಹಾಯ್ಸು.

ತರುಲತಾರಾಜಿಗಳ ಬಾಡಿರುವ ಮೆಯ್ಯ
ಕರುಣಿ ಕೂರ್ಮೆಯ ತೋರುವೀ ನಿನ್ನ ಕೈಯ
ಸರಸ ಸಂಪರ್ಕದಿಂ ನಲಿಸುತಕ್ಕಯ್ಯ
ಪರಸತ್ತ್ವವಲ್ಲಿ ತಳಿರ್ವಂತೆ ಹರಸಯ್ಯ

ಎಲ್ಲ ಲತೆಗಳ ನೋಳ್ಪ ಮೊದಲಿಲ್ಲಿ ಬಂದು
ನಲ್ಲ ನೀ ಮರೆದಿರಲು ವಿರಹದಲಿ ನೊಂದು
ತಲ್ಲಣಿಸುವೀ ಮಲ್ಲಿಗೆಯನು ತರಿಸಂದು
ಲಲ್ಲೆಯಿಂ ಸಂತೈಸಿ ಪೊರೆ ದೀನಬಂಧು.

ಎನ್ನ ಜೀವವ ನಿನ್ನ ಸೊಗದಿನಾವರಿಸು
ಹಣ್ಣೆಲೆವೊಲೆನ್ನ ಹಳೆಗನಸುಗಳ ಹರಿಸು
ಚೆನ್ನ ಹೊಸಬಾಳ ಹೊಸ ರಸಗಳನೊಸರಿಸು
ಚೆನ್ನ ಹೊಸ ತಳಿರು ಸುಮಫಲಗಳನು ತರಿಸು.

ಅರಿಯದವರಾವು ಎಮ್ಮಯ ಮನದ ನೂರು
ವಿರಸತೆಯ ತೊಟ್ಟುಗಳ ಕಳಚಿ ಅವ ತೂರು
ಮರಣದಲಿ ಜೀವನದ ಮೊಳೆಯಿಹುದ ತೋರು
ಪರಮಾತ್ಮನುಂಟು ಸುಖದೊಳಮೆಂದು ಸಾರು.

ಮೆಲುಮೆಲನೆ ಪಸರಿಸುತೆ ತೆಂಕಣಿಂ ಬಾರ
ಪಲವಿಧದ ಸಿಂಗರವ ವನಗಳಿಗೆ ತಾರ
ನಲವಿನಂಕೆಯ ನಿತ್ಯತೆಯ ತೋರು ಧೀರ
ಚೆಲುವು ದೊರೆಯಾಳ್ವುದನು ಸಾರೈ ಸವಿಾರ.

ಶ್ರೀನಿವಾಸ

(ಮಾಸ್ತಿ ವೆಂಕಟೇಶ ಐಯಂಗಾರ್)

೪೨. ಕಸ್ಮೈ ದೇವಾಯ?

ಅಂದಿನಾ ದೇವರುಗಳೆಲ್ಲ ಮಡಿದುರುಳಿಹರು
ಇಂದ್ರ ವರುಣರು ಧನದ ಮಿತ್ರಪೂಷಣರು –
ಸಂದಿದ್ದ ದೈವತ್ವದಗ್ಗಳಿಕೆ ಹೋಗಿಹುದು
ಅಂದಿನವರುನ್ನತಿಯ ಕಳಶ ಕೂಲಿಹುದು

ಮಾನವರ ಸುಪ್ರಖರ ಮನದ ಮೊನೆಯಲುಗಿನ
ಘಾತದಲಿ ಕಡುನೊಂದು ಸೋಲನೊಪ್ಪಿದರು
ಧ್ಯಾನ ಪೂಜೆಗಳನ್ನು ತಮಗೆ ಸಲ್ಲವು ಎಂದು
ಮಾತಿನೊಪ್ಪಿಗೆಯಿತ್ತು ಶರಣು ಬೇಡಿದರು

ಅಚ್ಚರಿಯ ಮೋಹದಲಿ ಆಗಸವ ನೋಡುತ್ತ
ಉಚ್ಚಕಂಠದಿ ಹಾಡಿದಾ ಭಕ್ತರಳಿದಿಹರು
ನಯದಿಂದ ಭಯದಿಂದಲವರನೊಲಿಸುವ ಪಾಡು
ಭುವಿಯಿಂದ ಜನದಿಂದ ತೊಲಗಿ ಹೋಗಿಹುದು

ಸಾಗರನ ಸುರನೀಲ ನೀಲಿಮತೆಯನು ನೋಡಿ
ಭೋರ್ಗರೆಯುತುರ್ಕುವಾರ್ಭಟಿಯ ಕೇಳಿ
ನಾಲ್ದೆಸೆಯೊಳೊಡ್ಡಿರುವಪಾರ ಗಂಭೀರತೆಗೆ
ಬಾಗಿ ಗೈಯುವ ವರುಣ ಪೂಜೆ ಕಾಣಿಸದು

ನಭದೆಡೆಗೆ ಮೊಗವೆತ್ತಿ ಪೂಪತ್ರವೆರಚುತ್ತೆ
ಕರುಣಿಸೈ ಪರ್ಜನ್ಯ ಎಂಬುದಿಲ್ಲಾಯ್ತು
ಗುಡುಗು ಗರ್ಜನೆ ಕೇಳಿ ನಡುಗಿ ಬಲಿಯೊಪ್ಪಿಸುತೆ
ಒಡೆಯ ರುದ್ರನ ರೌದ್ರವಿಳಿಪ ಪರಿ ಪೋಯ್ತು

ಗೋಧನವನುಳುಹಯ್ಯ ಹೆಚ್ಚಿಸೈ ಹೇ ಪೂಷ!
ದವಸಧಾನ್ಯಗಳೀಯೊ ದೇವ ದೇವೇಶ!
ಧನಕನಕ ವಾಹನವ ಕರುಣಿಸೈ ಧನದ, ಹೋ
ಘನರನರ್ಘರೆ, ಎಂಬ ಮೊರೆಯು ಕೇಳಿಸದು.

ಅನ್ಯ ದೇವರ್ಕಳು ದಾಳಿಟ್ಟರೇರಿದರು
ಸುಮನಸರು ಪರಬ್ರಹ್ಮ ಹರಿಹರಾದಿಗಳು
ಇನ್ನೈದುಸಾವಿರ ವರುಷವಾಳಿದರಿವರು
ಇಂದಿವರ ಆಳಿಕೆಗು ಚ್ಯುತಿಯು ಬಂದಿಹುದು.

ಹಳೆಯಕಾಲದ,– ತಂದೆತಾತದಿರ ದೇವರುಗ
ಳಳಿದು ಹೋಗುವ ಕಡಿದು ಕಾಲ ಬರುತಿಹುದು
ಇಳಿದಿಹುದು ಕಡುನಿಡಿದು ನೆಳಲೊಂದು ಮೇಲಿಂದ
ಅಳಿಸಿಹೋಗುತಲಿಹುವು ಅವರ ಮೂರ್ತಿಗಳೂ.

ಪೋಪವರ ಪದವಿಗಳಿಗಿನ್ನಾರು ಬಂದಪರೊ
ಕೋಪಿಗಳೊ ಕರುಣಿಗಳೊ ತಿಳಿಪ ಕೋವಿದರೊ
ಆರನರಸುತೆ ಹೋಗಿ ಹವಿಸನೀಯಲು ಬೇಕೊ
ಆವ ಶೀಲವನವರು ಜಗದಿ ಬಿತ್ತುವರೊ.

ಇಲ್ಲದಿರೆ ಬೇರಾವ ದೇವರೇ ಬಾರರೋ
ಇಲ್ಲದೊಂದಕೆ ಹೆಸರನಿತ್ತು ಕರೆಯುವೆವೊ
ಇಲ್ಲದಿರೆ ಮಾನವನ ಸುಗುಣವೇ ದೈವವೋ
ಎಲ್ಲಿಗೂ ಹರಿಯದಿಹ ಸಂಶಯವೆ ಕೊನೆಯೊ!

ವಿ. ಸೀ.
(ವಿ. ಸೀತಾರಾಮಯ್ಯ)

೪೩. ಕೋಗಿಲೆ

ಓರಿಮಂಜು ಬಿಟ್ಟಿಲ್ಲ
ಚಳಿಗಾಳಿ ನಿಂತಿಲ್ಲ
ಮೈ ನಡುಕ ಪೋಗಿಲ್ಲ
ಇಬ್ಬನಿಯು ಸುರಿಮಳೆಯ ನಿಲ್ಲಿಸಿಲ್ಲ;

ಶಿಶಿರ ಸಾಮ್ರಾಜ್ಯಕ್ಕೆ ಚ್ಯುತಿಯು ಬಂದಿಲ್ಲ;
ಚ್ಯುತಿ ಬರುವುದೆಂಬೊಂದು ಚಿಹ್ನೆಯಿಲ್ಲ.

ತರಗೆಲೆಗಳುದಿರಿಲ್ಲ
ತಾರೆವೊಗವರಳಿಲ್ಲ
ತರುವೊಂದು ಚಿಗುರಿಲ್ಲ

ಚಿಗುರ್ವಿಡಿವುದೆಂಬೊಂದು ಚಿಹ್ನೆಯಿಲ್ಲ;
ಹಿಮಕರನ ಬಿಳಿಕಿರಣ ನಗುಬೀರುವಂತಿಲ್ಲ,
ಬೆಳುದಿಂಗಳುಂಡಾರು ಆಡುವವರಿಲ್ಲ.

ಹಸುರಿನಿಸು ಕಾಣದಿಹ
ಬರಲು ಕೊಂಬೆಗಳೇರಿ
ಮರದ ತುದಿಯನು ಸಾರಿ

ಏಕಾಂಗಿ ನೀನೇಕೆ ಉಲಿಯುತಿಹೆ ಇಂತು?
ಆವ ಸಂತಸ ನಿನದು ಹೇಳು ಕೋಗಿಲೆಯೇ!
ಏಂ ಪ್ರಮತ್ತತೆ ಇಂದು ನಿನ್ನ ಕೂಗಿನಲಿ!

ಎತ್ತಲೇಂ ಚೆಲುವಿಲ್ಲ
ಸಂಗಡಿಗರಾರಿಲ್ಲ
ಗಿಳಿವಿಂಡು ಗೊರವಂಕ

ಹೊಂಬಕ್ಕಿ ಹಾಡುತಿಹ ಸರ್ಕೇಳುತಿಲ್ಲ;
ಆವ ಸೊಗ ಬರುವುದನು ನೀನಲ್ಲಿ ಕಾಣುತಿಹೆ,
ನಡುಚೈತ್ರವೆಂಬಂತೆ ಉಲಿಯುತಿಹೆಯೇ!

ನಿಡುಬಯಲನಿರಿಯುತಿಹೆ
ದೆಸೆಗಳನು ತುಂಬುತಿಹೆ
ಕಿವಿಗಳನು ಬಿರಿಸುತಿಹೆ

ಎದೆವೊಕ್ಕು ಆಸೆಗಳ ಕೆರಳಿಸುತ್ತಿಹೆಯೇ!
ಬಂದೀತು ಬಂದೀತು ನಗುಗಾಲ, ಅಕ್ಕ ಓ
ಎಂದು ಕಂಠವನೆತ್ತಿ ಹಾಡುತಿಹೆಯೇ!

ನಮಗೆ ಗೋಚರಿಸದಿಹ
ಪರರಾರು ಅರಿಯದಿಹ
ನೀನೊರ್ವ ಕಾಣುತಿಹ

ಹೊಸಜೀವ ಸಂಚಾರವಾವುದಿಹುದೊ!
ನೆಲದಿಂದ ಬೇರಿಂಗೆ, ಬೇರಿಂದ ತರುವಿಂಗೆ
ಜೀವರಸವೇರುವುದ ಕಾಣುತಿಹೆಯಾ!

ಒಣಗಿರುವ ಶಾಖೆಗಳ
ಶಾಖೆಯುಪಶಾಖೆಗಳ
ನಾಳನಾಳದಿ ಹರಿದು
ಎಳೆಗೆಂಪು ಮೋಸುಗಳು ಕುಡಿಯಿಟ್ಟವೇನು?
ಪಸುಳೆಕುಡಿ ಮೈಗಂಧ ನೀ ಸವಿದೆಯೇನು?
ಶಿಶಿರವಳಿವುದು ಚೈತ್ರ ಬಹುದೆಂಬೆಯೇನು?

ವಿ. ಸೀ.
(ವಿ. ಸೀತಾರಾಮಯ್ಯ)

೪೪. ಅಭೀಃ

ಕಾಡ ಮೌನವ ಸೀಳಿ ಹಬ್ಬುತಿದೆ ಕೇಳುತಿದೆ
ಬಿತ್ತರದ ದಿಕ್ತಟಗಳಡ್ಡಿ ದಾಟುತಿದೆ!
ಉಳಿದೆಲ್ಲ ನುಡಿಗಳನು ಮುಳುಗಿಸುತೆ ಮೊಳಗುತಿದೆ
ಬಾಳ ಹೆದ್ದಾರಿಯನು ಪಿಡಿದೆತ್ತಿ ತೋರುತಿದೆ
– ಅಭೀಃ! ಅಭೀಃ! ಅಭೀಃ! ಎಂಬಮೃತವಾಣಿಯಿದು
ಮೂವತ್ತುಶತಮಾನಗಳ ಮೆಟ್ಟಿ ಕೇಳುತಿದೆ
ಕಾಲದಾ ಕರೆಯಂಚಿನಾಚೆಯಿಂದ.

ಯಜ್ಞಶಾಲೆಗಳಿಂದ ಬಲಿಯಿಂದ ಸೆರೆಯಿಂದ
ತೊಂಡು ಮಲೆತೆಲ್ಲವನು ತುಳಿದತ್ತಣಿಂದ
ಕಲ್ಲುಗಾಣಗಳಿಂದ ಸಿಲುಬೆಗಳ ನೋವಿಂದ
ವಿಷಪಾತ್ರೆಯೊಡಲಿಂದ ಸುಡುವುರಿಯ ಮಡಿಲಿಂದ
– ಅಭೀಃ! ಅಭೀಃ! ಅಭೀಃ! ಎಂಬ ನುಡಿ ಏಳುತಿದೆ
ಹೇಡಿತನದಳುಕುಗಳ ಓಡಿಸಿದೆ ಚೆದರಿಸಿದೆ
ವೀರಸಂಜೀವನವ ಊಡಿಸುತಿದೆ!

ಬಲಹೀನರೆಂದೆತ್ತಲಾತ್ಮವನು ಗಳಿಸಿದರು?
ಬಲಕಾಗಿ ಕಾಯ್ವವರು ಏಗೈವರು?
ಚಲವೊತ್ತ ಅಧಿಕಾರದಂಡಲೆಗೆ ಬೆದರುವರು
ಎಂದೇನ ಸಾಧಿಸುವರೆಂದೆಮ್ಮ ಕೇಳುತಿದೆ
– ಅಭೀಃ! ಅಭೀಃ! ಅಭೀಃ! ಎಂಬ ಸಗ್ಗದ ಬಿತ್ತು
ನರರ ಎದೆವೊಲಗಳಲಿ ಬೇರಿಟ್ಟು ಮೊಳೆಯುತಿದೆ!
ಬಲದ ತಿರುಳನು ಬಲಿಸಿ ಬೆಳಸುತ್ತಿದೆ!

ನಿಲ್ಲಿಸದು ಕೂಡಿಸದು ಮಲಗಿಸದು ಕೆರಳಿಪುದು
ಆಡುವಾಟದ ನಡುವೆ ಕೂಟಗಳ ನಡುವೆ!

ಆಸರಲಿ ಕಣ್ಣೆವೆಯು ಮುಚ್ಚಿ ಬರುತಿರಲತ್ತ
ಹೊಸತವಕದೊತ್ತಿನಲಿ ಮೇಲೆತ್ತಿದೆ!
– ಅಭೀಃ! ಅಭೀಃ! ಅಭೀಃ! ಇದೆ ಮಂತ್ರವೆನ್ನುತ್ತ
ಎಂಟು ದಿಕ್ಕಿನ ಗಾಳಿಗುಸಿರೆತ್ತಿ ಊದುತಿದೆ!
ನೀಳ್ಗೊರಲ ತುತ್ತುರಿಯನೂದಿಸುತಿದೆ!

ಯುಗದಗಲ ಜಗದಗಲ ಎಡರೆದ್ದು ನಿಂತಾವು!
ಸಂರಾಜರಬ್ಬರವು ನಡುಗಿಸೀತು!
ಕುಲವೆಂಬ ಮತವೆಂಬ ಕೆಳೆಯೆಂಬ ನಾಡೆಂಬ
ಮಮತೆಗಳು ದಾರಿಯಲಿ ಕತ್ತಲಿಟ್ಟಾವು!
– ಅಭೀಃ! ಅಭೀಃ! ಅಭೀಃ! ಎಂಬ ಧ್ರುವ ತಾರಗೆಯು
ಕತ್ತಲಲಿ ತವಿಲಲ್ಲಿ ದಿಕ್ಕನ್ನು ಕಾಣಿಪುದು
ನಿಜಕಿಟ್ಟ ಮುಸುಕೆತ್ತಿ ಮರೆ ತೆರೆವುದು

ಮಣಿಯದಿಹ ಮನವೊಂದು ಸಾಧಿಸುವ ಹಟವೊಂದು
ನಿಜದ ನೇರಕೆ ನಡೆವ ನಿಶ್ಚಲತೆಯೊಂದು–
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು
ಮರುಕಕ್ಕೆ ಪ್ರೇಮಕ್ಕೆ ಚಿರ ತೆರೆದ ಎದೆಯೊಂದು
– ಅಭೀಃ! ಅಭೀಃ! ಅಭೀಃ! ಎಂಬ ತಾರಕವಾಕ್ಯ
ನಾಡಿಯನು ನಡಸುತಿರೆ, ಬಾಳನ್ನು ತಿದ್ದುತಿರೆ
ನಡೆ ಮುಂದಕೆನ್ನುತ್ತ ಕೂಗುತಿವೆ ನುಗ್ಗಿಸುತಿವೆ.

ವಿ. ಸೀ.

(ವಿ. ಸೀತಾರಾಮಯ್ಯ)

೪೫. ನವೀನ

ನಾಡಿನ ಪುಣ್ಯದ ಪೂರ್ವದಿಗಂತದಿ
ನವ ಅರುಣೋದಯ ಹೊಮ್ಮುತಿದೆ!
ಚಿರನೂತನ ಚೇತನದುತ್ಸಾಹದಿ
ನವೀನ ಜೀವನ ಚಿಮ್ಮುತಿದೆ!
ಅಭಿನವ ಮಧುಕೋಕಿಲ ಕಲಕಂಠದಿ
ಸ್ವರಸುರಚಾಪಗಳುಣ್ಮುತಿವೆ!
ಶ್ಯಾಮಲ ಕಾನನ ಸುಮಸಮ್ಮೇಲದಿ
ಇಂಚರ ಸಾಸಿರ ಪೊಣ್ಮುತಿವೆ!
ಕವಿ ಕಣ್ಣಾಗುತಿದೆ!
ಕಣ್ ಕವಿಯಾಗುತಿದೆ!

ಭೂಮುವ್ಯೋಮದ ನೀಲಾಂಗಣದಲಿ
ಕೆಂದರೆ ಮುಗಿಲಿನ ರಂಗೋಲಿ
ರಂಜಿಸುತಿದೆ ಹೊಳೆ ತೆರೆಯಚ್ಚೊತ್ತಿದ
ಕೆಂಪಗೆ ನುಣ್ಮಳಲನು ಹೋಲಿ!
ಹಿಮಮಣಿ ಸಿಂಚಿತ ತೃಣವಿಸ್ತಾರದಿ
ನೇಸರು ಕಿಡಿಬಲೆ ನೆಯ್ಯುತಿದೆ;
ವಿಹಂಗದಂಪತಿ ತರುಶಾಖಾಗ್ರದಿ
ಪ್ರೇಮಾಲಾಪನೆ ಗೈಯುತಿದೆ;
ನವೀನ ಹೃದಯಗಳೇಳಿ,
ನವೀನ ಗಾನವ ಕೇಳಿ!
ನಾಡಿನ ಪುಣ್ಯದ ಪೂರ್ವದಿಗಂತದಿ
ನವ ಅರುಣೋದಯ ಹೊಮ್ಮುತಿದೆ!
ಚಿರ ನೂತನ ಚೇತನದುತ್ಸಾಹದಿ
ನವೀನ ಜೀವನ ಚಿಮ್ಮುತಿದೆ!

ಕೆ. ವಿ. ಪುಟ್ಟಪ್ಪ

೪೬. ಯುಗಾದಿಯ ಹಾಡು

ಏಳಿ ರವಿಯು ಮೂಡುವೊಳಗೆ
ಬಾನ ತಳಿರು ಬಾಡುವೊಳಗೆ
ಇಂದು ಮಧುರ ಜನವ, ಜಗವ
ಮುದದಿ ತೇಲಿಸುತ್ತ ಬರುವ!
ಇಂದು ಯು – ಗಾದಿಯು,
ಹೊಸ ವರ್ಷದಾದಿಯು!

ಬೇವು ಚಿಗುರ, ಹೂವು ಹಣ್ಣ,
ಮಾವು ತಳಿರ ತನ್ನಿರಣ್ಣ
ದಿಟ್ಟ ಕಚ್ಚೆ ಹಾಕಿ, ಶಿಖೆಗೆ
ದವನ ಸುರಗಿ ಸೆಕ್ಕಿರಣ್ಣ.
ಹಹ್ಹೊ! ಯುಗಾದಿಯು,
ಹರುಷಕೆಲ್ಲ ಗಾದಿಯು!

ಹಳೆಯದೆಲ್ಲ ಮರೆಯಿರೈ,
ಹೊಸದು ಬಾಳ ತೆರೆಯಿರೈ,
ಕಳೆದ ವರುಷಕಿಂದು ಒಂದೆ
ಕಣ್ಣಹನಿಯ ಸಲಿಸಿರೈ.

ಮುಪ್ಪು ಹರೆಯ ಮರೆಯುತ,
ಬೆಪ್ಪ, ಜಾಣ ಬೆರೆಯುತ–
ಲಗ್ಗೆ ಚೆಂಡು, ಚಿಣ್ಣಿ ಕೋಲು,
ಏಣಿ ಉಯ್ಯಲಾಡಿರೈ.

ಹಬ್ಬದೂಟ ಉಣುವ ಮುನ್ನ
ಬೇವು ಬೆಲ್ಲ ಸವಿಯಿರಣ್ಣ:
'ನೂರು ವರುಷ ಬಾಳುವ,
ಸಾವ ದೂರ ಮಾಡುವ,
ವಜ್ರಕಾಯರಾಗುವ,
ಸಿರಿಯ ಸುಖವ ಕಾಣುವ'
ಎಂದು ಬೆಲ್ಲ ಮುಂದು ಮಾಡಿ
ಬೇವು ಬೆಲ್ಲ ಮೆಲ್ಲಿರಣ್ಣ.

ಹಿರಿಯ ಜನಕೆ ನಮಿಸಿರಯ್ಯ,
ಹರಸಿ 'ಸುಖಿಸಿ' ಎಂಬರಯ್ಯ
ಗಂಟಿನಾದ ಕೇಳಿರೈ,
ಗುಡಿಗೆ ನಡೆವ ಬನ್ನಿರೈ.
ಭಕ್ತಿಗೂಡಿ ನಲವನಮಿಸಿ,
ಆಸೆ ಸಲಿಸು, ಭಯವನೊರಸು,
ಇಂಥ ಹಬ್ಬ ನೂರ ಕರೆಸು
ಎಂದು ಕರವ ಮುಗಿಯಿರೈ.

ಅಹ್ಹ! ಬಲ್ಲೆ ನಿಮ್ಮ ಮನವ
ಹಳೆಯ ವರುಷದಳಲ ನಲವ
ನಿಂದು ನೆನೆದುಕೊಳ್ವಿರಯ್ಯ,
ಮುಂದ ನೋಡಿ ಇರುಳ ಕಂಡು,
ಬೆಳಕನರಸಿ ದುಗುಡಗೊಂಡು
ಅಳಲಿ, ಬೆದರಿ, ಸುಯ್ವಿರಯ್ಯ,
ಬೆದರಲೇಕೆ?
ಸುಯ್ಯಲೇಕೆ?
ಭುಜವ ತಟ್ಟಿ ನಿಲ್ಲಿರಯ್ಯ.
ನಮ್ಮ ಹಕ್ಕು ಹರುಷವಯ್ಯ.
ಹೋದುದೆಲ್ಲ ಹೋದುದೈ.

ಹೊಸದು ಬಾಳು ನಮ್ಮದೈ.
ಇಂದು ಯು-ಗಾದಿಯು,
ನಮ್ಮ ಒಸಗೆಯಾದಿಯು!

ಪು. ತಿ. ನರಸಿಂಹಾಚಾರ್

೪೭. ಕನ್ನಡತಾಯ ನೋಟ

೧

ಹಿರಿಯರೆರ, ಕೆಳೆಯರೆರ, ಅಕ್ಕತಂಗಿಯರಾ, ಅಣ್ಣತಮ್ಮದಿರಾ,
ಒಸಗೆನುಡಿ ತಂದಿಹೆನು ನಾನೊಂದ, ತಾಯಿಂದ, ಸಿರಿಯ ತಾಯಿಂದ–
ಕೇಳುವಿರ ಕಿವಿಗೊಟ್ಟು, ತಾಳುವಿರ ಎದೆನೆಟ್ಟು, ತಾಳಿ ಬಾಳುವಿರಾ?
ಕಣ್ಣಾರ ಕಂಡೆನವಳನು–ಕಂಡು, ತಂದಿಹೆನು, ಕೇಳಿ.
ಅವಳೆನ್ನೊಳಾಡಿದುದನಾಡುವೆನು ನಿಮ್ಮಲ್ಲಿ, ಕೇಳಿ.

೨

ಬಳಸಿ ಬಂದೆನು ಸುತ್ತ ಕನ್ನಡದ ನಾಡುಗಳ ಸಿರಿಯ ನೋಡುತ್ತ,
ತಾಯಡಿಯ ಪುಡಿಯ ತಲೆಗಾನುತ್ತ, ಹರಕೆಯ ಪವಿತ್ರ ಯಾತ್ರೆಯಲಿ.
ಏನು ಚೆಲುವಿನ ನಾಡು! ಚೆಲುವು ಚೆಲ್ಲುವ ನಾಡು! ಕನ್ನಡದ ನಾಡು!
ಏನು ಚಿನ್ನದ ನಾಡು! ನಮ್ಮೊಲುಮೆಯಾ ನಾಡು! ನಮ್ಮಿನಿಯ ನಾಡು!
ಕಾವೇರಿಯಿಂದಮಾ ಗೋದಾವರಿಯ ವರೆಗೆ ಚಾಚಿರುವ ನಾಡು!
ಬಳಸಿದೆನು, ಸುತ್ತಿದೆನು, ಕಣ್ದಣಿಯ ನೋಡಿದೆನು, ಕುಣಿದು ಹಾಡಿದೆನು:
ಕೆಳಗೆ ಬೆಳೆಹೊಲ ಕಪ್ಪು, ಮೇಲೆ ಬಾಂಬೊಲ ಕಪ್ಪು, ಬೆಟ್ಟಗಳು ಕಪ್ಪು,
ಕಾರ್‌ಮೋಡಗಳು ಕಪ್ಪು, ಹೊಳೆ ಕೆರೆಯ ಮಡು ಕಪ್ಪು, ತಾಯ ಕಾಲ್ ತೊಳೆವ
ಉಪ್ಪು ಕಡಲದು ಕಪ್ಪು, ಜನ ಕಪ್ಪು–ಏನೆಂದೆ? ತಪ್ಪು, ತಪ್ಪು!–
ಮೂಡ ಪಡುವಲು ತಿರುಗು, ಬಡಗ ತೆಂಕಲು ತಿರುಗು, ಕರ್-ನಾಟದಲ್ಲಿ,
ನಿಮ್ಮೂರ ಹೆಣ್ಣುಗಳ ಕಣ್-ನೋಟ, ತಣ್-ನೋಟ ಕರ್ಪು, ಬಲು ಕರ್ಪು!
ಕರ್ಪೊ, ಬೆಳ್ಪೋ ಕಾಣೆ, ಕನ್ನಡದ ಕಣ್ಣೋಟ–ಕೂರ್ಪು, ಆರ್ಪು!
ಓ ತಾಯೆ, ಕನ್ನಡದ ಪೆರ್-ತಾಯೆ, ನಮ್ಮಮ್ಮ, ದೇವಿ, ಸಮ್ರಾಜ್ಞಿ,
ಸುಳಿಗುರುಳು, ನಗೆಗಣ್ಣು ಏನು ಕಪ್ಪೇ ನಿನಗೆ–ಮುತ್ತಿಡುವ ಕಪ್ಪು!
ನಿನ್ನ ಕಲಿಗಳ ಕೂರ್ಪು, ಕೆಚ್ಚಿದೆಯ ಕಟ್ಟಾಳ ಕೂರ್ಪು, ನೆಚ್ಚಾರ್ಪು,
ಆರು ತಡೆಯಲುಬಹುದು–ಪುಲಕೇಶಿ ಹರ್ಷರೇ ಹೊಯ್ದು ಸಾರುವರು.
ಕರ್ಪಿರಲಿ, ಕೂರ್ಪಿರಲಿ, ನಿನ್ನ ಬೆಳ್ಪನು ಹೇಳು–ಕೂರಸಿಯ ಮಿಂಚು,
ಕಾರ್-ಮಿಂಚು, ಪೆಣ್ಮಣಿಗಳಾ ಕಣ್ಣ ನುಣ್ಮಿಂಚು, ಅರಿದರಾ ಕೂರ್-ನೋಟ
ಮಿಂಚು!

ಮೆಲ್ಲ ಮೆಲ್ಲನೆ ತೇಲಿ, ಆಳದಲಿ ಮಲೆಯೆಡೆಯೊಳಲುಗದೆಯ ಅಲುಗಿ,
ಕಡಿದು ಬಂಡೆಗೆ ಬಂದು, ನೆಗೆದು ಬೆಳ್ಳಂಗೆಡೆವ ನೀರ್-ಬೀಳ ಬೆಳ್ಪು !
ಕಡೆದ ನೊರೆ, ಚಿಗಿವ ನೊರೆ, ತೂರು ನೊರೆ, ಕುದಿವ ನೊರೆ, ಬೆಳ್ಪಿನೊಳ್
ಬೆಳ್ಪು !

ಆ ಬೆಳ್ಪು, ಆ ತೆಳ್ಪು, ಆ ಮೆಲ್ಪು – ನಿನ್ನ ಮಕ್ಕಳ ಬಾಳನೊಳ್ಪು ;
ನೀರ್-ಬೀಳ ಬೆಳ್ನೊರೆಯ ಬಿಸಿಲ ಬೆಳ್ದಿಂಗಳಾ ಮಳೆಬಿಲ್ಲ ತಳ್ಪು !
ಬೆಳ್ಗೊಳವೊ, ತೀರ್ಥಗಳೊ, ಧರ್ಮಧರ್ಮದ ತಿರುಳೊ, ಪಾಡುವರ ಪುರುಳೋ,
ಒಳ್ಗನ್ನಡದ ಕಲೆಯೊ, ಕುಸುರಿಗೆಲಸದ ಸಿಲೆಯೊ, ಆ ನಯವೊ, ಮೆರುಗೋ !
ನಿನ್ನ ಚಿಣ್ಣರ ಸೊಬಗೊ, ಬೆಡಗೊ, ಮೆಲ್ಲಿದೆ ತಣ್ಪೊ, ಕೊಡುಗೈಯ ಬಿಣ್ಪೋ !
ಓ ಎನ್ನ ತಾಯಿ, ಕನ್ನಡ ತಾಯಿ, ನಮ್ಮವ್ವ, ದೇವಿ, ಸಮ್ರಾಜ್ಞಿ,
ನಿನ್ನನರಸುತ ಸುಳಿವ, ನೋಂಪಿಯೆನೆ ನಿನ್ನೊಲುಮೆ-ನಾಡನೊಳಕೂಳುವ,
ನಿನ್ನ ಚೆಲುವನು ಸವಿವ ಮಗುವಾರು ತಣಿಯದನು, ಪಾಡಿ ಕುಣಿಯದನು.
ಭಕ್ತಿಯಲಿ ತಲೆದೂಗಿ ಬಾಗಿ ಮಣಿಯದನು !

೩

ಚೆಲುವು ಕಣಿ ಕಾರ್ವಾರವೆದೆ ತುಂಬಿ, ಗೋಕರ್ಣದಲಿ ಮಿಂದು, ಸಂದು,
ಉಡುಪಿಯಲಿ ಕೃಷ್ಣಂಗೆ ಕೈಮುಗಿದು, ಮಂಗಳೂರಿನ ಒರಿಯ ನಂಟರಲಿ ನಿಂದು,
ಚಾರ್ಮಾಡಿ ಘಾಟಿಯನು ಬಳಬಳಸಿ ಮೇಲೇರಿ ಬಂದವನು ಕಂಡೆ, ಕಂಡೆ !
ಮೇಲೆ ತಿಳಿಯಾಕಾಶ, ಸುತ್ತಲೂ ಬೆಟ್ಟ-ಸಾಲ್-ತೋಳ ತೆಕ್ಕೆಯಲಿ
ಕಣಿವೆಯೇರುವ ಕಾಡು, ದಟ್ಟಡವಿ, ಒಮ್ಮೊಮ್ಮೆ ಹಕ್ಕಿಗಳ ಹಾಡು,
ಮರದ ಮರೆಯಲಿ ದುಮುಕುವಬ್ಬಿಗಳ ದಬ್ಬೆ ಪರಡಿದ ಕೂಗು ಕೊರಲು !
ಕಂಡೆನಾಕೆಯನಲ್ಲಿ, ದೂರದಲಿ, ಕಣ್-ಪುಣ್ಯ ಮಿಂಚಿ ಮರೆಯಾಯ್ತು !
ಕನ್ನಡದ ಆ ನೋಟ, ದೇವಿಯಾ ದರ್ಶನಂ ಪೊಳೆದು ಬಯಲಾಯ್ತು !
ಎವೆ ಹೊತ್ತಿನಾ ನೋಟ, ಸವಿನೋಟ, ಸವೆಯದೆದೆ-ಚಿಮ್ಮುತಿಹುದಿನ್ನೂ !
ಅಮೃತಲೋಕದ ಮಾತೆ, ಅಳಿಯದಳ್, ಬಾನ್-ಬಾಳ ಪೆರ್ಮೆಗಳ ತಾಯಿ,
ತಲೆಯಲ್ಲಿ ಪೊನ್ನಮುಡಿ, ಪದಿದರಿಲ ಪೆಂಪು, ಬೆಳ್ದಾವರೆಯ ಪೊಂಗಯ್ !
ಸುತ್ತಲುಂ ಪೊನ್ನಾಡ ಕನ್ನಡದ ಪೆರ್ಮನಡಿಗಳ್, ಸಾವನೊದೆದು ಬೆಳಗಿ,
ಕನ್ನಡದ ಮಕ್ಕಳ್ಗೆ ಕನ್ನಡದ ಪಾಲೆರೆದು ಬಾಳ್ಗೆ ಬಾಳ್ ಪ್ರೊಯ್ದು,
ಬಾಳ್ವವರು, ಮೆರೆವವರು,– ಪೆರ್-ನೋಟ ! ಪಿರಿಯ ತಾಯ್, ಪಿರಿಯ ಮಕ್ಕಳ್!
ಕಪ್ಪುಪೆಪ್ಪಿನ ಕುರುಳ ಕರ್ಮುಗಿಲ ಬಸಿರಿಂದ ತೊಟ್ಟನೊಡೆಹೊಮ್ಮಿ,
ಬಾನ ಈ ಕರೆಯಿಂದ ಆ ಕರೆಗೆ ಚಿಮ್ಮಿ, ಒಡನಡಗುವುವೆ ತೇಜಂ,
ಆ ತೇಜುದುರಿಯಂತೆ ಕಣ್ಣುಳ್ಕಿ, ಹೊರಗಡಗಿ, ಒಳಗಿರ್ಪುದಿನ್ನುಂ.
ಇದೊ ಬಂದೆನೀ ಹಾಳು ಪಂಪೆಗಿಂದರಸುತ್ತ,– ಒಳಗಿರ್ಪುದಿನ್ನುಂ–
ಒಳಗಿದ್ದು ಹೊರಗಣ್ಗೆ ಕಾಣಿಪುದು ಮತ್ತೊಮ್ಮೆ ಆ ತಾಯ ನೋಟಂ.

ತುಂಗಭದ್ರೆಯ ತಡಿಯ ಚೆದರಿರುವ ಮೊರಡಿಗಳ ಕೊರಕಲಿನ ಬಿಸಿಲ
ಬೇಗುದಿಯ ಬಿರುಕಿನಲಿ ಮುಳ್ಳಿಡೆಯ ಕಲ್ಲುಹೂವಿಡಿದರೆಯ ಮೇಲೆ,
ಕುಳಿತಿದ್ದಳಾ ತಾಯಿ, ಕೈಮೇಲೆ ತಲೆಯೂರಿ, ಅಳಲಿನಾಳದಲಿ!–
"ಯಾರವ್ವ, ನೀ ತಾಯಿ? ಏತಕಿಂತೊಬ್ಬಳೇ ಕುಳಿತೆ ಕಾಡಿನಲಿ?
ಏಕೆ ಮೊಗ ಬಾಡಿಹುದು, ಕಂದಿಹುದು, ನೊಂದಿಹುದು, ಕಾಂತಿಗುಂದಿಹುದು?"
ಕಂಬನಿಗಳೂರುತಿಹ, ಕಳವಳವ, ಕೂರ್ಮೆ ನಡುಗಿಪ ನುಡಿಯ ಕೇಳಿ,
ಕತ್ತೆತ್ತಿ, ಪಳಮೆಯಾಳದ ಕಣ್ಣನೆನ್ನ ಕಣ್ಣಲಿ ನೆಟ್ಟು, ಕಯ್ಯ
ಕುಳ್ಳಿರಲು ಸನ್ನೆಗೈದೀ ಪರಿಯೊಳಾಡಿದಳು, ತೋಡಿದಳು ತೊಳಲ–
ಕಣ್ಣಾರ ಕಂಡುದನು, ತಾಯೆನ್ನೊಳಾಡಿದುದನಾಡುವೆನು, ಕೇಳಿ.

ಕಿವಿಗೊಟ್ಟು ಕೇಳಿ:
ಎದೆಗೊಟ್ಟು ಕೇಳಿ:
ಏಳಿ, ಎಚ್ಚರವಾಗಿ, ಅರೆಳಿ ಬಾಳಿ!

೪

"ಕೇಳಣ್ಣ, ನಾನೊಬ್ಬ ಹಳೆಯ ಮುತ್ತೈದೆ–ಏರಿದಾಗಿ ಬಾಳಿದವಳೊಮ್ಮೆ:
ಈಗ ಬಡತನ, ಬಡವೆ, ಬಡವಾವೆ: ಬಡವಾವ ಮಕ್ಕಳನು ನೋಡಿ,
ಬತ್ತಿ, ಮುತ್ತಿಮ್ಮಡಿಯ ಸೂರಗಿನಲಿ ಬಡವಾದೆ– ಸಾವಿಲ್ಲ ನನಗೆ!
ಸಾವಿಲ್ಲ – ಸಾಯುತಿಹೆ: ಹೊಸ ಮಳೆಗಳಾಗಿ, ನೆಲ ಹೊಸ ಹೊನಲು ಹರಿದು,
ಹೊಸ ಹಮ್ಮು ಹಮ್ಮುತ್ತ, ಎಲ್ಲರೂ ನನ್ನ ಕ್ಕತಂಗಿಯರು– ಚಿಗುರಿ
ಎಲ್ಲರೂ ಚೆಲುವಾದರೆಲ್ಲರೂ ಚಿನ್ನವಾದರು– ನೋಡು, ನೋಡು–
ಆ ಕಡೆಗೆ, ಈ ಕಡೆಗೆ ತೂಗುವರು ತೊನೆಯುವರು, ಆ ಪೊಂಕ, ಬಿಂಕ!
ಪೇರೊಕ್ಕಲಾಗಿ ಪಾಡುವರು;
ಅವರ ಮಕ್ಕಳು ಬೆಳೆದು ಕಳೆಗೂಡಿ ಮನೆ ಬೆಳಗಿ ಹಬ್ಬವಾಡುವರು–
ತಾವ್ ಮೊದಲು ಬದುಕಿ,
ತಾಯ್ ಮೊದಲು ಬದುಕಿ,
ಹೆರರ ಹೊರೆಗಳನಿಳಿಸಿ, ಹೆರರ ಸೆರೆಗಳ ಬಿಡಿಸಿ, ಕಯ್ಯ ನೀಡುವರು.
ಆ ಸಯ್ಪು, ಆ ಪುಣ್ಯ, ನನಗಿಲ್ಲ: ನನ್ನ ಮಕ್ಕಳಿಗಿಲ್ಲ ಹಬ್ಬ–
ನನ್ನ ಮಕ್ಕಳಿಗಿಲ್ಲ ಹಬ್ಬ:
ಮಳೆ, ಸುಗ್ಗಿ; ಬೆಳೆ, ಬೆಳಕು; ಹಾಡು, ಹಸೆ; ಕೂಗಾಟ, ಕುಣಿದಾಟ, ಪಾಟ;
ಒಲೆದಾಟ, ನಲಿದಾಟ, ಒಲುಮೆ ಬೀರಾಟ,
ನನ್ನ ಮಕ್ಕಳಿಗಿಲ್ಲ – ನನಗಿಲ್ಲ – ಬಾಳ್ಗೆ ಆ ಅಕ್ಕತಂಗಿಯರು!
ನಮಗಿಲ್ಲ ಬಾಳು.

ಎಲ್ಲರೂ ಬಾಳುವೆಡೆ ನಮಗೆ ಸಾವೆ?
ಎಲ್ಲರೂ ನಲಿವ ಕಡೆ ನಮಗೆ ನೋವೆ?
ಏನು ಕವಿಯಿತೊ ಮಂಕು, ಮಕ್ಕಳಿಗೆ! ಯಾರೆರಚಿದರೊ ಬೂದಿ, ಕಾಣೆ,
ನನ್ನನೊಲ್ಲರು ನನ್ನ ಮಕ್ಕಳೇ! ತಾವ್ ಬಾಳಿ, ತಾಯ ಬಾಳಿಸರು.
ಹೆರರ ನುಡಿ, ಹೆರರ ನಡೆ,—ಹೆರರ ಕೂಗೇ, ಕೂಗು; ಹೆರರದೇ ಹೆಮ್ಮೆ!
ನನ್ನ ಮನೆ ಹಾಳು!
ನನ್ನ ನುಡಿ ಬೀಳು!

ನನ್ನ ನಾಡಿನಲಿರುಳು: ನನ್ನ ತೋಟವನಗೆವ, ತೆಂಗಡಕೆಯಿಡುವ,
ತಾವರೆಯ ಕಾಪಿಡುವ, ಮೊಲ್ಲೆ ಮಲ್ಲಿಗೆ ನೆಡುವ, ಆನಂದ ಕೊಡುವ
ಮಕ್ಕಳೆಲ್ಲಿಹರೆನಗೆ—ಹೆರರೊತ್ತೆ ಗಡಿಬಿಡುತ ಹದುಗುತ್ತ, ನುಗ್ಗೆ ಕುಗ್ಗುತ್ತ,
ಹೆರರ ಕೈ ಕಾಯುತ್ತ, ಸಾಯದೆಯೆ ಬದುಕದೆಯೆ ಬಾಳ ನೂಕುವೆನು.''

ಱ

ಅರಿದೆನರಿದೆನು ಮಾತನಾಡುವಳದಾರೆಂದು: ಕನ್ನಡದ ತಾಯಿ!
ನಮ್ಮ ಕನ್ನಡ ತಾಯಿ, ತನ್ನ ಹೊಂಬಸಿರಿಂದ ನಮ್ಮನ್ನು ತಂದು,
ನಾವು ಬಿಟ್ಟೊಡೆ ಬಿಡದೆ, ಹಂಬಲಿಸಿ, ಮರುಹುಟ್ಟ ಹಾರೈಸುತಿಪಳು—
ನಾನೆಂದೆ, ಅಳಲನಾರಿಸ ಬಯಸಿ,—''ಏಕಮ್ಮ, ಇನಿಸೊಂದು ಕೊರಗು?
ಬೇಡಮ್ಮ ಮಕ್ಕಳಲಿ ಇನಿಸೊಂದು ಕಡುಮುನಿಸು—ಬಾರಮ್ಮ, ಹರಸು.
ನಿನ್ನ ನಾಡಿನೊಳದೆಕೊ ಬೆಳಕು ಮೂಡಿಹುದು—ಜೀವ ಕೂಡಿಹುದು.
ನಿನ್ನ ಮಕ್ಕಳು ನಿದ್ದೆಗಳೆದೆದ್ದ ಸಿಂಹದಂತೇಳುತ್ತ, ಮೊಳಗಿ,
ಕಣಕಿಳಿದು ಪಂಪ ನೃಪತುಂಗರಾ ಮಾತುಗಳು ದಿಟವೆನಿಸುತಿಹರು.
ಸೆರೆಯನೊಕ್ಕಡೆಗೊಗೆದು, ಬಿಡುಗಡೆಯ ಕೈಕೊಂಡು, ಹಳ ನೆನಪು ನೆನೆದು.
ಹೊಸ ಕಾಣ್ಕೆಗಳ ಕಂಡು, ಸಾಮ್ರಾಜ್ಯಗಳ ಮತ್ತೆ ಕಟ್ಟುತಿಹರು.
ನಿನ್ನ ನಾಡೊಂದಾಗಿ, ನಿನ್ನ ನುಡಿ ಮೇಲಾಗಿ, ಮನೆ ಮಕ್ಕಳೆಲ್ಲ
ಪೇರೊಕ್ಕಲಾಗಿ ಪಾಡುವರು:
ತಾಯ್ ಬದುಕಿ, ತಾವ್ ಬದುಕಿ, ಹೆರರ ಬದುಕಿಪರು:
ಹಾಳು ಹಂಪೆಯ ನಡುವೆ, ನಡುಕಟ್ಟ ಮತ್ತೊಮ್ಮೆ ಮುಡಿಪಾಗಿ ತಾಯ್ಗೆ
ಭಕ್ತಿಯಲಿ ಜೀವವನು ಸಲಿಸುವರು—ಏಳು!
ಸಡಗರದ ಆ ಕೂಗ ಕೇಳು:

ನಾಡು ಸಿಂಗರವಾಯ್ತು, ಬೀಡು ಹೆಬ್ಬೆಳಕಾಯ್ತು, ಅದೊ ಹಬ್ಬ ಮೆರೆತ!
ಹೆಣ್ಣು ಚೆಲುವನು ನೋಡು—ಗಂಡುಗಲಿಗಳ ನೋಡು—ಕಟ್ಟಾಳುಗಳನು.
ರಾಜರನು, ಋಷಿಗಳನು, ಕವಿಗಳನು, ಧೀರರನು, ಕರ್ಮವೀರರನು—

ಹೊಸತ ಹಳದನು ಮಾಡಿ, ಹಳದ ಹೊಸತನು ಮಾಡಿ, ನಾಡೊಂದು ಮೂಡಿ,
ಧರ್ಮ ಸತ್ಯಗಳಿಂದ, ಪ್ರೇಮ ಶಾಂತಿಗಳಿಂದ, ಸ್ವಾತಂತ್ರ್ಯದಿಂದ,
ಸುಖದಿಂದ, ಸೌಂದರ್ಯದಾನಂದದಿಂದೆಲ್ಲ ಸಮದೃಷ್ಟಿಯಿಂದ
ಬಾಳರೇ ನೀ ಬಂದು ನಲಿಸಿದೊಡೆ, ಹರಸಿದೊಡೆ– ಬಾ ತಾಯಿ, ಹರಸು.
ತೇರೇರು, ಬಾ ತಾಯಿ, ನಿನ್ನ ಸಿಂಹಾಸನವನೇರು ಮತ್ತೊಮ್ಮೆ.
ಪಳಮೆಯಲಿ ಪೇರಾಲವನು ನೀನು ಬಿತ್ತಲದು ಮೊಳೆತು, ಮರವಾಗಿ,
ಪಡುವ ಮೂಡಲು ತೆಂಕ ಬಡಗಲೆಡೆ ಕೊಂಬೆಗಳನೆಸೆದೆಸೆದು ಬೀಗಿ,
ಈ ಕೊಂಬೆ ಕರಗಿದೊಡೆ ಆ ಕೊಂಬೆ ಬಿಳಲಿಳಿದು ಬೇರೂರಿ ತಾಗಿ
ಒಂದೆ ಮರವಮರವಾಗಿರ್ಪಂತೆ, ಅಮರವಾಗಿನ್ನುಮದೆ ಇಹುದು
ನಿನ್ನೊಂದು ಕರ್ನಾಟರತ್ನ ಸಿಂಹಾಸನಂ– ಬಾಳ್ಗೆ, ಅದು ಬೆಳೆಗೆ
ಕನ್ನಡದ ಮುಡಿಯಾಗಿ, ಕನ್ನಡದ ನುಡಿಯಾಗಿ, ಕನ್ನಡದ ಬಾಳ ಕುಡಿಯಾಗಿ!
– ಬಾರಮ್ಮ, ಹರಸು.''

ನಕ್ಕಳಾ ತಾಯಿ.
ಮುದುಕಿ ಎಳೆಯವಳಾಗಿ, ಮಾಸು ಮಿಂಚೆಳೆಯಾಗಿ, ಸವೆದ ಮೈ ತುಂಬಿ,
ಕಡಲ ತೆರೆಗಳನುಟ್ಟು, ಬೆಟ್ಟ ಬಯಲನು ತೊಟ್ಟು, ಅರಿಲ ಮುಡಿಗಿಟ್ಟು.
ಮುಗುಳ್-ನಗೆಯ ನಸುನಕ್ಕಳಾ ತಾಯಿ, ನನ್ನ ತಲೆಯಲಿ ಕಯ್ಯ ತಾವರೆಯ
ನಿಟ್ಟು;

ಸುತ್ತಲುಂ ಕಾಣಿಸಿದರೊಡನೆ–
ಕನ್ನಡದ ಪೊನ್ನಾಡ ಪೆರ್ಮನಡಿಗಳ್!
ಸಾವನೊದೆವಾ ಪಾಲ ಸೂಸು ಕಿಡಿಗಳ್!
ಒಂದೆ ನೀಡಿದ ಸಾಲು, ಮುಂದೆ ನೀಡಿದ ಸಾಲು, ಕನ್ನಡದ ಕರುಳುಗಳು
– ನಡುವೆ, ಸಿರಿ ತಾಯ್

ಭುವನೇಶ್ವರೀದೇವಿ ರಥವನೇರಿದಳು.
ಕೂಗಿದರು ಎಲ್ಲರೂ ಒಕ್ಕೊರಲ್!–
''ತಾಯ್ ಬಿಜಯಮಾಡುವಳು, ದಾರಿ ಬಿಡಿ, ದಾರಿ ಬಿಡಿ, ಅಡ್ಡ ಬಾರದಿರಿ.
ಭಾರತಾಂಬೆಯ ಹಿರಿಯ ಹೆಣ್ಮಗಳೆ, ದಾರಿ ತೋರುವ ಹಿರಿಯ ಸೊಡರೆ
ಬಾಳಮ್ಮ, ಬಾಳು!
ನೀನ್ ಬಾಳೆ, ಏನ್ ಬಾಳು ನಿನ್ನ ಮಕ್ಕಳದು!– ಬಾನ್‌ಬಾಳು, ತಾಯೆ–
ಬಾಳಮ್ಮ, ಬಾಳು!''

೭

ಚೆಲುವೆಯರ, ಚೆನ್ನಿಗರ, ಹಿರಿಯ ತಾಯ್‌ಮಕ್ಕಳಿರ, ಒಡಹುಟ್ಟಿದವರಾ,
ಒಸಗೆನುಡಿ ಕೇಳಿದಿರ, ತಾಳಿದಿರ ಎದೆಯಲ್ಲಿ, ತಾಳಿ ಬಾಳುವಿರಾ,
ನಾಡು ನುಡಿ ನಡೆಗಳನು ಮನ್ನಡಗೆ ನಡಸುತ್ತ, ಮುಂದೆ ಸಾಗುವಿರಾ?
ಭಾರತದ, ಲೋಕದಾ ಮಕ್ಕಳಲಿ ಹಿರಿದಾಗಿ ತೂಕ ತೂಗುವಿರಾ?
ಬನ್ನಿ, ಓ ಮಕ್ಕಳಿರ,
ಒಕ್ಕೊರಲಲೆಲ್ಲರೂ ಕೂಗಿ ಈ ಒಕ್ಕೂಗ – ಈ ಹಿರಿಯ ಕೂಗ –
"ಸಿರಿಗನ್ನಡಂ ಗೆಲ್ಗೆ, ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ –
ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ."

ಶ್ರೀ

ಕವಿಗಳ ಅಕಾರಾದಿ

೧ ಅಂಬಿಕಾತನಯದತ್ತ (ದ. ರಾ. ಬೇಂದ್ರೆ) ೯೬, ೧೨೫, ೧೩೪
೨ ಅಯ್ಯಶಾಸ್ತ್ರಿ ೬೮
೩ ಆಂಡಯ್ಯ ೧೮, ೨೧
೪ ಆನಂದಕಂದ (ಕೃಷ್ಣಶರ್ಮ ಬೆಟಗೇರಿ) ೮೯, ೯೭
೫ ಕನಕದಾಸ ೫೯
೬ ಕವಿಶಿಷ್ಯ (ಪಂಜೆ ಮಂಗೇಶ ರಾವ್) ೧೦೫, ೧೦೬, ೧೦೮
೭ ಕಾಮತ್, ಎಂ. ಎನ್. ೯೫
೮ ಕುಮಾರವ್ಯಾಸ (ನಾರಣಪ್ಪ) ೨೮
ಕೃಷ್ಣಶರ್ಮ ಬೆಟಗೇರಿ (ಆನಂದಕಂದ)
೯ ಕೇಶಿರಾಜ ೨೧
೧೦ ಗುಂಡಪ್ಪ, ಡಿ. ವಿ. ೧೧೨, ೧೩೬, ೧೩೮
೧೧ ಗೋಕಾಕ್, ವಿ. ಕೆ. (ವಿನಾಯಕ) ೯೯
೧೨ ಗೋವಿಂದ ಪೈ, ಮಂ. ೯೩
೧೩ ಚಾಮರಸ ೨೫, ೫೨
೧೪ ಚಿಕದೇವರಾಜ ೬೨
೧೫ ಜನ್ನ ೨೪
೧೬ ದಿನಕರ ದೇಸಾಯಿ ೧೨೭
೧೭ ನಯಸೇನ ೨೧, ೨೪
೧೮ ನರಸಿಂಹಾಚಾರ್, ಪು. ತಿ. ೧೪೫
೧೯ ನಾಗಚಂದ್ರ ೩೨
ನಾರಣಪ್ಪ (ಕುಮಾರವ್ಯಾಸ)
೨೦ ನೃಪತುಂಗ ೧೭, ೨೩
೨೧ ನೇಮಿಚಂದ್ರ ೨೪
೨೨ ಪಂಪ ೧೭, ೨೩, ೩೧
೨೩ ಪುಟ್ಟಪ್ಪ, ಕೆ. ವಿ. ೧೧೩, ೧೨೧, ೧೩೫, ೧೪೪
೨೪ ಪುರಂದರದಾಸ ೫೪
೨೫ ಪ್ರಾಣೇಶಾಚಾರ್ಯ, ಜಿ. ಕೆ. ೪೪
೨೬ ಬಸವಣ್ಣ ೩೪
ಬೇಂದ್ರೆ, ದ. ರಾ. (ಅಂಬಿಕಾತನಯದತ್ತ)
೨೭ ಬೊಪ್ಪಣ ೩೩
೨೮ ಭೀಮಸೇನರಾವ್, ಡಿ. ಕೆ. ೧೦೧
ಮಂಗೇಶರಾವ್ ಪಂಜೆ (ಕವಿಶಿಷ್ಯ)
೨೯ ಮಹಲಿಂಗರಂಗ ೨೨
೩೦ ಮಹಾದೇವಿಯಕ್ಕ ೪೬
೩೧ ಮುದ್ದಣ (ನಂದಳಿಕೆ ಲಕ್ಷ್ಮೀ ನಾರಣಪ್ಪ) ೨೧
೩೨ ರಂಗನಾಥ ಶ್ರೀನಿವಾಸ ಮುಗಳಿ ೧೨೪
೩೩ ರತ್ನ (ಜಿ. ಪಿ. ರಾಜರತ್ನಂ) ೯೦, ೧೦೪, ೧೧೯
೩೪ ರತ್ನಾಕರ ೨೦, ೩೦, ೩೬
೩೫ ರನ್ನ ೨೩, ೨೭, ೩೫
೩೬ ರಾಘವಾಂಕ ೨೫
ರಾಜರತ್ನಂ, ಜಿ.ಪಿ. (ರತ್ನ)
೩೭ ರಾಮಚಂದ್ರರಾಯ, ಸಾಲಿ ೧೦೨
ಲಕ್ಷ್ಮಣರಾವ್, ಎ. (ಹೊಯಿಸಳ)
ಲಕ್ಷ್ಮೀನಾರಣಪ್ಪ ನಂದಳಿಕೆ (ಮುದ್ದಣ)
೩೮ ಲಕ್ಷ್ಮೀಶ ೨೯
ವಿನಾಯಕ (ಗೋಕಾಕ್, ವಿ. ಕೆ.)
೩೯ ವಿರೂಪಾಕ್ಷ ೧೯
೪೦ ವಿ. ಸೀ. (ವಿ. ಸೀತಾರಾಮಯ್ಯ) ೧೧೭, ೧೪೦, ೧೪೧, ೧೪೩
ವೆಂಕಟೇಶ ಐಯಂಗಾರ್, ಮಾಸ್ತಿ (ಶ್ರೀನಿವಾಸ)
೪೧ ಶಂಕರಭಟ್ಟ, ಕಡಂಗೋಡ್ಲು ೧೦೦
೪೨ ಶಾಂತಕವಿ ೯೨, ೧೨೬
೪೩ ಶ್ರೀ (ಶ್ರೀಕಂಠಯ್ಯ, ಬಿ.ಎಂ.) ix, ೬೩, ೬೬, ೧೨೯, ೧೪೭
೪೪ ಶ್ರೀಕಂಠಯ್ಯ, ತೀ. ನಂ. ೬೪, ೯೧
೪೫ ಶ್ರೀನಿವಾಸ (ಮಾಸ್ತಿ ವೆಂಕಟೇಶ ಐಯಂಗಾರ್) ೧೧೯, ೧೧೧, ೧೨೩, ೧೩೯
೪೬ ಶ್ರೀವಾಸ ೬೭
೪೭ ಷಡಕ್ಷರಿ ೨೮, ೫೨
೪೮ ಸರ್ವಜ್ಞ ೨೦, ೨೬
ಸೀತಾರಾಮಯ್ಯ, ವಿ. (ವಿ. ಸೀ.)
೪೯ ಹನುಮಂತ ಗೋವಿಂದ ಸೆಟ್ಟಿ ೮೯
೫೦ ಹರಿಹರ ೨೪, ೪೩, ೪೫, ೪೯
೫೧ ಹುಯಿಲಗೋಳ ನಾರಾಯಣ ರಾವ್ ೯೭
೫೨ ಹೊನ್ನಮ್ಮ ೬೬
೫೩ ಹೊಯಿಸಳ (ಎ. ಲಕ್ಷ್ಮಣ ರಾವ್) ೧೨೪

ಕಾವ್ಯಗಳ ಅಕಾರಾದಿ

೧ ಅಜಿತನಾಥಪುರಾಣ ೨೩, ೨೭, ೩೫
೨ ಅನಂತನಾಥಪುರಾಣ ೨೪
೩ ಅನುಭವಾಮೃತ ೨೨
೪ ಆದಿಪುರಾಣ (ಪಂಪ) ೨೩, ೩೧
೫ ಕನಕದಾಸರ ಪದಗಳು ೫೯
೬ ಕಬ್ಬಿಗರ ಕಾವ ೧೪, ೨೧
೭ ಕವಿರಾಜಮಾರ್ಗ ೧೭, ೨೩
೮ ಗದಾಯುದ್ಧ (ಸಾಹಸ ಭೀಮ ವಿಜಯ) ೨೭
೯ ಗದುಗಿನ ಭಾರತ ೨೪
೧೦ ಗರತಿ ಹಾಡುಗಳು ೭೩
೧೧ ಗಿರಿಜಾಕಲ್ಯಾಣ ೨೪
೧೨ ಗೀತಗೋಪಾಲ ೬೩
೧೩ ಗೊಮ್ಮಟನ ಸ್ತುತಿ ೭೩
೧೪ ಗೋವಿನ ಹಾಡು ೭೪
೧೫ ಚಿಕದೇವರಾಜ ಬಿನ್ನಪ ೬೨
೧೬ ಚೆನ್ನಬಸವಪುರಾಣ ೧೯
೧೭ ಜೈಮಿನಿ ಭಾರತ ೨೯
೧೮ ಧರ್ಮಾಮೃತ ೨೧, ೨೪
೧೯ ನೇಮಿನಾಥಪುರಾಣ ೨೪
೨೦ ಪಂಪ ಭಾರತ (ವಿಕ್ರಮಾರ್ಜುನ ವಿಜಯ) ೧೭, ೧೪, ೨೩
೨೧ ಪಂಪ ರಾಮಾಯಣ (ರಾಮಚಂದ್ರ ಚರಿತ ಪುರಾಣ) ೪೨
೨೨ ಪಂಪಾ ಶತಕ ೪೯
೨೩ ಪುರಂದರದಾಸರ ಪದಗಳು ೫೪
೨೪ ಪ್ರಭುಲಿಂಗಲೀಲೆ ೨೫, ೫೨
೨೫ ಬಸವಣ್ಣನವರ ವಚನಗಳು ೩೮
೨೬ ಬಸವರಾಜದೇವ ರಗಳೆ ೪೩, ೪೫
೨೭ ಭರತೇಶ ವೈಭವ ೨೦, ೩೦, ೩೬
೨೮ ಮಹೀಶೂರ ಮಹಾರಾಜ ಚರಿತ್ರಂ ೬೮
೨೯ ಮಹಾದೇವಿಯಕ್ಕನ ವಚನಗಳು ೪೬
೩೦ ಮಾನವಮಿಯ ಪದ ೭೮
೩೧ ರಾಜಶೇಖರವಿಳಾಸ ೨೮, ೫೨
ರಾಮಚಂದ್ರ ಚರಿತ ಪುರಾಣ (ಪಂಪ ರಾಮಾಯಣ)
೩೨ ರಾಮಾಶ್ವಮೇಧ ೨೧
ವಿಕ್ರಮಾರ್ಜುನ ವಿಜಯ (ಪಂಪ ಭಾರತ)
೩೩ ಶಬ್ದಮಣಿದರ್ಪಣ ೨೧
೩೪ ಶಾಸನಗಳು ೩
೩೫ ಶ್ರೀ ಕೃಷ್ಣರಾಜ ವರ್ಷವರ್ಧಂತೀ ಶತಕ ೬೭
೩೬ ಸರ್ವಜ್ಞ ವಚನಗಳು ೨೦, ೨೬
ಸಾಹಸಭೀಮ ವಿಜಯ (ಗದಾ ಯುದ್ಧ)
೩೭ ಹದಿಬದೆಯ ಧರ್ಮ ೬೬
೩೮ ಹರಿಶ್ಚಂದ್ರ ಕಾವ್ಯ ೨೫

ಹೊಸ ಕವಿತೆಗಳ ಅಕಾರಾದಿ

೧	ಅಭೀಃ	೧೪೩	೨೫	ತುಳುನಾಡ ರಾಣಿ	೯೫
೨	ಅರುಣೋದಯ	೯೭	೨೬	ತೆಂಕಣ ಗಾಳಿಯಾಟ	೧೦೬
೩	ಉದಯವಾಗಲಿ ನಮ್ಮ ಚೆಲುವು ಕನ್ನಡನಾಡು	೯೭	೨೭	ತೆಂಗಾಳಿ	೧೩೯
೪	ಎಂಥ ನಾಡಿದು	೧೨೪	೨೮	ನವೀನ	೧೪೪
೫	ಕನಸಿನೊಳಗೊಂದು ಕಣಸು	೧೩೪	೨೯	ನಾಡಿನ ಹಾಡು	೯೯
೬	ಕನ್ನಡ	೪೯	೩೦	ಬೇಲೂರಿನ ಶಿಲಾ ಬಾಲಿಕೆಯರು	೧೩೬
೭	ಕನ್ನಡತಾಯಿ ನೋಟ	೧೪೭	೩೧	ಭಾರತ ತಪಸ್ವಿನಿ	೧೩೫
೮	ಕನ್ನಡದ ಬಾವುಟ	ix	೩೨	ಮಡಿಕೇರೀಲಿ ಮಂಜು	೧೦೪
೯	ಕನ್ನಡ ದಾಸಯ್ಯ	೧೨೬	೩೩	ಮಡಿಕೇರೀಲಿ ರತ್ನ	೧೦೯
೧೦	ಕನ್ನಡನಾಡ ರಾಣಿ	೯೬	೩೪	ಮೈಸೂರು ಮಕ್ಕಳು	೪೬
೧೧	ಕನ್ನಡನಾಡಿನ ಸ್ಥಿತಿ ಯನ್ನು ನೆನೆದು	೧೨೩	೩೫	ಯುಗಾದಿಯ ಹಾಡು	೧೪೫
೧೨	ಕನ್ನಡಸುಡಿ	೪೯	೩೬	ರಕ್ಷಿಸು ಕರ್ನಾಟಕ ದೇವಿ	೯೨
೧೩	ಕನ್ನಡಿಗನ ಕೊರಗು	೯೧	೩೭	ಲಲಿತಾದ್ರಿ	೧೧೩
೧೪	ಕನ್ನಡಿಗರ ತಾಯಿ	೯೩	೩೮	ಲಾಲ್‌ಬಾಗ್	೧೧೭
೧೫	ಕನ್ನಡ್ ಪದಗೊಳು	೯೦	೩೯	ವನಸುಮ	೧೩೮
೧೬	ಕಸ್ಮೈ ದೇವಾಯ	೧೪೦	೪೦	ಶಿವನಸಮುದ್ರ	೧೧೨
೧೭	ಕಾಣಿಕೆ	೪೩	೪೧	ಶ್ರೀ ಕೃಷ್ಣರಾಜ ರಜತ ಮಹೋತ್ಸವ ಪ್ರಗಾಥ	೧೨೯
೧೮	ಕಾರ್ಗಾಲದ ವೈಭವ	೧೦೦	೪೨	ಸ್ವಾಗತ ಗೀತ	೪೪
೧೯	ಕುಮಾರವ್ಯಾಸ	೧೨೧	೪೩	ಸ್ವಾಗತ (ಹೈದರಾಬಾದಿಗೆ)	೪೫
೨೦	ಕೊಡಗು	೧೦೨	೪೪	ಹಂಪೀ-ವಿಜಯನಗರ ದರ್ಶನ	೧೨೫
೨೧	ಕೊಂಬು	೧೦೯	೪೫	ಹಂಪೆಗೆ	೧೩೪
೨೨	ಕೋಗಿಲೆ (ವಿ. ಸೀ.)	೧೪೧	೪೬	ಹಾವಿನ ಹಾಡು	೧೦೪
೨೩	ಕೋಗಿಲೆ (ಶ್ರೀನಿವಾಸ)	೧೧೧	೪೭	ಹುತ್ತರಿ ಹಾಡು	೧೦೫
೨೪	ತರುಣರ ದಸರೆ	೧೨೭	೪೮	ಹೈದರಾಬಾದು	೧೦೧

572—38.—ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರಾದ
ಜಿ. ಶ್ರೀನಿವಾಸರಾಯರವರು ಮುದ್ರಿಸಿರುವರು